ಸಂಪುಟ: ೦೭/ ಸಂಚಿಕೆ: ೦೯/ಮಂಗಳವಾರ ದಿನಾಂಕ : ೧೮-೦೨-೨೦೨೫/ ಪುಟ: ೬/ ಬೆಲೆ ೨-೦೦

ಸತ್ಯಕ್ಕೆ ಕಿರಣ ಸುಳ್ಳಿಗೆ ಕಿಡಿ

ಕಛೇರಿ ದೂರವಾಣಿ ಸಂಖ್ಯೆ 0831-3564491

# ಬೆಳಗಿನ ಸೂರ್ಯೋದಯ

ಕನ್ನಡ ಪ್ರಾದೇಶಿಕ ದಿನಪತ್ರಿಕೆ

ಬೆಳಗಾವಿ ■ ಧಾರವಾಡ ■ ಬಾಗಲಕೋಟ ■ ವಿಜಯಪುರ ■ ಗದಗ ■ ಕೊಪ್ಪಳ ■ ಹಾವೇರಿ ■ ಕಾರವಾರ

ಸಂಪಾದಕರು : ಗುರುರಾಜ ಈರಪ್ಪಾ. ಕದಮ, Editor : GURURAJ IRAPPA. KADAM Cell : 9620099959

Volume : 07/ ISSUE : 09/ TUESDAY Date : 18-02-2025/ RNI No. KARKAN/2019/77640/ Postal Reg No. PMG/KA/NK/BM/135/2025-27 / POST AT Vantamury Colony Post Office / email : belaginasuryodaya@gmail.com / Page : 6 / Rs. 2.00

## ಮಾ. 7ರಂದು ರಾಜ್ಯ ಬಜೆಟ್ ಮಂಡನೆ: ಮುಖ್ಯಮಂತ್ರಿ

ಬೆಂಗಳೂರು: "2025–26ನೇ ಸಾಲಿನ ಬಜೆಟ್‌ನ್ನು ಮಾರ್ಚ್ 7ರಂದು ಮಂಡನೆ ಮಾಡಲಿದ್ದೇನೆ. ಎಷ್ಟು ದಿನ ಸದನ ನಡೆಸಬೇಕು ಅಂತ ಕಾರ್ಯಕಲಾಪ ಸಲಹಾ ಸಮಿತಿ ಸಭೆಯಲ್ಲಿ ಚರ್ಚೆ ಮಾಡುತ್ತೇವೆ" ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ವಿಧಾನಸೌಧದಲ್ಲಿ ಮಾತನಾಡಿದ ಅವರು, "ವಿಧಾನಮಂಡಲ ಜಂಟಿ ಅಧಿವೇಶನ ಮಾರ್ಚ್ 3ನೇ ತಾರೀಖಿನಿಂದ ಶುರುವಾಗುತ್ತದೆ. ಹೊಸ ವರ್ಷದ ಮೊದಲನೇ ಅಧಿವೇಶನ ಆಗಿರುವುದರಿಂದ ಮಾ. 3ರಂದು ರಾಜ್ಯಪಾಲರು ಭಾಷಣ ಮಾಡಲಿದ್ದಾರೆ. ಅದರ ಮೇಲೆ ಚರ್ಚೆ ಆಗುತ್ತದೆ. 2025–26ನೇ ಸಾಲಿನ ಬಜೆಟ್?ನ್ನು ಮಾ.7 ರಂದು ಶುಕ್ರವಾರ ಮಂಡಿಸುತ್ತೇವೆ" ಎಂದರು.

"ಕಳೆದ ಅನೇಕ ದಿನಗಳಿಂದ ಬೇರೆ ಬೇರೆ ಇಲಾಖೆ ಜೊತೆ ಸಭೆ ಮಾಡಿದ್ದೇನೆ. ನನಗೆ ಅನಾರೋಗ್ಯ ಇದ್ದರೂ ಸಭೆ ಮಾಡಿದ್ದೇನೆ. ಇವತ್ತು ಕೂಡ ಸಭೆ ನಡೆಸಿದ್ದೇನೆ. ರೈತ ಮುಖಂಡರು ತಮ್ಮ ಅಭಿವೃದ್ಧಿ ಮುಂದಿಟ್ಟಿದ್ದಾರೆ. ಕರ್ನಾಟಕ ಸರ್ಕಾರ ಯಾವಾಗಲೂ ರೈತರ ಹಿತ ಕಾಪಾಡಲು ಹಿಂದೆ ಬಿದ್ದಿಲ್ಲ. ಯಾವತ್ತೂ ಕೂಡ ರೈತರ ಜೊತೆ ಇರುತ್ತೇವೆ. ಕೃಷಿಕರ ಜೊತೆ ಇರುತ್ತೇವೆ ಎಂಬ ಮಾತು ಕೊಡುತ್ತೇವೆ" ಎಂದು ಹೇಳಿದರು.

ಬೆಲೆ ಏರಿಕೆ ಜಾಸ್ತಿ ಆಗುತ್ತಿದೆ ಎಂಬ ವಿಚಾರವಾಗಿ ಪ್ರತಿಕ್ರಿಯಿಸುತ್ತ, "ಬೆಲೆ ಏರಿಕೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ನಿರ್ಧಾರ. ರಾಜ್ಯ ಸರ್ಕಾರದಿಂದ ಬೆಲೆ ಇಳಿಕೆಗೆ ಏನೆಲ್ಲಾ ಮಾಡಬೇಕೋ ಅದನ್ನು ಮಾಡುತ್ತೇವೆ, ಅವರೂ ಮಾಡಬೇಕು" ಎಂದು ತಿಳಿಸಿದರು.



ಕೇಂದ್ರದ ಪಾಲು ಕೊಡುತ್ತಿಲ್ಲ : ಜನಜೀವನ ಮಿಷಿನ್ ಯೋಜನೆ ಕುರಿತು ವಾಗ್ವಾದ ವಿಚಾರವಾಗಿ ಪ್ರತಿಕ್ರಿಯಿಸುತ್ತಾ, "ಚರ್ಚೆ ಎಲ್ಲಾ ಮಾಡಿದ್ದೇನೆ. ನಮ್ಮ ವೇಗಕ್ಕೆ ಅನುಗುಣವಾಗಿ ಅವರು ಮಾಡುತ್ತಿಲ್ಲ. ಕೇಂದ್ರದ ಪಾಲನ್ನು ಅವರು ಕೊಡುತ್ತಿಲ್ಲ. ಹಾಗಾಗಿ, ನಾವು ಅದರ ಬಗ್ಗೆ ಟ್ವೀಟ್ ಮಾಡಿದ್ದೇವೆ. ಮೆಟ್ರೋ ರೈಲಿನ ದರ ನಿಗದಿ ಮಾಡಲು ಕೇಂದ್ರ ಸರ್ಕಾರ ಕಮಿಟಿ ಮಾಡಿದ್ದಾರೆ. ಅದರಲ್ಲಿ ಇಬ್ಬರು ಕೇಂದ್ರದ ಅಧಿಕಾರಿಗಳು, ಒಬ್ಬರು ರಾಜ್ಯ ಸರ್ಕಾರದವರು ಇರುತ್ತಾರೆ. ಅದು ಅಟಾನಮಸ್ ಬಾಡಿ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸೇರಿ ಮಾಡಿರುವುದು. ಬೆಲೆ ನಿಗದಿ ಮಾಡಲು ನಾವು ಪ್ರಸ್ತಾವನೆ ಕೊಡುತ್ತೇವೆ. ಆದರೆ ಬೆಲೆ ನಿಗದಿ ಮಾಡುವುದು ಕಮಿಟಿಯವರು" ಎಂದರು.

**ಕೂಡಲೇ ಹಣ ಬಿಡುಗಡೆ :** ಅನ್ನಭಾಗ್ಯ, ಗೃಹಲಕ್ಷ್ಮೀ ಯೋಜನೆಯ ಹಣ ಬಿಡುಗಡೆ ಆಗಿಲ್ಲ ಎಂಬ ಆರೋಪ ವಿಚಾರವಾಗಿ ಮಾತನಾಡಿ, "ಆಗಿಲ್ಲ ಅಂತ ಯಾರು ಹೇಳಿದ್ದು? ನೋಡಪ್ಪ, ಯಾವುದನ್ನು ಕೂಡ ನಿಲ್ಲಿಸುವ ಪ್ರಶ್ನೆ ಇಲ್ಲ. ಇಲ್ಲಿಯವರೆಗೆ ಮಾಡಿದ್ದೇವೆ ಅಂದರೆ ಮುಂದೆಯೂ ಮಾಡುತ್ತೇವೆ. ಮೂರು ತಿಂಗಳಿಂದ ಪೆಂಡಿಂಗ್ ಇರುವುದು ನನಗೆ ಗೊತ್ತಿಲ್ಲ, ಕೂಡಲೇ ಬಿಡುಗಡೆ ಮಾಡುತ್ತೇವೆ" ಎಂದು ಸಿಎಂ ಹೇಳಿದರು.

ಅನಾರೋಗ್ಯ ವಿಚಾರವಾಗಿ ಪ್ರತಿಕ್ರಿಯಿಸುತ್ತಾ, "ಆರೋಗ್ಯ ಸುಧಾರಣೆ ಆಗುತ್ತಿದೆ, ನೋವು ಕಡಿಮೆಯಾಗುತ್ತಿದೆ. ಒತ್ತಡ ಆಗಿರುವುದರಿಂದ ನೋವಿದೆ" ಎಂದರು.

ನಾಯಕತ್ವ ಬದಲಾವಣೆ ಹೇಳಿಕೆಗಳ ವಿಚಾರವಾಗಿ ಮಾತನಾಡಿದ ಸಿಎಂ, "ಹೈಕಮಾಂಡ್ ನಿರ್ಧಾರವೇ ಅಂತಿಮ" ಎಂದು ಸ್ಪಷ್ಟಪಡಿಸಿದರು.

## ರಾಜ್ಯದಲ್ಲಿ ಶಾಲೆಗಳ ಬಳಿ ಇರುವ ಮದ್ಯದಂಗಡಿಗಳು ಮುಚ್ಚಲು ಶಿಕ್ಷಣ ಇಲಾಖೆ ಕ್ರಮ

ಬೆಂಗಳೂರು: ಶಿಕ್ಷಣ ಸಂಸ್ಥೆಗಳ ಬಳಿ ಮದ್ಯದಂಗಡಿಗಳಿದ್ದು, ವಿದ್ಯಾರ್ಥಿಗಳ ವಿದ್ಯಾಭ್ಯಾಸ ಹಾಗೂ ನಿರ್ವಹಣೆಗೆ ತೊಂದರೆಯುಂಟಾಗುತ್ತಿದ್ದಲ್ಲಿ ಸಂಬಂಧಪಟ್ಟ ಶೈಕ್ಷಣಿಕ ಸಂಸ್ಥೆಗಳು ಅಬಕಾರಿ ಇಲಾಖೆಗೆ ದೂರು ಸಲ್ಲಿಸುವಂತೆ ಪ್ರೌಢ ಶಿಕ್ಷಣ ನಿರ್ದೇಶಕರು ಎಲ್ಲ ಜಿಲ್ಲಾ ಉಪ ನಿರ್ದೇಶಕರಿಗೆ ಸೂಚನೆ ನೀಡಿದ್ದಾರೆ.

ಶಾಲೆಗಳು/ಕಾಲೇಜುಗಳ ಬಳಿ ಯಾವುದೇ ಮದ್ಯದಂಗಡಿಗಳಿದ್ದು ಅವು ಶಿಕ್ಷಣ ಮತ್ತು ನಿರ್ವಹಣೆಯಲ್ಲಿ ಸಮಸ್ಯೆಗಳನ್ನು ಉಂಟುಮಾಡಿದರೆ, ಸಂಬಂಧಪಟ್ಟ ಶಿಕ್ಷಣ ಸಂಸ್ಥೆಗಳಿಗೆ ಅಬಕಾರಿ ಇಲಾಖೆಗೆ ದೂರು ಸಲ್ಲಿಸಲು ತಿಳಿಸಲಾಗಿದೆ ಮತ್ತು ಅಬಕಾರಿ ಇಲಾಖೆಯು ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುತ್ತದೆ ಎಂದು ತಿಳಿಸಿದೆ.

ಸಾರ್ವಜನಿಕರು, ಶಾಲಾ ಮಕ್ಕಳು ಹಾಗೂ ಪಾಲಕರಲ್ಲಿ ವ್ಯಸನ ಮುಕ್ತಗೊಳಿಸುವ ಬಗ್ಗೆ ಜಾಗೃತಿ ಮೂಡಿಸಲು ಉಚ್ಚ ನ್ಯಾಯಾಲಯದ ಬಾಲ ನ್ಯಾಯ ಸಮಿತಿ ಸಭೆಯಲ್ಲಿ ಚರ್ಚಿಸಿರುವ ವಿಷಯಗಳ ಕುರಿತು ಜಾಗೃತಿ ಮೂಡಿಸಲು ಕ್ರಿಯಾ ಯೋಜನೆ ರೂಪಿಸಲು ಸಮನ್ವಯ ಸಾಧಿಸುವಂತೆ ತಿಳಿಸಲಾಗಿದೆ.

ಸಾರ್ವಜನಿಕರು, ಶಾಲಾ ಮಕ್ಕಳು ಮತ್ತು ಪೋಷಕರಲ್ಲಿ ವ್ಯಸನದ ಬಗ್ಗೆ ಜಾಗೃತಿ ಮೂಡಿಸಲು ಕ್ರಿಯಾ ಯೋಜನೆಯನ್ನು ರೂಪಿಸಲು ಶಿಕ್ಷಣ



ಇಲಾಖೆಯು ಕರ್ನಾಟಕ ರಾಜ್ಯ ಮಾನಸಿಕ ಆರೋಗ್ಯ ಪ್ರಾಧಿಕಾರ, ಮಾದಕ ದ್ರವ್ಯ ನಿಯಂತ್ರಣ ಬ್ಯೂರೋ ಮತ್ತು ಅಬಕಾರಿ ಇಲಾಖೆ ಆಯುಕ್ತರೊಂದಿಗೆ ಸಮನ್ವಯ ಸಾಧಿಸಬೇಕು ಎಂದು ಸೂಚಿಸಿದೆ.

ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಚಿತ್ರದುರ್ಗ ಮಂಜುನಾಥ್ ಮಾತನಾಡಿ, ಚಿತ್ರದುರ್ಗ ಜಿಲ್ಲೆಯ ಎಲ್ಲಾ ಶಾಲೆಗಳಲ್ಲಿ ಮದ್ಯದಂಗಡಿಗಳು ಅಥವಾ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುವ ಅಂಗಡಿಗಳ ಉಪಸ್ಥಿತಿಯ ಬಗ್ಗೆ ಅಬಕಾರಿ ಇಲಾಖೆಗೆ ಮತ್ತು ಸ್ವತಃ ವರದಿ ಮಾಡಲು ನಾವು ನಿರ್ದೇಶಿಸಿದ್ದೇವೆ, ಇದರಿಂದ ಸಮಸ್ಯೆ ಬಗೆಹ–ರಿಯುತ್ತದೆ ಎಂದು ಹೇಳಿದರು.

## ಕಳೆದೊಂದು ವರ್ಷದಲ್ಲಿ ರಾಜ್ಯದಲ್ಲಿ 22,445 ಸೈಬರ್ ವಂಚನೆ ಪ್ರಕರಣ ದಾಖಲು

ಬೆಂಗಳೂರು, ಫೆ.17–ರಾಜ್ಯದಲ್ಲಿ ಕಳೆದ ಒಂದು ವರ್ಷದಲ್ಲಿ ಒಟ್ಟು 22,445 ಸೈಬರ್ ವಂಚನೆ ಪ್ರಕರಣಗಳು ದಾಖಲಾಗಿವೆ. 2024ರಲ್ಲಿ ಆನ್ ಲೈನ್ ಮೂಲಕ ಒಟ್ಟು 298 ಕೋಟಿ ರೂಪಾಯಿ ಹಣವನ್ನು ಜನರು ಕಳೆದುಕೊಂಡಿದ್ದಾರೆ ಎಂದು ಎನ್.ಸಿ.ಆರ್.ಪಿ. ಅಂಕಿ–ಅಂಶದಿಂದ ತಿಳಿದು ಬಂದಿದೆ. ಈ ನಡುವೆ 2024ರಲ್ಲಿ ದೇಶಾದ್ಯಂತ ಒಟ್ಟು 7,79,435 ಸೈಬರ್ ವಂಚನೆ ಪ್ರಕರಣಗಳು ದಾಖಲಾಗಿವೆ. ಅದರಲ್ಲಿ ಒಟ್ಟು 22,445 ಪ್ರಕರಣಗಳು ಕರ್ನಾಟಕದಲ್ಲಿ ನಡೆದಿದೆ.

ಇದರಲ್ಲಿ 8677 ಆರೋಪಿಗಳು ಪತ್ತೆಯಾಗಿದ್ದರೂ ಕೇವಲ 643 ವಂಚಕರು ಮಾತ್ರ ಪೊಲೀಸ್ ಬಲೆಗೆ ಬಿದ್ದಿದ್ದಾರೆ. ಸೈಬರ್ ಕಳ್ಳರನ್ನು ಪತ್ತೆ ಹಚ್ಚುವುದೇ ದೊಡ್ಡ ಸವಾಲಿನ ಕೆಲಸವಾಗಿದೆ. ಕೇವಲ ದೇಶದ ನಾನಾ ಕಡೆಗಳಲ್ಲಿ ಅಷ್ಟೇ ಅಲ್ಲದೇ ದುಬೈ, ಕಾಂಬೋಡಿಯಾ, ಥೈಲ್ಯಾಂಡ್, ಲಾವೋಸ್, ಮ್ಯಾನ್ಮಾರ್ ಹಾಂಗ್‌ಕಾಂಗ್, ಚೀನಾ ಮೂಲದ ಸೈಬರ್ ಅಪರಾಧಿಗಳು ಇದ್ದಾರೆ ಎಂಬುದು ಆತಂಕಕಾರಿ ವಿಷಯ.

ಹೀಗಾಗಿ ಜನ ಈ ವಿಷಯದಲ್ಲಿ ಜಾಗೃತ ಆಗಬೇಕು ಎಂದು ಪೊಲೀಸ್ ಅಧಿಕಾರಿಗಳು ಮನವಿ ಮಾಡಿಕೊಂಡಿದ್ದಾರೆ. ಇನ್ನು, ಸೈಬರ್ ಅಪರಾಧಗಳಲ್ಲಿ ಡಿಜಿಟಲ್ ಅರೆಸ್ಟ್‌ನಿಂದ ಹಿಡಿದು ನಿಮಗೆ ಬಹುಮಾನ ಬಂದಿದೆ ಅಂತ, ಬಂಪರ್ ಆಫರ್ ಇದೆ ಅಂತ ವಂಚಿಸುವುದು ಸಾಮಾನ್ಯವಾಗಿದೆ.

ಡಿಜಿಟಲ್ ಅರೆಸ್ಟ್ ಬಗ್ಗೆ ಇತ್ತೀಚೆಗೆ ಪ್ರಧಾನಿ ನರೇಂದ್ರ ಮೋದಿಯವರೇ ತಮ್ಮ ಮನ್ ಕಿ ಬಾತ್‌ನಲ್ಲಿ ಪ್ರಸ್ತಾಪಿಸಿ, ಜನರು ಜಾಗೃತರಾಗಿ ಇರುವಂತೆ ವಿನಂತಿಸಿಕೊಂಡಿದ್ದರು. ಮಾತ್ರವಲ್ಲ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಈ ಸೈಬರ್ ವಂಚಕರ ಬಗ್ಗೆ ಜಾಗೃತಿಯ ಜಾಹೀರಾತುಗಳು ಬರುತ್ತಲೇ ಇವೆ. ಆದರೂ, ಈ ಸೈಬರ್ ಕಳ್ಳರ ಮಾತಿಗೆ ಮರುಳಾಗಿ ಜನ ಹಣ ಕಳೆದುಕೊಳ್ಳುವುದು ಮಾತ್ರ ನಿಲ್ಲುತ್ತಿಲ್ಲ ಎಂದು ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ.

ಅದರಲ್ಲಿಯೂ ನಗರ ಪ್ರದೇಶದ ಸುಶಿಕ್ಷಿತರು, ನೌಕರರೇ ಈ ಸೈಬರ್ ಕಳ್ಳರ ಜಾಲಕ್ಕೆ ಮರುಳಾಗುತ್ತಿರುವುದು ವಿಪರ್ಯಾಸವೇ ಸರಿ. ಹೀಗಾಗಿ, ಯಾರೇ ಸೈಬರ್ ಕಳ್ಳರು ಕರೆ ಮಾಡಿದರೂ ಜಾಣ–ತನ ತೋರಿಸಬೇಕು ಎಂದು ಪೊಲೀಸ್ ಅಧಿಕಾರಿಗಳು ಸಲಹೆಗಳನ್ನು ನೀಡಿದರು. ಸೈಬರ್ ಕಳ್ಳರ ಬಗ್ಗೆ ಹೆಚ್ಚು ಜಾಗೃತಿವಹಿಸಬೇಕಾದ ಅಗತ್ಯವಿದೆ ಎಂದು ಜನರನ್ನು ಎಚ್ಚರಿಸಿದ್ದಾರೆ.

## ನಮ್ಮ ಮೆಟ್ರೋಗೂ ಕೇಂದ್ರ ಸರ್ಕಾರ ಸಬ್ಸಿಡಿ ನೀಡಲಿ : ಸಚಿವ ರಾಮಲಿಂಗಾರೆಡ್ಡಿ

ಬೆಂಗಳೂರು: "ಮೆಟ್ರೋ ದರ ಏರಿಕೆಗೆ ರಾಜ್ಯ ಸರ್ಕಾರ ಕಾರಣ ಎಂದು ಕೈ ತೋರಿಸಿ ತಪ್ಪಿಸಿಕೊಳ್ಳಲು ನೋಡುತ್ತಿದ್ದಾರೆ. ಇದರಿಂದ ಜನಕ್ಕೆ ಹೊರೆ ಆಗುತ್ತದೆ. ನಮ್ಮ ಮೆಟ್ರೋಗೂ ಕೇಂದ್ರ ಸರ್ಕಾರ ಸಹಾಯಧನ ನೀಡಲಿ" ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ವಿಧಾನಸೌಧದಲ್ಲಿಂದು ಮಾಧ್ಯಮಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, "ನಷ್ಟ ಆದರೂ ನಾವು ರಸ್ತೆ ಸಾರಿಗೆ ನಿಗಮಗಳಿಗೆ ಸಬ್ಸಿಡಿ ಕೊಡುತ್ತಿದ್ದೇವೆ. ಅದೇ ರೀತಿ ನಮ್ಮ ಮೆಟ್ರೋಗೂ ಕೇಂದ್ರ ಸರ್ಕಾರ ಸಬ್ಸಿಡಿ ಕೊಡಲಿ. ಬೇರೆ ರಾಜ್ಯಗಳ ಮೆಟ್ರೋಗೂ ಸಬ್ಸಿಡಿ ನೀಡಲಿ. ನಾನು ಬೆಲೆ ಏರಿಕೆ ಬಗ್ಗೆ ರಾಜ್ಯ ಸರ್ಕಾರದ ಪಾತ್ರ ಇಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದೇನೆ. ಬಿಜೆಪಿ ಕೇಂದ್ರ ಸರ್ಕಾರದ ವಿರುದ್ಧ ಹೋರಾಟ ಮಾಡಬೇಕು. ನರೇಂದ್ರ ಮೋದಿ ಅವರಿಗೆ ಕೇಳಲು ಬಿಜೆಪಿ ಅವರಿಗೆ ಧಮ್ಮು ಇಲ್ಲ" ಎಂದು ಟೀಕಿಸಿದರು.

ಜೋಶಿ, ಬೊಮ್ಮಾಯಿ ಸುಳ್ಳು ಹೇಳುತ್ತಾರೆ : "ಬಿಜೆಪಿಯವರು ನಾವೇ ಮೆಟ್ರೋ ತಂದಿದ್ದು ಎಂದು ಫೋಸ್ ಕೊಡುತ್ತಾರೆ. ಪ್ರಲ್ಹಾದ್ ಜೋಶಿ ನಾಲ್ಕೈದು ಬಾರಿ ಎಂಪಿ, ಸಚಿವರಾಗಿದ್ದಾರೆ. ಅವರೂ ಸುಳ್ಳು ಹೇಳುತ್ತಾರೆ. ಬೊಮ್ಮಾಯಿ ಸಿಎಂ ಆದವರು, ಅವರೂ ಹಸಿ ಸುಳ್ಳು ಹೇಳುತ್ತಾರೆ ಅಂದರೆ ರಾಜ್ಯದಲ್ಲಿ ಏನೇನು ಅನಾಹುತ ಆಗುತ್ತೆ ಅಂತ ಗೊತ್ತಿಲ್ಲ. ದೇಶದಲ್ಲಿನ ಮೆಟ್ರೋ ಕೇಂದ್ರ ವಸತಿ ಹಾಗೂ ನಗರಾಭಿವೃದ್ಧಿ ಇಲಾಖೆಗೆ ಬರುತ್ತದೆ. ಸುಳ್ಳು ಹೇಳುವ ಜನರೆಲ್ಲಾ ಪಕ್ಷ ಕಟ್ಟಿಕೊಂಡಿದ್ದಾರೆ, ಅದು ಬಿಜೆಪಿ. ಬಿಜೆಪಿ ರಾಜ್ಯ ನಾಯಕರು ಬಿಡಿ, ಕೇಂದ್ರ ರೈಲ್ವೆ ಮಂತ್ರಿಗಳನ್ನು ಕರೆಯಿಸಿ ಸುಳ್ಳು ಹೇಳಿಸಿದ್ದಾರೆ. ಮೆಟ್ರೋ ದರ ಏರಿಕೆ ಮಾಡಿದ್ದು ರಾಜ್ಯ ಸರ್ಕಾರ ಅಂತ ಸುಳ್ಳು ಹೇಳಿಸಿದ್ದಾರೆ" ಎಂದು ವಾಗ್ದಾಳಿ ನಡೆಸಿದರು.

ದರ ನಿಗದಿಗೆ ಸಮಿತಿ ರಚನೆ ಮಾಡುವುದೇ ಕೇಂದ್ರ : "ಅಶ್ವಿನಿ ವೈಷ್ಣವ್ ಕೂಡ ಅಜ್ಞಾನಿಗಳು ಅಂತ ನನಗೆ ಅನ್ನಿಸುತ್ತಿದೆ. ಕೇಂದ್ರ ಸಚಿವರಿಗೆ ಸರಿಯಾದ ಮಾಹಿತಿ ಇಲ್ಲ. ಸಂಸದರಾದ ತೇಜಸ್ವಿ ಸೂರ್ಯ, ಪಿ.ಸಿ.ಮೋಹನ್ ಬುದ್ಧಿವಂತ ನಾಯಕರಿದ್ದಾರೆ. ಮೆಟ್ರೋ ಕಾಯ್ದೆ 2002ರ ಸೆಕ್ಷನ್ 34ರ ಪ್ರಕಾರ ದರ ಏರಿಕೆಗೆ ಪ್ರಸ್ತಾವನೆ ಸಲ್ಲಿಸುವುದು. ದರ ನಿಗದಿಗೆ ಸಮಿತಿ ರಚನೆ ಮಾಡುವುದೇ ಕೇಂದ್ರ ಸರ್ಕಾರ. ಈ ಸಮಿತಿಗೆ ಹೈಕೋರ್ಟ್ ನಿವೃತ್ತ ಜಡ್ಜ್‌ರನ್ನು ನೇಮಕ ಮಾಡುತ್ತಾರೆ. ಅದರಲ್ಲಿ ಒಬ್ಬ ಜಡ್ಜ್, ಕೇಂದ್ರದ ಒಬ್ಬ ಸದಸ್ಯರು, ರಾಜ್ಯದ ಒಬ್ಬ ಸದಸ್ಯರು ಇರುತ್ತಾರೆ. ಈ ಸಮಿತಿ ಎಲ್ಲರ ಅಭಿಪ್ರಾಯ ತಗೊಂಡು ವರದಿ ತಯಾರು ಮಾಡುತ್ತದೆ.



ಈ ವರದಿಯನ್ನು ಕೇಂದ್ರದ ಮೆಟ್ರೋ ಮಂಡಳಿಗೆ ಕೊಡುತ್ತಾರೆ. ಕೇಂದ್ರದ ನಗರಾಭಿವೃದ್ಧಿ ಸಚಿವಾಲಯದ ಕಾರ್ಯದರ್ಶಿಗಳು ದರ ಏರಿಕೆ ಮಾಡುತ್ತಾರೆ" ಎಂದು ಸ್ಪಷ್ಟಪಡಿಸಿದರು.

"ಮೆಟ್ರೋ ದರ ಏರಿಕೆಗೂ, ರಾಜ್ಯಕ್ಕೂ ಸಂಬಂಧ ಇಲ್ಲ. ಮೆಟ್ರೋ ಇರುವ ಎಲ್ಲಾ ರಾಜ್ಯಗಳು ದರ ಏರಿಕೆ ಮಾಡಲು ಕೋರಿ ಕೇಂದ್ರ ಸರ್ಕಾರಕ್ಕೆ ಪತ್ರ ಸಲ್ಲಿಸುತ್ತಾರೆ. ಈ ಪತ್ರವನ್ನು ಆಧರಿಸಿ ಕೇಂದ್ರ ಸರ್ಕಾರವು ದರ ಏರಿಕೆ ಮಾಡಲು ಸಮಿತಿಯನ್ನು ರಚಿಸುತ್ತದೆ. ಇದೇ ರೀತಿ ಬೆಂಗಳೂರು ನಮ್ಮ ಮೆಟ್ರೋದವರು ಸಹ ಪತ್ರ ಬರೆದಿದ್ದಾರೆ. ಅದರಂತೆ, ದಿನಾಂಕ 07.09.2024ರಂದು ಕೇಂದ್ರ ಸರ್ಕಾರದ ದರ ಏರಿಕೆ ಕುರಿತು ಸಮಿತಿಯನ್ನು ರಚಿಸಿದೆ. ಕೇಂದ್ರ ಸರ್ಕಾರ ರಚಿಸಿರುವ ಸಮಿತಿಯ ಅಧ್ಯಕ್ಷರಾಗಿ ಮದ್ರಾಸ್ ಹೈಕೋರ್ಟ್‌ನ ಹಿಂದಿನ ನ್ಯಾಯಮೂರ್ತಿಗಳಾದ ಆರ್. ತಾರಿಣಿ ಅವರಿದ್ದಾರೆ. ಕೇಂದ್ರ ಸರ್ಕಾರದ ವಸತಿ ಮತ್ತು ನಗರಾಭಿವೃದ್ಧಿ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಸತೀಂದರ್ ಪಾಲ್ ಸಿಂಗ್, ರಾಜ್ಯದ ಪ್ರತಿನಿಧಿಯಾಗಿ ನಿವೃತ್ತ ಐಎಎಸ್ ಅಧಿಕಾರಿ ರಮಣ ರೆಡ್ಡಿ ಸಮಿತಿಯ ಸದಸ್ಯರಾಗಿದ್ದಾರೆ" ಎಂದು ವಿವ–ರಿಸಿದರು. "ಮೂರು ಜನರ ಸಮಿತಿ ಕೆಇಆರ್‌ಸಿ ಮಾದ–ರಿಯಲ್ಲಿ ಸಾರ್ವಜನಿಕರ ಅಭಿಪ್ರಾಯ ಪಡೆಯುತ್ತದೆ. ಬಳಿಕ ಸಮಿತಿ ದರ ನಿಗದಿ ಮಾಡುತ್ತದೆ. ಸಮಿತಿಯ ವರದಿಯನ್ನು ರಾಜ್ಯ ಸರ್ಕಾರಕ್ಕೆ ಕೊಡಲ್ಲ. ಇದನ್ನು ಕೇಂದ್ರ ಮೆಟ್ರೋ ಮಂಡಳಿಗೆ ಕೊಡುತ್ತಾರೆ. ಅದರ ಅಧ್ಯಕ್ಷ ಕೇಂದ್ರದ ಯುಡಿ ಕಾರ್ಯದರ್ಶಿಯಾಗಿರುತ್ತಾರೆ. ಅವರು ದರ ನಿರ್ಧಾರ ಮಾಡುತ್ತಾರೆ. ಸಿಎಂ ಜನರ ಹಿತದೃಷ್ಟಿಯಿಂದ ದರ ಕಡಿಮೆ ಮಾಡಿ ಅಂತ ಪತ್ರ ಬರೆದರು. ಬಿಎಂಆರ್‌ಸಿಎಲ್ ಎಂಡಿ ನಗರಾಭಿವೃದ್ಧಿ ಕಾರ್ಯದರ್ಶಿ ಜೊತೆ ಮಾತನಾಡಿ ದರ ಕಡಿಮೆ ಮಾಡಿಸಿದ್ದಾರೆ" ಎಂದರು.

ಬಿಜೆಪಿ ಸುಳ್ಳು ಹೇಳುತ್ತಿದೆ : "ಮೂರು ಬಿಟ್ಟವರು ಊರಿಗೆ ದೊಡ್ಡವರು, ಅದಕ್ಕೆ ಬಿಜೆಪಿ ಸುಳ್ಳು ಹೇಳುತ್ತಿದೆ. ಏನಾದರೂ ಒಳ್ಳೆಯದು ಅದರೆ ಅದನ್ನು ನಾವು ಮಾಡಿದ್ದು ಎಂದು ಬಿಜೆಪಿಯವರು ಹೇಳುತ್ತಾರೆ. ಈ ತರದ ವಿಚಾರ ಅದರೆ ನಾವಲ್ಲ ಅನ್ನುತ್ತಾರೆ. ಮೆಟ್ರೋ ಕಾಯ್ದೆಯ ಅನುಸಾರ ಸಮಿತಿಯು ದರ ಏರಿಕೆ ಮಾಡಿದೆ" ಎಂದರು.

## ನಾಳೆ ಶಾಸಕಂಗ ಸಭೆ, ಫೆ.20 ರಂದು ದೆಹಲಿ ನೂತನ ಸಿಎಂ ಪದಗ್ರಹಣ

ನವದೆಹಲಿ, – ರಾಷ್ಟ್ರ ರಾಜಧಾನಿಯಲ್ಲಿ 27 ವರ್ಷಗಳ ನಂತರ ಅಭೂತಪೂರ್ವ ಗೆಲುವು ಸಾಧಿಸಿ ದಾಖಲೆ ಬರೆದಿರುವ ಬಿಜೆಪಿ ಪಕ್ಷದ ಶಾಸಕಾಂಗ ಸಭೆಯ ನಂತರ ಫೆ.19 ರಂದು ದೆಹಲಿಯ ಮುಖ್ಯಮಂತ್ರಿಯನ್ನು ಪಕ್ಷವು ಹೆಸರಿಸುವ ಸಾಧ್ಯತೆಯಿದೆ. ಶಾಸಕಂಗ ಸಭೆಯ ನಂತರ ಫೆ.20 ರಂದು ಪ್ರಮಾಣ ವಚನ ಸಮಾರಂಭ ನಡೆಯಲಿದೆ.

ಇತ್ತೀಚೆಗೆ ಮುಕ್ತಾಯಗೊಂಡ ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಗೆದ್ದ 48 ಬಿಜೆಪಿ ಶಾಸಕರ ಪೈಕಿ 15 ಹೆಸರುಗಳನ್ನು ಶಾರ್ಟ್‌ಲಿಸ್ಟ್ ಮಾಡಲಾಗಿದೆ. ಒಂಬತ್ತು ಮಂದಿ ಮುಖ್ಯಮಂತ್ರಿ, ರಾಜ್ಯ ಕ್ಯಾಬಿನೆಟ್ ಸಚಿವರು ಮತ್ತು ಸ್ಪೀಕರ್‌ರ ಪ್ರಮುಖ ಹುದ್ದೆಗಳಿಗೆ ಆಯ್ಕೆಯಾಗಲಿದ್ದಾರೆ.

70 ಸದಸ್ಯ ಬಲದ ವಿಧಾನಸಭೆಯಲ್ಲಿ 48 ಸ್ಥಾನಗಳನ್ನು ಗೆದ್ದು 27 ವರ್ಷಗಳ ಸುದೀರ್ಘ ವಿರಾಮದ ನಂತರ ಬಿಜೆಪಿ ದೆಹಲಿಯಲ್ಲಿ ಅಧಿಕಾರಕ್ಕೆ ಮರಳಿತು. ಮತ್ತೊಂದೆಡೆ, ಎಎಪಿ ತನ್ನ ಹಿರಿಯ ನಾಯಕರಾದ ಅರವಿಂದ್ ಕೇಜಿವಾಲ್, ಮನೀಶ್



ಸಿಸೋಡಿಯಾ ಮತ್ತು ಸೌರಭ್ ಭಾರದ್ವಾಜ್ ತಮ್ಮ ಭದ್ರ ಕೋಟೆಗಳನ್ನು ಕಳೆದುಕೊಂಡು ಕೇವಲ 22 ಸ್ಥಾನಗಳನ್ನು ಮಾತ್ರ ಗಳಿಸಿದೆ.

ವಿಧಾನಸಭಾ ಚುನಾವಣೆಗೆ ಮುನ್ನ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸದ ಬಿಜೆಪಿ, ಸಂಭಾವ್ಯ ಅಭ್ಯರ್ಥಿಗಳ ಪಟ್ಟಿಯಿಂದ ನಾಯಕನನ್ನು ಆಯ್ಕೆ ಮಾಡಲು ಉನ್ನತ ಮಟ್ಟದ ಸಭೆಗಳನ್ನು ನಡೆಸಿದೆ.

ತೀವ್ರ ಪೈಪೋಟಿಯಿಂದ ಕೂಡಿದ ನವದೆಹಲಿ ಕ್ಷೇತ್ರದಲ್ಲಿ ಆಪ್ ಮುಖ್ಯಸ್ಥ ಅರವಿಂದ್ ಕೇಜ್ರವಾಲ್ ಅವರನ್ನು ಸೋಲಿಸಿದ ನಂತರ ಪರ್ವೇಶ್ ವರ್ಮಾ ಅವರು ಬಿಜೆಪಿಯ ಪ್ರಮುಖ ನಾಯಕರಾಗಿ ಹೊರಹೊಮ್ಮಿದ್ದಾರೆ. ಪಕ್ಷದ ಹೈಕಮಾಂಡ್ ಏನು ನಿರ್ಧರಿಸಿದರೂ ಸಂತೋಷದಿಂದ ಸ್ವೀಕರಿಸುವುದಾಗಿ ಪರ್ವೇಶ್ ವರ್ಮಾ ಅವರು ಹೇಳಿದ್ದಾರೆ.

ನಾನು ಆಧ್ಯಾತ್ಮಿಕ ವ್ಯಕ್ತಿ. ಹಾಗಾಗಿ ನಾನು ಹೆಚ್ಚು ಸಂತೋಷವಾಗುವುದಿಲ್ಲ ಮತ್ತು ನಾನು ಹೆಚ್ಚು ದುಃಖಿತನಾಗುವುದಿಲ್ಲ. ಪಕ್ಷದ ಹೈಕಮಾಂಡ್ ಏನು ನಿರ್ಧರಿಸಿದರೂ ನಾನು ಅದನ್ನು ಸಂತೋಷದಿಂದ ಸ್ವೀಕರಿಸುತ್ತೇನೆ ಎಂದು ಗೊಂದಲಗಳಿಗೆ ತೆರೆ ಎಳೆದಿದ್ದಾರೆ.

ದೆಹಲಿ ಬಿಜೆಪಿಯ ಮಾಜಿ ಮುಖ್ಯಸ್ಥ ವಿಜೇಂದರ್ ಗುಪ್ತಾ ಮತ್ತು ಬಿಜೆಪಿಯ ಹಿರಿಯ ನಾಯಕ ಸತೀಶ್ ಉಪಾಧ್ಯಾಯ ಅವರ ಹೆಸರುಗಳು ಸುತ್ತುತ್ತಿರುವ ಇತರ ಹೆಸರುಗಳು, ಅವರು ಪ್ರಮುಖ ಬ್ರಾಹ್ಮಣ ಮುಖವೂ ಆಗಿದ್ದಾರೆ.

ದೆಹಲಿ ಬಿಜೆಪಿಯ ಪ್ರಧಾನ ಕಾರ್ಯದರ್ಶಿ, ಪಕ್ಷದ ಪ್ರಮುಖ ಪಂಜಾಬಿ ಮುಖ ಆಶಿಶ್ ಸೂದ್ ಮತ್ತು ಆರ್‌ಎಸ್‌ಎಸ್‌ನೊಂದಿಗೆ ಬಲವಾದ ಬಾಂಧವ್ಯವನ್ನು ಹೊಂದಿರುವ ಜಿತೇಂದ್ರ ಮಹಾಜನ್ ಅವರು ಸಿಎಂ ಹುದ್ದೆಯ ಪ್ರಮುಖ ಆಕಾಂಕ್ಷಿಗಳಾಗಿದ್ದಾರೆ.

## ಅಪ್ರಾಪ್ತ ವಯಸ್ಸಿನ ಬಾಲಕಿಗೆ ಅಪಹರಿಸಿ ಅತ್ಯಾಚಾರ ಎಸಗಿದ ಆರೋಪಿಗೆ ಶಿಕ್ಷೆ

ಕೊಪ್ಪಳ : ಅಪ್ರಾಪ್ತವಯಸ್ಸಿನ ಬಾಲಕಿಯನ್ನು ಅಪಹರಿಸಿ ಅತ್ಯಾಚಾರ ಎಸಗಿದ ಕಳಮಳ್ಳಿ ತಾಂಡಾದ ವಿಜಯಕುಮಾರ ಚವ್ಹಾಣ ಇತನ ಮೇಲಿನ ಆರೋಪಸಾಭಿತಾಗಿದೆ ಎಂದು ಕೊಪ್ಪಳ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಹಾಗೂ ತ್ವರಿತ ವಿಲೇವಾರಿ ನ್ಯಾಯಾಲಯ(ಪೋಕ್ಸೊ)ದ ನ್ಯಾಯಾಧೀಶರು, ಆರೋಪಿಗೆ ಶಿಕ್ಷೆ ವಿಧಿಸಿರುತ್ತಾರೆ.

2022ರ ಜುಲೈ 21ರಂದು ರಾತ್ರಿ 7.30 ಗಂಟೆ ಸುಮಾರಿಗೆ ಅಪ್ರಾಪ್ತ ವಯಸ್ಸಿನ ಬಾಲಕಿ ತನ್ನ ಗ್ರಾಮದಲ್ಲಿ ಗೆಳತಿಯ ಮನೆಗೆ ನೋಟ್ಸ್ ತೆಗೆದುಕೊಂಡು ಬರಲು ತನ್ನ ಮನೆಯಿಂದ ಹೊರಗಡೆ ಬಂದಾಗ, ತಾವರಗೇರಾ ಪೊಲೀಸ್ ಠಾಣೆ ವ್ಯಾಪ್ತಿಯ ಕಳಮಳ್ಳಿ ತಾಂಡಾ ನಿವಾಸಿ ವಿಜಯಕುಮಾರ ಚವ್ಹಾಣ ಇತನು ತನ್ನ ಮೋಟಾರ ಸೈಕಲ್ ಮೇಲೆ ಬಂದು ಬಾಧಿತಳನ್ನು ಅಪಹರಿಸಿ ಕೊಂಡು ಹೇಮಗುಡ್ಡದ ದೇವಸ್ಥಾನಕ್ಕೆ ಹೋಗಿ, ಅಲ್ಲಿನ ಅಡುಗೆ ಮಾಡುವ ಶೆಡ್ಡಿನಲ್ಲಿ ಮಲಗಿ ರಾತ್ರಿ ವೇಳೆಯಲ್ಲಿ ಮದುವೆ ಯಾಗುವುದಾಗಿ ಪುಸಲಾಯಿಸಿ, ಅತ್ಯಾಚಾರ ಮಾಡಿದ್ದಾನೆ. ನಂತರ 4 ದಿನಗಳವರೆಗೆ ಅಲ್ಲಿಯೇ ತಂಗಿದ್ದು, ಆ ಅವಧಿಯಲ್ಲಿಯೂ ಪ್ರತಿದಿನ ಅತ್ಯಾಚಾರ ಮಾಡಿರುವ ಆರೋಪದ ಹಿನ್ನೆಲೆಯಲ್ಲಿ ತಾವರಗೇರಾ ಪೋಲಿಸ ಠಾಣೆಯ ಮಹಿಳಾ ಪಿ.ಎಸ್.ಐ ಮತಿ ವೈಶಾಲಿ ಝುಳಕಿ ಅವರು ದೂರು ಸ್ವೀಕರಿಸಿ, ಪ್ರಥಮ ಹಂತದ ತನಿಖೆಯನ್ನು ನಿರ್ವಹಿಸಿ, ಮುಂದಿನ ತನಿಖೆಯನ್ನು ಕುಷ್ಟಗಿ ಸಿಪಿಐ ನಿಂಗಪ್ಪ ಎನ್. ಆರ್. ಅವರು ನಿರ್ವಹಿಸಿದ್ದು, ಈ ತನಿಖೆಯಲ್ಲಿ ಆರೋಪಿತನ ಮೇಲಿನ ಆರೋಪಣೆಗಳು ಮೇಲ್ನೋಟಕ್ಕೆ ಸಾಭಿತಾಗಿದ್ದರಿಂದ ಆರೋಪಿತನ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು.

ಈ ಪ್ರಕರಣವು ಸ್ಪೇ.ಎಸ್‌ಸಿ(ಪೋಕ್ಸೊ) ಸಂ: 52/2022ರಲ್ಲಿ ದಾಖಲಾಗಿದ್ದು, ವಿಚಾರಣೆಯನ್ನು ನಡೆಸಿದ ನ್ಯಾಯಾಲಯವು, ಆರೋಪಿ ಕಳಮಳ್ಳಿ ತಾಂಡಾದ ವಿಜಯಕುಮಾರ ಚವ್ಹಾಣ ಇತನ ಮೇಲಿನ ಆರೋಪಣೆಗಳು ಸಾಭೀತಾಗಿವೆ ಎಂದು 20 ವರ್ಷಗಳ ಜೈಲು ಶಿಕ್ಷೆ ಹಾಗೂ ರೂ. 20,000 ಗಳ ದಂಡವನ್ನು ಭರಿಸುವಂತೆ ಆದೇಶಿಸಿ, ಕೊಪ್ಪಳದ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಹಾಗೂ ತ್ವರಿತ ವಿಲೇವಾರಿ ನ್ಯಾಯಾಲಯದ (ಪೋಕ್ಸೊ)ದ ನ್ಯಾಯಾಧೀಶರಾದ ಕುಮಾರ ಡಿ.ಕೆ ಅವರು 2025ರ ಫೆಬ್ರವರಿ 6 ರಂದು ತೀರ್ಪು ಹೊರಡಿಸಿರುತ್ತಾರೆ. ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕರಾದ ಗೌರಮ್ಮ ದೇಸಾಯಿ ಅವರು ಪ್ರಕರಣ ನಡೆಸಿ, ವಾದ ಮಂಡಿಸಿದ್ದರು. ತಾವರಗೇರಾ ಪೊಲೀಸ್ ಠಾಣೆಯ ಸಿಬ್ಬಂದಿ ರಂಗನಾಥ ಅವರು ಸಾಕ್ಷಿದಾರರನ್ನು ನ್ಯಾಯಾಲಯಕ್ಕೆ ಹಾಜರಪಡಿಸುವಲ್ಲಿ ಸಹಕರಿಸಿರುತ್ತಾರೆ ಎಂದು ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯದ ಸರ್ಕಾರಿ ಅಭಿಯೋಜಕರ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

## ಫೆ.27ರಿಂದ ಮಾ.4 ರವರೆಗೆ ಬಬಲಾದಿ ಜಾತ್ರೆ

**ವಿಜಯಪುರ:** ಜಿಲ್ಲೆಯ ಬಬಲೇಶ್ವರ ತಾಲೂಕಿನ ಶ್ರೀ ಚಂದ್ರಗಿರಿ ದೇವಿ ಮಠದ ಶ್ರೀ ಗುರು ಚಕ್ರವರ್ತಿ ಸದಾಶಿವ ಮುತ್ಯಾನ ಹೊಳೆ ಬಬಲಾದಿ ಶ್ರೀ ಚಂದ್ರಗಿರಿ ದೇವಿ ಮಠದ ಜಾತ್ರೆಯ ಯಾವತ್ತು ಸದ್ಭಕ್ತರಿಗೆ ತಿಳಿಸುವುದೇನೆಂದರೆ ಪ್ರತಿವರ್ಷದಂತೆ ಇದೆ 1946 ಕೋದ್ರಿ ನಾಮ ಸಂವಸ್ತರ ಗುರುವಾರ ದಿನಾಂಕ 27/02/2025 ರಿಂದ ಮಾರ್ಚ್ 04/03/2025 ರವರೆಗೆ ಜಾತ್ರೆ ಜರುಗಲಿದೆ

ಜಾತ್ರಾ ವಿವರಣೆ :ದಿನಾಂಕ 27/02/ 2025 ಗುರುವಾರ ಮಠದ ಮಹಾಶಿವರಾತ್ರಿ ಉಪಾಸನೆ ಮತ್ತು ಅಭಿಷೇಕ ರಾತ್ರಿ ಭಜನೆ ವೇಗೈರೆ 28/02/2025 ಶುಕ್ರವಾರ ರಾತ್ರಿ 8:00ಗೆ ರಥೋತ್ಸವ ಜರಗುವುದು 01/03/2025 ಶನಿವಾರ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಮಹಾಪ್ರಸಾದ 02/03/2025 ರವಿವಾರ ಮುಂಜಾನೆ 9:00 ಗಂಟೆಗೆ ಉತ್ತಮ ಜಾನುವಾರಗಳ ಆಯ್ಕೆ 03/03/2025



ಸೋಮವಾರ ಉತ್ತಮ ಜಾನುವಾರುಗಳ ಪಾರಿತೋಷಕ ವಿತರಣೆ 04/03/2025 ಮಂಗಳವಾರ ಜೋಡೆತ್ತಿನ ಕಲ್ಲು ಜಗ್ಗಿಸುವ ಸ್ಪರ್ಧೆ ಹಾಗೂ ಬಹುಮಾನ ವಿತರಣೆ

ಮಠದ ಸೂಚನೆ:ಪ್ರತಿ ವರ್ಷದಂತೆ ಯಾತ್ರಿಕರಿಗೆ ಕುಡಿಯುವ ನೀರಿನ ಬಗ್ಗೆ ಪಂಪು ಹಚ್ಚಿ ಪ್ರತ್ಯೇಕ ವ್ಯವಸ್ಥೆ ಮಾಡಿದ್ದು ಯಾರು ಇದರ ಹೊರತಾಗಿ ಬೇರೆ ನೀರನ್ನು ಉಪಯೋಗಿಸಬಾರದು

ಮಠದ ಇತಿಹಾಸ: ಉತ್ತರ ಕರ್ನಾಟಕದಲ್ಲಿ ಪ್ರಸಿದ್ಧಿ ಪಡೆದ ವಿಜಯಪುರ ಜಿಲ್ಲೆಯ ಬಬಲೇಶ್ವರ ತಾಲೂಕಿನ ಹೊಳೆ ಬಬಲಾದಿ ಮಠವು ಗ್ರಾಮದ ಹಾಗೂ ಭಕ್ತರ ಆರಾಧ್ಯ ದೈವವಾಗಿದ್ದು ಈ ಮಠಕ್ಕೆ 500 ವರ್ಷದ ಇತಿಹಾಸವಿದೆ ಕಾಲಜ್ಞಾನ ಹಾಗೂ ತ್ರಿಕಾಲಜ್ಞಾನ ಸದಾಶಿವ ಅಜ್ಜನ ಮಠಕ್ಕೆ ಪ್ರತಿ ನಿತ್ಯ ಸಾವಿರಾರು ಭಕ್ತರು ಆಗಮಿಸುತ್ತಾರೆ. ವಿಚಿತ್ರವೋ, ವಿಶೇಷವೋ ಇಲ್ಲಿಗೆ ಬರುವ ಭಕ್ತರು ಹೂ, ಹಣ್ಣು, ಕಾಯಿಯ ಬದಲು ಮದ್ಯವನ್ನು ಈ ದೇವರಿಗೆ ನೈವೇದ್ಯವನ್ನಾಗಿ ನೀಡುತ್ತಾರೆ. ಕೃಷ್ಣಾ ನದಿ ತಟದಲ್ಲಿರುವ ಈ ಬಬಲಾದಿ ಮಠಕ್ಕೆ ಸಾವಿರಾರು ಭಕ್ತರು ಬಂದು ದೇವರ ದರ್ಶನ ಪಡೆದು ಮದ್ಯದ ಅಭಿಷೇಕ ಮಾಡಿ ದೇವರ ಆಶೀರ್ವಾದ ಪಡೆದುಕೊಂಡು ಹೋಗುತ್ತಾರೆ.

ಈ ದೇವರಿಗೆ ಮದ್ಯದ ಅಭಿಷೇಕ

ದಿನ ನಿತ್ಯ ಬಬಲಾದಿ ಮಠಕ್ಕೆ ಸಾವಿರಾರು ಭಕ್ತರು ಆಗಮಿಸುತ್ತಾರೆ. ಸಾಲು ಸಾಲಾಗಿ ಬರುವ ಹೆಚ್ಚಿನ ಭಕ್ತರು ತಮ್ಮ ಇಷ್ಟಾರ್ಥವನ್ನು ಈಡೇರಿಸುವ ಸಲುವಾಗಿ ಮದ್ಯವನ್ನು ಗದ್ದುಗೆಗೆ ನೈವದ್ಯ ರೂಪದಲ್ಲಿ ಅರ್ಪಿಸುತ್ತಾರೆ. ತಮ್ಮ ಸಿದ್ದಿ ಸಾಧನಕ್ಕಾಗಿ ಮದ್ಯವನ್ನು ಸೇವಿಸುತ್ತಿದ್ದ ಸದಾಶಿವ ಅಜ್ಜನವರಿಗೆ ಮದ್ಯದ ಅಭಿಷೇಕ ಮಾಡುತ್ತಾರೆ. ಪವಾಡ ಪುರುಷರಾಗಿದ್ದ ಸದಾಶಿವ ಅಜ್ಜನವರಿಗೆ ಮದ್ಯವು ತೀಥ–ರ್ ಪ್ರಸಾದವಾಗಿತ್ತು. ಹಾಗಾಗಿ ಇಲ್ಲಿ ಮದ್ಯದ ನೈವೇದ್ಯ ವಿಶೇಷವಾಗಿದೆ ಸದಾಶಿವ ಅಜ್ಜನವರು ಸಾರಿದ ಪ್ರಕಾರ ದಾರು ಎಂದರೆ ದಾರಿಯಲ್ಲಿ ಮರಣ ಸೆರೆ ಎಂದರೆ ಸೆರೆವಾಸ ಅಂದರೆ ಜೈಲು ವಾಸ ಹೀಗಾಗಿ ಮಠಕ್ಕೆ ಕಾಲಿಡುವ



ಭಕ್ತರು ಮದ್ಯಕ್ಕೆ ತೀರ್ಥ ಎಂದು ಕರೆಯಬೇಕು

ಕಾಲಜ್ಞಾನದ ಮಠದಲ್ಲಿ ತಮ್ಮದೇ ಆದ ಹರಕೆಗಳನ್ನು ತೀರಸುತ್ತಾರೆ ಭಕ್ತರು

ಕರ್ನಾಟಕದಲ್ಲಿಯೇ ಪ್ರಸಿದ್ಧಿ ಪಡೆದಿರುವ ಕಾಲಜ್ಞಾನ ಬಬಲಾದಿ ಮಠಕ್ಕೆ ಬಂದ ಭಕ್ತರು ಹರಕೆಯನ್ನು ಹೊತ್ತುಕೊಳ್ಳುತ್ತಾರೆ. ಹರಕೆ ಹೊತ್ತಕೊಂಡ ಹೆಚ್ಚಿನ ಭಕ್ತರು ಈ ದೇವರಿಗೆ ಮೊದಲು ಮದ್ಯವನ್ನು ಅರ್ಪಿಸಿ, ತೆಂಗಿನ ಕಾಯಿ ಕಟ್ಟುವ ಮೂಲಕ ಹರಕೆ ತೀರಿಸುತ್ತಾರೆ. ಹೀಗೆ ರಾಜ್ಯಾದ್ಯಂತ ಸಾವಿರಾರು ಭಕ್ತರು ಇಲ್ಲಿಗೆ ಆಗಮಿಸಿ, ದೇವರಿಗೆ ಮದ್ಯ ಅರ್ಪಿಸಿ ಪುನೀತರಾಗಿ ಪಡೆದು ಧನ್ಯತೆ ಹೊಂದುತ್ತಾರೆ.

ಈ ಮಠದಲ್ಲಿ ಜುಟ್ಟು ಇಲ್ಲದ ಬೋಳು ತೆಂಗಿನ ಕಾಯಿಯೆ ಒಡೆಯಬೇಕು ಬಬಲಾದಿ ಮಠವು ಕಾಲಜ್ಞಾನಕ್ಕೆ ಪ್ರಸಿದ್ಧಿ ಹೊಂದಿದೆ. ಈ ಮಠದಲ್ಲಿ ವಿಶಿಷ್ಠ ಸಂಪ್ರದಾಯ ರೂಢಿಯಲ್ಲಿದೆ. ಇಲ್ಲಿಗೆ ಬರುವ ಭಕ್ತರು ಜುಟ್ಟು ಇಲ್ಲದ ಬೋಳು ತೆಂಗಿನಕಾಯಿ ಒಡೆಯುತ್ತಾರೆ. ಸಾಮಾನ್ಯವಾಗಿ ಎಲ್ಲಾ ಮಠ, ಮಂದಿರಗಳಲ್ಲಿ ಜುಟ್ಟು ಇರುವ ತೆಂಗಿನ ಕಾಯಿ ಒಡೆದರೆ ಇಲ್ಲಿ ಇದಕ್ಕೆ ತದ್ವಿರುದ್ಧ ಸಂಪ್ರದಾಯ ಅನೂಚಾನವಾಗಿ ನಡೆದುಬಂದಿದೆ. ಇದಕ್ಕೆ ಇತಿಹಾಸವು ಕೂಡ ಇದೆ.



ಬಾವನಸೌಂದತ್ತಿ :ಕಾಂಗ್ರೆಸ ಆಡಳಿತದಲ್ಲಿ ಬಡವರಿಗೆ ಮನೆ ಇಲ್ಲ. ಜನರಿಗೆ ತೀವ್ರ ತೊಂದರೆಯಾಗುತ್ತಿದೆ. ಬಿಜೆಪಿ ಸರ್ಕಾರದಿಂದಲೇ ಬಡವರ ಕಣ್ಣೀರು ವರೆಸುವ ಕೆಲಸ ಆಗುತ್ತದೆ ಎಂದು ರಾಯಬಾಗ ಶಾಸಕ ದುರ್ಯೋಧನ ಐಹೊಳೆ ಅವರು ಹೇಳಿದರು.
ಸಮೀಪದ ಕೆಂಪಟ್ಟಿ ಗ್ರಾಮದಲ್ಲಿ ಬಿ ಆರ್ ಅಂಬೇಡ್ಕರ ಹಾಗೂ ಬಸವ ವಸತಿ ಯೋಜನೆ ಅಡಿಯಲ್ಲಿ ಮಂಜೂರಾದ 40 ಮನೆಗಳ ಹಕ್ಕು ಪತ್ರವನ್ನು ವಿತರಿಸಿ ಮಾತನಾಡಿದರು.
ಫಲಾನುಭವಿಗಳು ತಮ್ಮ ಸ್ವಂತ ಹಣವನ್ನು ಹಾಕಿ ಶೌಚಾಲಯ ಕಟ್ಟಿ ಸ್ವಚ್ಛ ಗ್ರಾಮವನ್ನು ಮಾಡಲು ಸಹಕರಿಸಬೇಕು ಎಂದರು
ಈ ವೇಳೆ ಗ್ರಾಮ ಪಂಚಾಯತ ಅಧ್ಯಕ್ಷ ಕೃಷ್ಣಪ್ಪ ಕುಂದರಗಿ, ಉಪಾಧ್ಯಕ್ಷ ಅಕ್ಕವ್ವಾ ಕಾಂಬಳೆ, ಶಿವಪ್ಪ ನಾಯಕ, ಮಹಾದೇವ್ ನಾಯಕ, ಬಂಡಿ ಸಬಕಾಳೆ, ಕಸ್ತೂರಿ ನಾಯಕ, ಅಭಿವೃದ್ಧಿ ಅಧಿಕಾರಿ ಶ್ರೀಕಾಂತ ಯಡ್ರಾವಿ, ಗ್ರಾಮ ಪಂಚಾಯತ ಸದಸ್ಯರು ಗ್ರಾಮಸ್ಥರು ಉಪಸ್ಥಿತಿ ಇದ್ದರು.

# ಮಹಿಳಾ ಕುಸ್ತಿ-ಪಕ್ಷೇಕರು ಫಿದಾ..!
# ಗಮನ ಸೆಳೆದ ಜಂಗಿ ನಿಕಾಲಿ ಕುಸ್ತಿಗಳು



ರಬಕವಿ-ಬನಹಟ್ಟಿ,ಫೆ16: ಬನಹಟ್ಟಿಯ ಕುಸ್ತಿ ಮೈದಾನದಲ್ಲಿ ರವಿವಾರ ಜೈ ಹನುಮಾನ ವ್ಯಾಯಾಮ ಶಾಲೆ ಮತ್ತು ವಿವಿದೊದ್ದೇಶ ಕುಸ್ತಿ ಸಂಘದಿಂದ ಜರುಗಿದ ಜಗಜಟ್ಟಿಗಳ ನಡುವೆ ಅದ್ದೂರಿ ಜಂಗಿ ನಿಕಾಲಿ ಕುಸ್ತಿಗಳು ಜರುಗಿದವು, ಮಹಿಳೆಯರ ಕುಸ್ತಿಗಳು ಪ್ರೇಕ್ಷಕರಿಗೆ ರಸದೌತನ ನೀಡುವಲ್ಲಿ ಕಾರಣವಾಯಿತಲ್ಲದೆ ಕುಸ್ತಿ ವೀಕ್ಷಿಸಲು ಅನೇಕ ಗ್ರಾಮ ಮತ್ತು ಪಟ್ಟಣಗಳಿಂದ ಅಪಾರ ಪ್ರಮಾಣದ ಜನಸಾಗರ ಹರಿದು ಬಂದಿತ್ತು.

ಹೊಡಿ, ಎತ್ತು, ತಿರುವ ಹಾ.. ಉಕಾಡ್ ಹಾಕ್ಯಾನ್ರಿ.. ಟಾಂಗ್ ಜೋಡಿ ಒಳ ಟಾಂಗ್, ಹೊರ ಟಾಂಗ್, ದಿಸೆ ಜೋಡಿ ಚಿತ್ತ ಹಾಕ್ಯಾನ್ರೀ.... ಹೀಗೆ ಕುಸ್ತಿ ಶೈಲಿಯ ಮಾತುಗಳು ಫಲಿತಾಂಶ ನೀಡುವ ವಸ್ತಾದರನ್ನೂ ನಿಬ್ಬೆರಗು ಮಾಡುವಲ್ಲಿ ಕಾರಣವಾದವು.

ಮದಗಜಗಳಂತೆ ಹೋರಾಟ ನಡೆಸಿದ ಕುಸ್ತಿ ಪಟುಗಳು ಜನರ ಪ್ರೋತ್ಸಾಹಕ್ಕೆ, ಸಿಳ್ಳೆಯ ನೀನಾದಕ್ಕೆ ತಲೆ ದೂಗಿದರು. ಕುಸ್ತಿ ಗೆಲ್ಲಲು ನಡೆಸಿದ ವಿರೋಚಿತ ಹೋರಾಟ ಕುಸ್ತಿ ರಸಿಕರ ಮನ ತಣಿಸಿತು.

ಸಿಂಧು ಹಳಂಗಳಿ(ನೀಲಿ ಟೀ ಶರ್ಟ್) ಅವರು 'ಡಾಕ್'(ಎದುರು-ಬದುರು ಬೆನ್ನು ಹಿಡಿದು ನೆಲಕ್ಕೆ ಹಾಕುವದು) ಚಿತ್ ಡಾವ್ ಮಾಡಿ ಸೌಜನ್ಯ ಹಳಿಂಗಳಿ(ಕೆಂಪು ಟೀಶರ್ಟ್)ಯವರನ್ನು ಮಣಿಸುಲ್ಲಿ ಯಶಸ್ವಿಯಾದರು.

200 ಕ್ಕೂ ಹೆಚ್ಚು ಕುಸ್ತಿ ಪಟುಗಳು ವಿಭಿನ್ನ ರೀತಿಯಲ್ಲಿ ಟಾಂಗ್‌ಗಳನ್ನು ಹಾಕಿ ಕುಸ್ತಿಯಾಡಿ ನೆರೆದ ಜನರನ್ನು ರಂಜಿಸಿದರು. ಕುಸ್ತಿ ಆಡಿಸುವವರು ಅವರ ಗಮನಕ್ಕೆ ಬಾರದೇ ಅಚಾನಕ್ಕಾಗಿ ಏನಾದರೂ ತಪ್ಪುಗಳಾದರೇ ಸಾವಿರಾರು ಜನ ಕೇಕೆ ಹಾಕಿ ಕೆಲ ಕುಸ್ತಿ ಪಟುಗಳಿಗೆ ನ್ಯಾಯ ದೊರಕಿಸಿ ಕೊಡುವ ಕೆಲಸ ನಡೆದಿತ್ತು.

ಶಾಸಕ ಸಿದ್ದು ಸವದಿ, ಬಿ.ಕೆ. ಕೊಣ್ಣೂರ, ನಗರಾಧ್ಯಕ್ಷೆ ವಿದ್ಯಾ ದಭಾಡಿ, ಸಂಜಯ ಜವಳಗಿ, ಸಿದ್ಧನಗೌಡ ಪಾಟೀಲ, ಶ್ರೀಶೈಲ ದಭಾಡಿ, ರಾಜು ಭದ್ರನ್ನವರ, ಬಾಳು ಗಣೇಶನವರ, ಮಹಾಶಾಂತ ಶೆಟ್ಟಿ, ಸಿದ್ರಾಮಪ್ಪ ಸವದತ್ತಿ, ಶಿವು ಜಾಲಿಗಿಡದ, ಮೀನಾಕ್ಷಿ ಸವದಿ, ಶಾಂತಾ ಸೊರಗಾಂವಿ, ಸುವರ್ಣ ಕೊಪ್ಪದ, ಕಮಲಾ ಹಾರುಗೇರಿ, ಮಾಲಾ ಬಾವಲತ್ತಿ, ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.



ರಾಯಬಾಗ ತಾಲೂಕಿನ ಕಡಕ ಬಾವಿ ಪಿಡಾಯಿ ತೋಟದ ಜಕ್ಕಮ್ಮ ದೇವಿ ಹಾಗೂ ದರೇಶ್ವರ ಜಾತ್ರೆಯ ನಿಮಿತ್ಯವಾಗಿ ಜಿಲ್ಲಾ ಉಸ್ತುವಾರಿ ಸಚಿವರ ಆಪ್ತ ಕಾರ್ಯದರ್ಶಿಗಳಾದ ಶಿವನಗೌಡ ಪಾಟೀಲ್ ಶ್ರೀ ಮಠಕ್ಕೆ ಭೇಟಿ ನೀಡಿದರು ಈ ಸಂದರ್ಭದಲ್ಲಿ ಮಠದ ಪೀಠಾಧ್ಯಕ್ಷರಾದ ಶ್ರೀ ಅಭಿನವ ದರೆಕಾನ ಶ್ರೀಗಳು ಸನ್ಮಾನಿಸಿದರು.

# ಸೇವಾಲಾಲ ಜಯಂತಿ ನಿಮಿತ್ತ ಭವ್ಯ ಮೆರವಣಿಗೆ



ತೇರದಾಳ-ಸಂತ ಸೇವಾಲಾಲ ಜಯಂತಿಯನ್ನು ಇಲ್ಲಿನ ಸಂತ ಸೇವಾಲಾಲ ಸಮಾಜ ಬಾಂಧವರು ಸಂಭ್ರಮ ಸಡಗರದಿಂದ ಆಚರಿಸಿದರು. ಕಾರ್ಯಕ್ರಮ ನಿಮಿತ್ತ ದೇವರಾಜ ನಗರದ ವಾರ್ಡ್ ನ4ರ ವ್ಯಾಪ್ತಿಯಲ್ಲಿರುವ ಸಂತ ಸೇವಾಲಾಲ ದೇವಸ್ಥಾನದಲ್ಲಿ ವಿಶೇಷ ಪೂಜೆ ಜರುಗಿತು. ಈ ಸಂದರ್ಭದಲ್ಲಿ ಮಾತನಾಡಿದ ವಾರ್ಡ್ ಸದಸ್ಯ ಕಾಶಿನಾಥ ರಾಠೋಡ, ಸಂತ ಸೇವಾಲಾಲ ಸಮಾಜಕ್ಕೆ ನೀಡಿದ ಕೊಡುಗೆ ಅನನ್ಯವಾಗಿದೆ. ಸಾಕಷ್ಟು ಹಿಂದುಳಿದ ಸಮಾಜ ಆಗಿರುವ ಬಂಜಾರ ಸಮಾಜಕ್ಕೆ ಸರಕಾರಗಳು ಸೂಕ್ತ ಸ್ಥಾನಮಾನ ನೀಡಬೇಕು. ಹಾಗೂ ಸೇವಾಲಾಲ ಅವರ ಆದರ್ಶಗಳನ್ನು ಸಮಾಜ ಬಾಂಧವರು ಅಳವಡಿಸಿಕೊಳ್ಳಬೇಕೆಂದು ಹೇಳಿದರು. ಸಂಜೆ ಸಂತ ಸೇವಾಲಾಲ ಭಾವಚಿತ್ರದ ಮೆರವಣಿಗೆ ವಾಧ್ಯಮೇಳಗಳೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಜರುಗಿತು. ಸಮಾಜದ ಮಹಿಳೆಯರು ಯುವತಿಯರು ಯುವಕರು ಮೆರವಣಿಗೆಯಲ್ಲಿ ಪಾಲ್ಗೊಂಡು ಕುಣಿದು ಕುಪ್ಪಳಿಸಿದರು. ಸಮಾಜದ ಹಿರಿಯ ಜೀವಿಗಳು ಸಂಪ್ರದಾಯಕ ಉಡುಗೆ ತೊಟ್ಟು ಹಾಗೂ ಹಾಡಿಗೆ ಹಜ್ಜೆ ಹಾಕುವ ಮೂಲಕ ಗಮನ ಸೆಳೆದರು. ಮುಖಂಡರಾದ ಮಂಗಲಸಿಂಗ್ ರಾಠೋಡ, ರಾಮಚಂದ್ರ ರಾಠೋಡ, ಸುರೇಶ ಪವಾರ, ನಿಂಗಪ್ಪ ಲಮಾಣಿ, ರಮೇಶ ರಾಠೋಡ, ಸಂತೋಷ ಪವಾರ ಇನ್ನಿತರಿದ್ದರು.

# ಅರ್ಜಿ ಆಹ್ವಾನ

ಕಾರವಾರ,: ತತ್ವಪದ ಸಾಹಿತ್ಯ, ಭಕ್ತಿ ಸಾಹಿತ್ಯ, ಕೀರ್ತನಾ ಸಾಹಿತ್ಯ ಕುರಿತಂತೆ ಅಧ್ಯಯನ ವ್ಯಾಪ್ತಿ ಹೊಂದಿರುವ ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರವು ಕೆ.ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್-ಕೃಷ್ಣಾಪುರದೊಡ್ಡಿ ಇವರ ಸಹೋಗದಲ್ಲಿ ಪ್ರಸುತ್ತ ಈ ಕ್ಷೇತ್ರಗಳಲ್ಲಿ ಸಂಶೋಧನೆ ಮಾಡುತ್ತಿರುವ ಯುವ ಸಂಶೋಧನಾರ್ಥಿಗಳಿಗೆ ಮಾ.10 ಮತ್ತು 11 ರಂದು ರಾಮನಗರ ತಾಲೂಕಿನ ಮುದ್ದುಶ್ರೀ ದಿಬ್ಬ, ಕೆರೆಮೇಗಳದೊಡ್ಡಿಯಲ್ಲಿ ಅಧ್ಯಯನ ಕಮ್ಮಟವನ್ನು ನಡೆಸಲು ಉದ್ದೇಶಿಸಿದ್ದು, ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಆಸಕ್ತಿಯಿಂದ 20 ರಿಂದ 40 ವರ್ಷದೊಳಗಿನವರು ರಾಜ್ಯದ ಎಲ್ಲಾ ಭಾಗದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಫೆ.24 ಅರ್ಜಿ ಸಲ್ಲಿಸುವ ಕೊನೆಯ ದಿನವಾಗಿದೆ. ಆಸಕ್ತ ಅಭ್ಯರ್ಥಿಗಳು ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದ ವೆಬ್ಸೈಟ್: https://kanakadasaresearchcenter.karnataka.gov.in ಮೂಲಕ ಅರ್ಜಿ ನಮೂನೆಯನ್ನು ಪಡೆದುಕೊಳ್ಳಬಹುದಾಗಿದೆ ಎಂದು ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ ಸದಸ್ಯ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕುಂದು ಕೊರತೆ ಅಹವಾಲು ಸ್ವೀಕಾರ

ವಿಜಯಪುರ: ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಪಲ್ಲವಿ. ಜಿ ಅವರು ಫೆಬ್ರವರಿ 18ರ ಬೆಳಿಗ್ಗೆ 9:30ಕ್ಕೆ ನಗರದ ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಕುಂದುಕೊರತೆ ಅಹವಾಲು ಸ್ವೀಕರಿಸಲಿದ್ದಾರೆ. ಸಮುದಾಯದ ಸಂಘ-ಸಂಸ್ಥೆಯ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸುವಂತೆ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರ ಪ್ರಕಟಣೆ ತಿಳಿಸಿದೆ.

## ಎನ್ನೆಸ್ಸೆಸ್ ಯುವಜನೋತ್ಸವಕ್ಕೆ ಆಯ್ಕೆ



ಮೂಡಲಗಿ : ಫೆಬ್ರವರಿ 28 ರಿಂದ ಮಾರ್ಚ 4ರ ವರೆಗೆ ಐದು ದಿನಗಳ ಕಾಲ ನಡೆಯಲಿರುವ ರಾಷ್ಟ್ರೀಯ ಸೇವಾ ಯೋಜನೆಯ ಯುವಜನೋತ್ಸವ ಕಾರ್ಯಕ್ರಮಕ್ಕೆ ಬೆಳಗಾವಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ ಕಲ್ಲೋಳಿ ಪಟ್ಟಣದ ಶ್ರೀರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪ್ರಥಮ ದರ್ಜೆ ಕಾಲೇಜಿನ ಎನ್.ಎಸ್.ಎಸ್. ಸ್ವಯಂ ಸೇವಕಿ ಕು. ಲಕ್ಷ್ಮೀ ಕಲ್ಲೋಳಿ ಆಯ್ಕೆ ಆಗಿದ್ದಾರೆ ಎಂದು ಚಿಕ್ಕೋಡಿ ಜಿಲ್ಲಾ ಪ್ರಭಾರಿ ಎನ್.ಎಸ್.ಎಸ್. ಸಂಯೋಜನಾಧಿಕಾರಿ ಹಾಗೂ ಕಾರ್ಯಕ್ರಮ ಅಧಿಕಾರಿ ಶಂಕರ ನಿಂಗನೂರ ತಿಳಿಸಿದ್ದಾರೆ.

ಕರ್ನಾಟಕ ಸರಕಾರ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು ಇವರುಗಳ ಸಹಯೋಗದಲ್ಲಿ ಈ ಶಿಬಿರ ಜರುಗಲಿದೆ.ಆಯ್ಕೆಯಾದ ಕು. ಲಕ್ಷ್ಮೀ ಕಲ್ಲೋಳಿ ಅವರನ್ನು ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಬಸಗೌಡ ಪಾಟೀಲ, ಆಡಳಿತ ಮಂಡಳಿ ಸದಸ್ಯರು, ಪ್ರಾಚಾರ್ಯ ಡಾ. ಸುರೇಶ ಹನಗಂಡಿ, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿ ವೃಂದ ಅಭಿನಂದಿಸಿದ್ದಾರೆ.

# ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಉದ್ಘಾಟನೆ



ವಿಜಯಪುರ, : ದೇಶದ ಕಾನೂನು ಸುವ್ಯಸ್ಥೆ ನ್ಯಾಯಾಂಗ ಪದ್ಧತಿ ಬಹಳ ಬಲಿಷ್ಟವಾಗಿರಬೇಕು ಅದು ಅತ್ಯಗತ್ಯ ಅದು ಸಾಕಾರಗೊಳ್ಳಬೇಕಾದರೆ ನ್ಯಾಯಾಲಯಗಳ ಪಾತ್ರ ಬಹಳ ಮುಖ್ಯ ಎಂದು ಕರ್ನಾಟಕ ಉಚ್ಚ ನ್ಯಾಯಾಲಯ ಹಾಗೂ ವಿಜಯಪುರ ಆಡಳಿತಾತ್ಮಕ ನ್ಯಾಯಮೂರ್ತಿಗಳಾದಾದ ಎಂ.ಐ ಅರುಣ ಹೇಳಿದರು.

ಇಂದು ಮುದ್ದೇಬಿಹಾಳ ನಗರದ ಜಿಲ್ಲಾ ನ್ಯಾಯಾಂಗ ಇಲಾಖೆ, ಲೋಕೋಪಯೋಗಿ ಇಲಾಖೆ, ಹಾಗೂ ನ್ಯಾಯವಾದಿಗಳ ಸಂಘ ಮುದ್ದೇಬಿಹಾಳ ಇವರ ಸಂಂ-ಯುಕ್ತಾಶ್ರಯದಲ್ಲಿ ನೂತನವಾಗಿ ಸೃಜಿಸಲ್ಪಟ್ಟ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಧೀಶರ ನ್ಯಾಯಾಲಯ ವಿಜಯಪುರ (ಕಾರ್ಯಸ್ಥಳ: ಮುದ್ದೇಬಿಹಾಳ) ಮತ್ತು ಮುದ್ದೇಬಿಹಾಳ ನ್ಯಾಯಾಲಯದ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಲಾ ಛೇಂಬರ್ಸ್ ಮತ್ತು ಸಹಾಯಕ ಸರ್ಕಾರಿ ಅಭಿಯೋಜಕರ ಕಚೇರಿ ಕಟ್ಟಡ ಉದ್ಘಾಟನೆಯನ್ನು ನೆರವೇರಿಸಿ ಅವರು ಮಾತನಾಡಿದರು. ನಾವು ಜನಸಾಮಾನ್ಯರ ಬಾಗಿಲಿಗೆ ನ್ಯಾಯ ಒದಗಿಸಬೇಕಾದರೆ ನ್ಯಾಯಾಲಯಗಳ ವಿಕೇಂದ್ರೀಕರಣ ಹಾಗೂ ಅಲ್ಲಲ್ಲಿ ನ್ಯಾಯಾಲಯಗಳನ್ನು ಸ್ಥಾಪಿಸಬೇಕು ಈ ನಿಟ್ಟಿನಲ್ಲಿ ಮುದ್ದೇಬಿಹಾಳ ಹಾಗೂ ತಾಳಿಕೋಟೆಯ ನ್ಯಾಯಾಲಯಗಳಲ್ಲಿ ಹೆಚ್ಚಿನ ಪ್ರಕರಣಗಳು ಇದ್ದು ಇದಕ್ಕೆ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ನೂತನವಾಗಿ ಸೃಜಿಸಲ್ಪಟ್ಟ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಇಂದು ಇಲ್ಲಿ ಉದ್ಘಾಟನೆಯಾಗಿದೆ ಅದರೊಂದಿಗೆ ನ್ಯಾಯಾದೀಶರಿಗೆ ಉತ್ತಮ ಮೂಲಭೂತ ಸೌಲಭ್ಯಗಳು ಕೂಡ ದೊರಕುವ ಉದ್ದೇಶದಿಂದ ಲಾ ಛೆಂಬರನ್ನು ಕೂಡ ನಿರ್ಮಿಸಲಾಗಿದೆ ಒಂದು ಸಂತಸದ ವಿಷಯ ಎಂದು ಅವರು ಹೇಳಿದರು.

ಕಕ್ಷಿದಾರರೊಂದಿಗೆ ಸಮರ್ಪಕವಾದ ಸಲಹೆಗಳನ್ನು ನೀಡಿ ಅವರೊಂದಿಗೆ ಜನಾನುರಾಗಿ ವರ್ತಿಸಿದಲ್ಲಿ ಮಾತ್ರ ನಾವು ಒಳ್ಳೆಯ ನ್ಯಾಯ ಒದಗಿಸಿಕೊಟ್ಟಂತೆ ಇಂದು ಎಲ್ಲ ರಂಗಗಳಲ್ಲಿಯೂ ಹಾಗೂ ಪ್ರತಿಯೊಂದು ವಿಚಾರದಲ್ಲಿ ಕಾನೂನು ಸಲಹೆ ಅತ್ಯವಶ್ಯಕವಾಗಿವೆ ಹೊಸ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬೇಕು ಹಾಗೂ ಅದರೊಂದಿಗೆ ಹೊಂದಿಕೊಳ್ಳಬೇಕು ವಿಡೀಯೋ ಸಂವಾದಗಳ ಮೂಲಕವೂ ಕೂಡ ನಾವು ನಮ್ಮ ನ್ಯಾಯಗಳನ್ನು ಬಗೆಹರಿಸಿಕೊಳ್ಳಬಹುದಾಗಿದೆ ಇದರಿಂದ ಹಲವಾರು ಉಪಯೋಗಗಳಿವೆ ಜನಸಾಮಾನ್ಯರಿಗೆ ಉತ್ತಮ ನ್ಯಾಯ ಒದಗಿಸಲು ಅವರು ಹೇಳಿದರು.

ಕಾನೂನು, ನ್ಯಾಯ, ಮಾನವಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆಯ ಸಚಿವರಾದ ಹೆಚ್.ಕೆ ಪಾಟೀಲ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ ಸರ್ಕಾರ 115 ಕೋರ್ಟಗಳನ್ನು ಸ್ಥಾಪಿಸಲು ಕ್ರಮ ವಹಿಸಲಾಗುತ್ತಿದೆ ಅದರೊಂದಿಗೆ 2200 ಹುದ್ದೆಗಳನ್ನು ಸೃಜಿಸಲಾಗುತ್ತಿದೆ. ವ್ಯಾಜ್ಯಗಳನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ನ್ಯಾಯಾಧೀಶರ ಹಾಗೂ ವಕೀಲರ ಪಾತ್ರ ಬಹಳ ಮುಖ್ಯ ಪ್ರತಿಯೊಬ್ಬರಿಗೂ ಉತ್ತಮ ನ್ಯಾಯ ಒದಗಿಸುವಂತೆ ಕಾನೂನುಗಳ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಆಯೋಜಿಸಬೇಕು ಕಕ್ಷಿದಾರರು ಹೆಚ್ಚು ಸಂಖ್ಯೆಗಳಲ್ಲಿ ನ್ಯಾಯಾಲಯಕ್ಕೆ ಆಗಮಿಸದೇ ಇರುವಂತೆ ನೋಡಿಕೊಳ್ಳಬೇಕು ನಮ್ಮ ವಕೀಲರು ಸಾಮಾಜಿಕವಾಗಿ ಕಳಕಳಿ ಹೊಂದಿ ಕಕ್ಷಿದಾರರಿಗೆ ಹಾಗೂ ಸಾಕ್ಷಿದಾರರಿಗೆ ಯೋಗ್ಯವಾದ ನ್ಯಾಯಸಮ್ಮತ ನ್ಯಾಯಗಳನ್ನು ಒದಗಿಸಲು ವ್ಯವಸ್ಥೆ ಮಾಡಿಕೊಳ್ಳಬೇಕು ನ್ಯಾಯದಾನ ವ್ಯವಸ್ಥೆಗೆ ಗೌರವ ಕೊಡುವಂತಾಗಬೇಕು ಹಾಗೂ ಈ ಭಾಗದ ಅಭಿವೃದ್ಧಿಗಾಗಿ ಎಲ್ಲ ರೀತಿಯ ಸಹಾಯ ಸಹಕಾರ ನೀಡುವುದಾಗಿ ಅವರು ಹೇಳಿದರು.ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾದ ಹೆಚ್.ಪಿ ಸಂದೇಶ ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಿ ಮಾತನಾಡಿದ ಅವರು ಈ ಬಾಗದ ರೈತರ ಕೋರ್ಟಗಳಲ್ಲಿ ವ್ಯಾಜ್ಯಗಳಿಗವೆ ಈ ಕಾರಣದಿಂದ ಈ ಭಾಗಕ್ಕೆ ಜಿಲ್ಲಾ ಮತ್ತು ಸತ್ರ ನ್ಯಾಯಧೀಶರ ನ್ಯಾಯಾಲಯ ಅವಶ್ಯಕವಾಗಿದೆ ಈ ಬಾಗದ ಸಾರ್ವಜನಿಕರು ಜಿಲ್ಲಾ ಕೋರ್ಟಗೆ ಹೋಗಿ ಬರಬೇಕಾದಲ್ಲಿ ದೂರ ಕ್ರಮಿಸಬೇಕಾದ ಹಿನ್ನೆಲೆಯಲ್ಲಿ ಸಮಯ ಕೂಡ ವ್ಯರ್ಥವಾಗುತ್ತದೆ ಕಕ್ಷಿದಾರರ ಸಮಸ್ಯಗಳ ಅರಿತು ಅವರಿಗೆ ಸೂಕ್ತವಾದ ನ್ಯಾಯ ಒದಗಿಸಿ ಕೊಡುವ ನಿಟ್ಟಿನಲ್ಲಿ ಇಂದು ಉದ್ಘಾಟನೆಗೊಂಡ ನ್ಯಾಯಾಲಯ ಸಾರ್ಥಕವಾಗುತ್ತದೆ. ನಮ್ಮ ದೇಶಕ್ಕೆ ಸ್ವಾತಂತ್ರ ಒದಗಿಸಿಕೊಟ್ಟವರಲ್ಲಿ ನ್ಯಾಯಾದೀಶರ ಪಾತ್ರ ಬಹಳ ಅವರನ್ನು ಇಂದು ನಾವು ಸ್ಮರಿಸಬೇಕಾಗುತ್ತದೆ ನಾವು ಕಟ್ಟ ಕಡೆಯ ವ್ಯಕ್ತಿಗೂ ನ್ಯಾಯ ದೊರಕುವಂತೆ ಹಾಗೂ ಸಮಾಜದ ಧ್ವನಿಯಾಗಿ ನಮ್ಮ ವೃತ್ತಿಯನ್ನು ಮಾಡಬೇಕು ಜನರ ಹಿತವನ್ನು ಬಯಸುವವರು ದಾರ್ಶನಿಕರಾಗುತ್ತಾರೆ ದೇಶಕ್ಕಾಗಿ ಪ್ರತಿಯೊಬ್ಬ ವ್ಯಕ್ತಿಯು ದುಡಿಯಬೇಕು ಅಂದಾಗ ದೇಶ ಅಭಿವೃದ್ಧಿ ಹೊಂದಲು ಸಾಧ್ಯ ಮಕ್ಕಳಿಗೆ ಉತ್ತಮ ಶಿಕ್ಷಣ, ಸಂಸ್ಕಾರ ನೀಡಿ ವಿದ್ವತ್ವವನ್ನು ಲೋಕ ಕಲ್ಯಾಣಕ್ಕೆ ಬಳಸಿಕೊಳ್ಳಬೇಕು ಎಂದು ಅವರು ಹೇಳಿದರು.ಕರ್ನಾಟಕ ಸಾಬೂನು ಮತ್ತು ಮನಾರ್ಜಕಜ ನಿಗಮದ ಅಧ್ಯಕ್ಷರು ಹಾಗೂ ಮುದ್ದೇಬಿಹಾಳ ಕ್ಷೇತ್ರದ ಶಾಸಕರಾದ ಸಿ.ಎಸ್. ನಾಡಗೌಡ(ಅಪ್ಪಾಜಿ) ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಾತನಾಡಿ ಈ ಬಾಗದಲ್ಲಿ ಅತಿ ಹೆಚ್ಚು ಭೂ ಸ್ವಾಧೀನ ಕುರಿತು ಹೆಚ್ಚು ವ್ಯಾಜ್ಯಗಳಿವೆ, ವ್ಯಾಜ್ಯಗಳು ಆದಷ್ಟು ಬೇಗ ಇತ್ಯರ್ಥಗೊಳಿಸುವಂತಾಗಬೇಕು. ತಾಳಿಕೋಟೆಗೆ ನೂತನ ನ್ಯಾಯಾಲಯಗಳ ಸಂಕೀರ್ಣ ನಿರ್ಮಾಣಕ್ಕೆ ಕ್ರಮ ವಹಿಸಲಾಗುವುದು ಸಿ.ಎಸ್.ಆರ್ ಅನುದಾನದಡಿ ವಕೀಲರಿಗೆ ಆಧುನಿಕ ಉಪಕರಣಳನ್ನು ಅಳವಡಿಸಲು ಕ್ರಮ ವಹಿಸಲಾಗುವುದು ಎಂದು ಅವರು ಹೇಳಿದರು.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶಿವಾಜಿ ಅನಂತ ನಲವಡೆ ಸ್ವಾಗತಿಸಿದರು, ಮುದ್ದೇಬಿಹಾಳ ನ್ಯಾಯವಾದಿಗಳ ಸಂಘದ ಅಧ್ಯಕ್ಷರಾದ ಶಶಿಕಾಂತ ಶಿವಪ್ಪ ಮಾಲಗತ್ತಿ ಪ್ರಾಸ್ತಾವಿಕ ಮಾತನಾಡಿದರು.ಕಾರ್ಯಕ್ರಮದಲ್ಲಿ ನ್ಯಾಯವಾದಿಗಳ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಪಿ.ಬಿ ಗೌಡರ ತಾಲೂಕು ನ್ಯಾಯವಾದಿಗಳ ಸಂಘದ ಅಧ್ಯಕ್ಷರುಗಳು, ಕಾರ್ಯಕಾರಿ ಸಮಿತಿ ಸದಸ್ಯರು, ನ್ಯಾಯವಾದಿಗಳ ಸಂಘ ಸದಸ್ಯರುಗಳು, ನ್ಯಾಯಾಲಗಳ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಹಾಗೂ ಇತರರು ಉಪಸ್ಥಿತರಿದ್ದರು.

**********

# ನ್ನಡ ಭಾಷೆ ಉಳಿಸಿ- ಬೆಳೆಸಲು ಸರ್ಕಾರವು ಎಲ್ಲ ಇಲಾಖೆಗಳಲ್ಲಿ ಕನ್ನಡ ಬಳಕೆ ಕಡ್ಡಾಯಗೊಳಿಸಿ ಆದೇಶಿಸಬೇಕು: ಅಶೋಕ ಮಣಿ

ಮುದ್ದೇಬಿಹಾಳ: ಕನ್ನಡ ಭಾಷೆ ಉಳಿಸಿ, ಬೆಳೆಸಲು ಸರ್ಕಾರವು ಎಲ್ಲ ಇಲಾಖೆಗಳಲ್ಲಿ ಕನ್ನಡ ಬಳಕೆ ಕಡ್ಡಾಯಗೊಳಿಸಿ ಆದೇಶಿಸಬೇಕು. ಇತ್ತೀಚಿನ ದಿನಗಳಲ್ಲಿ ನ್ಯಾಯಾಲಯಗಳ ನ್ಯಾಯಾಧೀಶರು ಕನ್ನಡದಲ್ಲೇ ತೀರ್ಪುಗಳನ್ನು ಕೊಡುತ್ತಿರುವುದು ಕನ್ನಡಿಗರು ಹೆಮ್ಮೆ ಪಡುವಂಥ ಸಂಗತಿಯಾಗಿದೆ ಎಂದು ಮುದ್ದೇಬಿಹಾಳ ತಾಲೂಕು 5ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾದ ಅಶೋಕ ಮಣಿ ಅವರು ಹೇಳಿದರು.

> ಸಮ್ಮೇಳನ ಉದ್ಘಾಟಿಸಬೇಕಿದ್ದ ಶಾಸಕರು ಸಮಯಕ್ಕೆ ಸರಿಯಾಗಿ ಬರಲಿಲ್ಲ. ಅವರು ಬರುವವರೆಗೂ ವೇದಿಕೆಯಲ್ಲಿದ್ದ ಗಣ್ಯರನ್ನು ಮಾತನಾಡಿಸಲಾಯಿತು. ಕೊನೆಗೆ ಸರ್ವಾಧ್ಯಕ್ಷರ ಭಾಷಣವನ್ನೂ ಮಾಡಿಸಲಾಯಿತು. ಬೆಳಿಗ್ಗೆ 10-30ಕ್ಕೆ ಉದ್ಘಾಟನೆಗೊಳ್ಳಬೇಕಿದ್ದ ಸಮ್ಮೇಳನ ಮದ್ಯಾಹ್ನ 2 ಗಂಟೆಗೆ ಉದ್ಘಾಟನೆಗೊಳ್ಳುವಂತಾಯಿತು. ಸರ್ವಾಧ್ಯಕ್ಷರ ಭಾಷಣ ಮುಗಿದ ನಂತರ ಶಾಸಕರು ಕೊನೆಯಲ್ಲಿ ಉದ್ಘಾಟಕರ ಭಾಷಣ ಮಾಡಿ ಸಮ್ಮೇಳನದ ಸಂಪ್ರದಾಯ ಮುರಿದಿರುವುದು ಸೇರಿದ್ದ ಸಾಹಿತಿಗಳ ಟೀಕೆಗೆ ಗುರಿಯಾಯಿತು. ಈ ವಿಷಯದಲ್ಲಿ ಜಿಲ್ಲಾಧ್ಯಕ್ಷ, ತಾಲೂಕಾಧ್ಯಕ್ಷರು ಅಸಹಾಯಕತೆ ವ್ಯಕ್ತಪಡಿಸಿದರು.



ಪಟ್ಟಣದ ಮಲಿಕಸಾಬ ನದಾಫ ಅಮರಗೋಳ ಮಂಟಪದ ಮಾತೋಶ್ರೀ ಗಂಗಮ್ಮ ವೀರಪ್ಪ ಚಿನಿವಾರ ಪ್ರಧಾನ ವೇದಿಕೆಯಲ್ಲಿ ಶನಿವಾರ ನಡೆದ ಮುದ್ದೇಬಿಹಾಳ ತಾಲೂಕು 5ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿ ಮಾತನಾಡಿದರು.

ಗಡಿನಾಡ ಪ್ರದೇಶಗಳಲ್ಲಿರುವ ಕನ್ನಡ ಶಾಲೆಗಳನ್ನು ಹೆಚ್ಚು ಅಭಿವೃದ್ಧಿಗೊಳಿಸಬೇಕು. ಗ್ರಾಮೀಣ ಪ್ರದೇಶದ ಕನ್ನಡ ಶಾಲೆಗಳನ್ನು ಸುಸಜ್ಜಿತಗೊಳಿಸಿ ಉತ್ತಮ ಶಿಕ್ಷಕರ ನೇಮಿಸಬೇಕು. ಪ್ರತಿಯೊಂದು ಪ್ರಾಥಮಿಕ, ಪ್ರೌಢಶಾಲೆಗಳಲ್ಲಿ ವಾಚನಾಲಯ ಸ್ಥಾಪಿಸಿ ಕನ್ನಡ ಸಾಹಿತಿಗಳ ಪುಸ್ತಕಗಳನ್ನು ಓದುವ, ಜ್ಞಾನ ಬೆಳೆಸಿಕೊಳ್ಳುವ ಅಭಿರುಚಿ ಮೂಡಿಸಲು ಕ್ರಮ ಕೈಕೊಳ್ಳಬೇಕು. ಸಾಹಿತಿಗಳು, ಲೇಖಕರು ಪ್ರಕಟಿಸಿದ ಪುಸ್ತಕಗಳನ್ನು ಶೇ.50ರಷ್ಟು ಕೊಂಡುಕೊಳ್ಳುವಂತೆ ಪುಸ್ತಕ ಪ್ರಾಧಿಕಾರ, ಗ್ರಂಥಾಲಯ ಇಲಾಖೆ, ಶಾಲೆ, ಕಾಲೇಜುಗಳಿಗೆ ಸೂಚಿಸಬೇಕು. ಬರೆಯುವವನ ಕೈ ಬರಿಗೈ ಎಂಬಂತೆ ಬಡ ಬರಹಗಾರರಿಗೆ, ಸಾಹಿತಿಗಳಿಗೆ, ಸಾಹಿತ್ಯದ ಅಧ್ಯಯನಕ್ಕಾಗಿ ಪ್ರೇಕ್ಷಣಿಯ ಸ್ಥಳ ವೀಕ್ಷಿಸಲು ಉಚಿತ ಬಸ್ ಪಾಸ್ ನೀಡಬೇಕು ಎಂದು ಸರ್ಕಾರಕ್ಕೆ ಸಲಹೆ ನೀಡಿದರು.

ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಕೆಎಸ್ ಡಿ ನಿಗಮದ ಅಧ್ಯಕ್ಷ ಹಾಗೂ ಶಾಸಕ ಸಿ.ಎಸ್.ನಾಡಗೌಡರು, ಸಮ್ಮೇಳನ ಕನ್ನಡ ಚಿಂತನೆಯ, ಭಾಷೆ, ಸಂಸ್ಕೃತ ಶ್ರೀಮಂತಗೊಳಿಸುವ ವೇದಿಕೆಯಾಗಬೇಕು. ಮೂಲಭೂತ ವಿಚಾರಗಳನ್ನು ಮೆಲುಕು ಹಾಕುವಂತಿರಬೇಕು. ಆಧುನಿಕ ತಂತ್ರಜ್ಞಾನ ಬಳಕೆಯಾಗಬೇಕು. ಯುವಕರಿಗೆ ಸರಿಯಾದ ಮಾರ್ಗದರ್ಶನ ಸಿಗಬೇಕು. ಒಳ್ಳೇಯದನ್ನು ಪ್ರೋತ್ಸಾಹಿಸಬೇಕು. ಶರಣ ನಾಡಿನ ಬಳಗ ಅತ್ಯಂತ ಶ್ರೀಮಂತ ಬಳಗವಾಗಿದ್ದು ಇದನ್ನು ರಕ್ಷಿಸುವ ಕೆಲಸ ಆಗಬೇಕು. ಇತಿಹಾಸ ಮರೆಮಾಚಿದರೆ ಮುಂದಿನ ಪೀಳಿಗೆಗೆ ಸತ್ಯ ತಿಳಿಸಲಾಗೊಲ್ಲ ಎನ್ನುವುದನ್ನು ಅರಿತುಕೊಳ್ಳಬೇಕು. ಕೃಷ್ಣಾ ನದಿ ತೀರದ ಐತಿಹಾಸಿಕ ಅಮರಗೋಳ ಗ್ರಾಮ ಶರಣರ ಸ್ಮಾರಕ ಆಗಬೇಕು ಎಂದರು.

ಈ ವೇಳೆ ಪ್ರಥಮ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದ ಪ್ರೊ.ಬಿ.ಎಂ.ಹಿರೇಮಠ, ಬಿಇಓ ಬಿ.ಎಸ್.ಸಾವಳಗಿ,ಬಿಜೆಪಿ ಜಿಲ್ಲಾ ಅಧ್ಯಕ್ಷ ಆರ್.ಎಸ್.ಪಾಟೀಲ ಕೂಚಬಾಳ,ಮಾಜಿ ಜಿಲ್ಲಾ ಉಪಾಧ್ಯಕ್ಷ ಪ್ರಭುಗೌಡ ದೇಸಾಯಿ, ನಾಲತವಾಡ ಕಸಾಪ ವಲಯ ಘಟಕದ ಅಧ್ಯಕ್ಷ ಡಾ.ದತ್ತಾತ್ರೇಯ ಮಳಖೇಡ, ಕಸಾಪ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲಿಕಾರ, ಕಸಾಪ ತಾಲೂಕಾಧ್ಯಕ್ಷ ಕಾಮರಾಜ ಬಿರಾದಾರ ಕನ್ನಡ, ಸಾಹಿತ್ಯ, ಸಂಘಟನೆ ಕುರಿತು ಮಾತನಾಡಿದರು. ಸಾನಿಧ್ಯ ವಹಿಸಿದ್ದ ಡಾ.ಶ್ರೀಗುರು ಚನ್ನವೀರ ಶಿವಾಚಾರ್ಯರು ಆಶೀರ್ವಚನ ನೀಡಿದರು.

ಖಾರಿಇಸಾಕ್ಅಹ್ಮದ್ ಮಾಗಿ, ಪುರಸಭೆ ಅಧ್ಯಕ್ಷ ಮಹಿಬೂಬ ಗೊಳಸಂಗಿ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಅರವಿಂದ ಹೂಗಾರ, ಕಸಾಪ ಗೌರವಾಧ್ಯಕ್ಷ ಎಂ.ಬಿ.ನಾವದಗಿ, ತಾಪಂ ಇಓ ಎನ್.ಎಸ್.ಮಸಳಿ, ಪುರಸಭೆ ಮುಖ್ಯಾಧಿಕಾರಿ ಮಲ್ಲನಗೌಡ ಬಿರಾದಾರ, ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಸವರಾಜ ಮುದ್ನೂರ, ಗಣ್ಯರಾದ ಬಿ.ಸಿ.ಮೋಟಗಿ, ಜಯಶ್ರೀ ಹಿರೇಮಠ, ಮದನಪಟೇಲ ಸಾಲವಾಡಗಿ ಬಾಂಬೆ, ಗುತ್ತಿಗೆದಾರ, ಕಾಂಗ್ರೆಸ್ ಮುಖಂಡ ಸಿ.ಬಿ.ಅಸ್ಕಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗುರು ತಾರನಾಳ ಇನ್ನಿತರು ವೇದಿಕೆಯಲಿದ್ದರು.

ಇದೇ ವೇಳೆ ಸಮ್ಮೇಳನದ ಸ್ಮರಣ ಸಂಚಿಕೆ ಬಿಡುಗಡೆಗೊಳಿಸಲಾಯಿತು. ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಡಾ. ಎಂ.ಎಂ.ಬೆಳಗಲ್ಲ ಅವರು ಕವನಸಂಕಲನ ಜೀವನದಿ, ಡಾ.ಪ್ರಕಾಶ ನರಗುಂದ ಅವರ ಅಭಿನಂದನ ಗ್ರಂಥ ಸಾರ್ಥಕ ಬದುಕು, ಶಿಕ್ಷಕಿ ಸುಮಲತಾ ಗಡಿಯಪ್ಪನವರ್ ಅವರ ನಾನಾಗಲಾರೆ ಬುದ್ಧ ಕವನ ಸಂಕಲನ, ಹುಸೇನಸಾಬ ಬಳಬಟ್ಟಿ ಸಂಪಾದಿತ ಕಂಕಣಭಾಗ್ಯ, ಕೊನೆಯ ಉಸಿರು ಗ್ರಂಥ, ಶಿವಪುತ್ರ ಅಜಮನಿ ಅವರ ಮನೆಗೂ ಮೈಲಿಗೆ ಕೃತಿ, ವೆಂಕಟೇಶ ಮಾಚಕನೂರ ಅವರ ಶಿಕ್ಷಣದಲ್ಲಿ ಮೌಲ್ಯಗಳು, ಸಮ್ಮೇಳನಾಧ್ಯಕ್ಷ ಅಶೋಕ ಮಣಿ ಅವರ ಅಮೃತ ಬಿಂದು ಕವನ ಸಂಕಲನ ಲೋಕಾರ್ಪಣೆಗೊಳಿಸಲಾಯಿತು.

ಸಂಗಮೇಶ ಶಿವಣಗಿ ತಂಡದವರು ಪ್ರಾರ್ಥಿಸಿದರು. ವೈ.ಎಚ್.ವಿಜಯಕರ್ ಸ್ವಾಗತಿಸಿದರು. ಬಸವರಾಜ ಹಂಚಲಿ, ಹೇಮಾ ಬಿರಾದಾರ ನಿರೂಪಿಸಿದರು.

# ಉ.ಕ. ಜಿಲ್ಲೆಯಲ್ಲಿ ಪ್ರಥಮ ಬಾರಿಗೆ ಕಾಫಿ ಬೆಳೆದು ಯಶಸ್ವಿಯಾದ ದಂಪತಿಗಗಳು

ಕರಾವಳಿ ಭಾಗದ ರೈತರು ಭತ್ತ, ಅಡಿಕೆ, ಬಾಳೆ ಬೆಳೆಗಳನ್ನು ಬೆಳೆದು ಕೃಷಿಯಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಆದರೆ ಈ ಭಾಗದಲ್ಲಿ ಕಾಫಿ ಬೆಳೇಯನ್ನೂ ಕೂಡಾ ಬೆಳೆಯಬಹುದು ಎಂಬುದನ್ನು ಹೊನ್ನಾವರ ತಾಲೂಕಿನ ಅನಂತವಾಡಿ ಗ್ರಾಮ ಪಂಚಾಯತ್ನ ಭಾರತಿ ಯಾಜಿ ದಂಪತಿಗಳು ತಮ್ಮ ಅಡಿಕೆ ತೋಟದಲ್ಲಿ ಸಾಧಿಸಿ ತೋರಿಸಿದ್ದಾರೆ.

ಹೊನ್ನಾವರ ತಾಲೂಕಿನ ಅನಂತವಾಡಿ ಗ್ರಾಮ ಪಂಚಾಯತ್ನ ಭಾರತಿ ಯಾಜಿ ದಂಪತಿಗಳು ಮೂಲತಃ ಕೃಷಿಕರಾಗಿದ್ದು , ತಮ್ಮ ನಾಲ್ಕು ಎಕರೆ ಜಮೀನಿನಲ್ಲಿ ಅಡಿಕೆ ತೋಟ ನಿರ್ಮಿಸಿಕೊಂಡಿದ್ದು ಕೃಷಿಯಲ್ಲಿ ವಿಭಿನ್ನತೆ ತೋರಿ ತೋಟಗಾರಿಕಾ ಬೆಳೆಗಳಾದ ಕಾಳು ಮೆಣಸು, ಯಾಲಕ್ಕಿ, ವೀಳ್ಯದೆಲೆ ಬೆಳೆಯುತ್ತಿದ್ದು, ಕೃಷಿಯಲ್ಲಿ ಹೊಸತೇನನ್ನಾದರೂ ಮಾಡಬೇಕೆಂಬ ಹಂಬಲದಿಂದ ತೋಟಗಾರಿಕೆಯಲ್ಲಿ ಆಸಕ್ತಿ ಕಂಡು ತೋಟಗಾರಿಕಾ ಬೆಳೆಗಳಿಗೆ ಆದ್ಯತೆ ನೀಡುತ್ತಿದ್ದು, ಇದೀಗ ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿ ಕಾಫಿ ಗಿಡವನ್ನು ಬೆಳೆದು ಜಿಲ್ಲೆಯಲ್ಲಿಯೇ ಕಾಫಿ ಬೆಳೆದ ಪ್ರಥಮ ಕೃಷಿಕರಾಗಿದ್ದಾರೆ.



ಕಾಫಿ ಬೆಳೆಯ ಅನುಷ್ಠಾನ: ತೋಟಗಾರಿಕಾ ಇಲಾಖೆಯಡಿ ಉದ್ಯೋಗ ಖಾತ್ರಿ ಯೋಜನೆಯಡಿ 2024-25ನೇ ಸಾಲಿನಡಿ 1527004/ಖಈ /93393042894900245 ಕಾಮಗಾರಿ ಸಂಕೇತದಡಿ ಅಂದಾಜು 98 ಸಾವಿರ ಸಹಾಯಧನ ಪಡೆದು ತಮ್ಮ 2 ಎಕರೆ ಅಡಿಕೆ ತೋಟದಲ್ಲಿ 1000 ಕಾಫಿ ಗಿಡಗಳನ್ನು ನೆಟ್ಟು ಅವುಗಳ ಪೋಷಣೆಯಲ್ಲಿ ತೊಡಗಿದ್ದಾರೆ. ಕೃಷಿಯಲ್ಲಿ ಹೆಚ್ಚಿನ ಸಮಯವನ್ನು ಕಳೆಯುವ ಈ ದಂಪತಿಗಳು , ಈ ಗಿಡಗಳನ್ನು ತಮ್ಮ ಮಕ್ಕಳಂತೆ ಕಾಪಾಡಿದ್ದು, ಅವುಗಳಿಗೆ ನೀರುಣಿಸುವುದು, ಗೊಬ್ಬರ, ಬರಾವು ಇತ್ಯಾದಿ ಕೆಲಸಗಳನ್ನು ದಣಿವಿಲ್ಲದೆ ಕೈಗೊಳ್ಳುತ್ತಿದ್ದಾರೆ.

ನಿರ್ವಹಣೆ : ಕಾಫಿ ಗಿಡಕ್ಕೆ ತಂಪು ವಾತಾವರಣ ಅತ್ಯಾವಶ್ಯಕವಾಗಿದ್ದು, ಅಡಿಕೆ ಗಿಡಗಳ ಮಧ್ಯದಲ್ಲಿ ಕಾಫಿ ಗಿಡಗಳನ್ನು ಬೆಳೆಸಿದ್ದಾರೆ. ಈ ಸಸಿಗಳನ್ನು ಕೇರಳದಿಂದ ತರಿಸಿದ್ದು ಒಂದು ಗಿಡಕ್ಕೆ ತಲಾ 70 ರೂ ವೆಚ್ಚ ತಗುಲಿದೆ. ಈ ಫಲಾನುಭವಿಗಳು ತಮ್ಮ ಬೆಳೆಗಳಿಗೆ ಹನಿ ನೀರಾವರಿ ಪದ್ಧತಿ ಅಳವಡಿಸಿಕೊಂಡಿದ್ದು, ರಾಸಾಯನಿಕ ಗೊಬ್ಬರದ ಜೊತೆಗೆ ಸಗಣಿ ನೀರು, ಸ್ಲರಿ ಬಳಸಿ ಗಿಡಗಳಿಗೆ ಕೀಟಗಳ ಭಾಧೆ ತಾಕದಂತೆ ಎಚ್ಚರಿಕೆ ವಹಿಸುತ್ತಿದ್ದಾರೆ.

ಆದಾಯ : ಕಾಫಿ ಬೆಳೆ ಇಲ್ಲಿನ ವಾತಾವರಣಕ್ಕೆ ಮೊದಲ ಬೆಳೆಯಾಗಿದ್ದರಿಂದ ಇದೀಗ ತಾನೇ ಹೂವು ಚಿಗುರಿದ್ದು ಮುಂದಿನ ದಿನಗಳಲ್ಲಿ ಆದಾಯ ಹಾಗೂ ಬೆಳೆಯ ಕುರಿತಾದ ಪ್ರಾಯೋಗಿಕ ಫಲದ ನಿರೀಕ್ಷೆಗೆ ಕುತೂಹಲದಿಂದ ಕಾಯಬೇಕಿದೆ.

ಕಾಫಿ ಬೆಳೆ ಬೆಳೆದಿರುವ ಕುರಿತಂತೆ ಮಾತನಾಡಿದ ಫಲಾನುಭವಿ ಭಾರತಿ ಯಾಜಿ ದಂಪತಿಗಳು, ನಾವು ಮೊದಲ ಬಾರಿಗೆ ಕಾಫಿ ಬೆಳೆದಿದ್ದೇವೆ. ಇದನ್ನು ಬೆಳೆಯುವ ಕುರಿತು ತೋಟಗಾರಿಕಾ ಇಲಾಖೆಯವರು ಸಂಪೂರ್ಣ ಮಾಹಿತಿ ನೀಡಿದ್ದಾರೆ. ಪರಿಣಿತರ ಕೆಲವು ಸಲಹೆ ಮೇರೆಗೆ ಈ ಗಿಡಗಳನ್ನೂ ಪೋಷಿಸುತ್ತಿದ್ದು, ಕಾಫಿ ಬೀಜಗಳ ಇಳುವರಿಯ ಬಗ್ಗೆ ಸಾಕಷ್ಟು ನಿರೀಕ್ಷೆ ಇಟ್ಟುಕೊಂಡಿದ್ದು, ಜಿಲ್ಲೆಯ ಇತರೇ ರೈತರು ಸಹ ತಮ್ಮ ತೋಟಗಳಲ್ಲಿ ಇದನ್ನು ಬೆಳೆಯಬಹುದಾಗಿದೆ, ಮುಂದಿನ ದಿನಗಳಲ್ಲಿ ಕಾಫಿಯನ್ನೂ ಕೂಡಾ ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆಯನ್ನಾಗಿ ಮಾಡಿಕೊಳ್ಳಬಹುದು ಎಂದರು.

# ರಾಜ್ಯದಾದ್ಯಂತ ಕಿನ್ನರಿ ಬೊಮ್ಮಯ್ಯ ಜಯಂತಿ ಆಚರಿಸಿ: ಮಾತಾಜಿ



ಯರಗಟ್ಟಿ: 'ಕಿನ್ನರಿ ಬೊಮ್ಮಯ್ಯನವರು 12ನೇ ಶತ ಮಾನದ ಬಸವಾದಿ ಶರಣರ ಸಮಕಾಲಿನವರಾಗಿದ್ದರು. ರಾಜ್ಯ ದಾದ್ಯಂತ ಅವರ ಜಯಂತಿ ಆಚರಿಸಬೇಕು' ಎಂದು ಓಂಕಾರೇಶ್ವರಿ ಮಾತಾಜಿ ಹೇಳಿದರು.

ಪಟ್ಟಣದ ಮಹಾಂತ ದುರದುಂಡೇಶ್ವರ ಶ್ರೀಮಠದಲ್ಲಿ ಕನ್ನಡ ಸಾಹಿತ್ಯ ಪರಿ?ತ್ ಹಾಗೂ ವೈದ್ಯ ಸಂಗಣ್ಣ ನಿಸರ್ಗ ಚಿಕಿತ್ಸಾಲಯ ಮತ್ತು ಯೋಗ ಕೇಂದ್ರ ಕಪ್ಪತಗುಡ್ಡ ಇವರ ಸಹಯೋಗದಲ್ಲಿ ನಡೆದ ಕಿನ್ನರಿ ಬ್ರಹ್ಮೇಶ್ವರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿ,'ಕಿನ್ನರಿ ಬೊಮ್ಮಯ್ಯನವರು ಹಾಕಿಕೊಟ್ಟ ಮಾರ್ಗ ಜಗತ್ತಿನಾದ್ಯಂತ ಸರ್ವಕಾಲಿಕ' ಎಂದರು.

ಓಂಕಾರೇಶ್ವರಿ ಮಾತಾಜಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ವೇಳೆ ಎಸ್. ಎಸ್. ಕುರುಬಗಟ್ಟಿಮಠ, ಕಸಾಪ ಅಧ್ಯಕ್ಷ ತಮ್ಮಣ್ಣ ಕಾಮಣ್ಣವರ, ದೇವೇಂದ್ರ ಕಮ್ಮಾರ, ಡಾ. ವಿಶ್ವನಾಥ ತಾವಂಶಿ, ಡಾ. ರಾಜಶೇಖರ ಬಿರಾದಾರ, ಈರಣ್ಣಾ ಮಠಪತಿ, ಶಿಲ್ಪಿ ಪ್ರಭು ಕಮ್ಮಾರ, ಎಲ್. ವ್ಹಿ. ತುಪ್ಪದ, ಶಿವಾನಂದ ಮದ್ದಾನಿ, ವಿಶ್ವನಾಥ ಹೋಳಿಮಠ, ಬಿ. ಡಿ. ಬಳಿಗಾರ, ವೇದಾ ಕಮ್ಮಾರ, ಅನುಶ್ರೀ ಬಿರಾದಾರ, ನಿರ್ಮಲಾ ಕಮ್ಮಾರ, ಪೂರ್ಣಿಮಾ ಪತ್ತಾರ, ಸುಶೀಲಾ ರಡ್ಡಿ ಸೇರಿದಂತೆ ಅನೇಕ ಇದ್ದರು.

********

# ಶಾಲೆ ವಾರ್ಷಿಕೋತ್ಸವ ಸಮಾರಂಭ ಉದ್ಘಾಟನೆ



ರಾಯಬಾಗ: ವಿದ್ಯಾರ್ಥಿಗಳ ಜೀವನದ ಮಹತ್ವದ ಘಟ್ಟವಾದ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಪರೀಕ್ಷೆ ಸಮಯದಲ್ಲಿ ಓದಿಗೆ ಹೆಚ್ಚಿನ ಮಹತ್ವ ಕೊಡಬೇಕೆಂದು ನೀಲಜಿ ಕೆಪಿಎಸ್ ಶಾಲೆ ಪ್ರಾಚಾರ್ಯ ಆಯ್.ಆರ್.ನದಾಫ್ ಹೇಳಿದರು.

ಇತ್ತೀಚಿಗೆ ತಾಲೂಕಿನ ಸುಟ್ಟಟ್ಟಿಯ ಉನ್ನತಿಕರಿಸಿದ ಮೊರಾರ್ಜಿ ದೇಸಾಯಿ ವಸತಿ ಶಾಲೆ ವಾರ್ಷಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು ಮಕ್ಕಳು ಸರ್ಕಾರ ನೀಡುವ ಸೌಲಭ್ಯಗಳ ಸದುಪಯೋಗ ಪಡೆದುಕೊಳ್ಳಬೇಕೆಂದರು.

ವಕೀಲರಾದ ಸಾರಿಕಾ ಕಾಂಬಳೆ ಅವರು, ಮಕ್ಕಳಿಗೆ ಪೋಕ್ಸೋ ಕಾಯಿದೆ ಹಾಗೂ ಬಾಲ್ಯ ವಿವಾಹ ನಿಷೇಧ ಕಾಯ್ದೆ ಗಳ ಬಗ್ಗೆ ಕಾನೂನಿನ ಅರಿವನ್ನು ಮೂಡಿಸಿದರು.

ನೀಲಜಿ ಸಿ.ಆರ್.ಪಿ ಬಸವರಾಜ ಕಾಂಬಳೆ ಅವರು ಮಾತನಾಡಿ, ಈ ಶಾಲೆ ಪ್ರಾಂಶುಪಾಲರಾದ ರೇವತಿ ಪಾಟೀಲ್ ಅವರ ಪರಿಶ್ರಮದಿಂದ ಶಾಲೆಯು ಪ್ರಗತಿ ಹೊಂದಿದೆ ಎಂದರು.

ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ರೇವತಿ ಪಾಟೀಲ ವಹಿಸಿದ್ದರು.

ಡಿ.ಎಸ್.ಗುಡಿಮನಿ, ರಮೇಶ ಶಿವಕ್ಕನವರ, ಶೋಭಾ ಕಾನಡೆ, ಅಶ್ವಿನಿ ಹೊನ್ನೋಲೆ, ಆಯ್.ಎಸ್.ಪಾಟೀಲ, ಜೆಡ್.ಆರ್.ಮುಲ್ಲಾ, ದಾದಾ ಪಾಟೀಲ, ಹಾಗೂ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಇದ್ದರು.

******

# ಸನ್ಮಾರ್ಗದತ್ತ ಕರೆದೊಯ್ದ ಸಂತ ಸೇವಾಲಾಲ-ಸವದಿ



ರಬಕವಿ-ಬನಹಟ್ಟಿ,ಫೆ16:ಬಾಲ ಬ್ರಹ್ಮಚಾರಿಯಾಗಿ, ತಪಸ್ಸು, ಧ್ಯಾನ ಮತ್ತು ಭಕ್ತಿಯ ಮೂಲಕ ಜನಾಂಗದ ಸೇವೆಯನ್ನು ಮಾಡಿದ ಹಿತಚಿಂತಕ. ಆಧ್ಯಾತ್ಮದ ಮೂಲಕ ತಮ್ಮ ಜನಾಂಗವನ್ನು ಸನ್ಮಾರ್ಗದತ್ತ ಕೊಂಡೊಯ್ದ ಮಾರ್ಗದರ್ಶಕ ಸಂತ ಸೇವಾಲಾಲಾರಾಗಿದ್ದರು ಎಂದು ತೇರದಾಳ ಮತಕ್ಷೇತ್ರದ ಶಾಸಕ ಸಿದ್ದು ಸವದಿ ತಿಳಿಸಿದರು.

ರಬಕವಿ-ಬನಹಟ್ಟಿ ತಹಶೀಲ್ದಾರ್ ಕಾರ್ಯಾಲಯದಲ್ಲಿ ಸಂತ ಸೇವಾಲಾರರ ಜಯಂತ್ಯುತ್ಸವದ ನಿಮಿತ್ತವಾಗಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.

ಸೇವಾಲಾಲರ ತತ್ವ, ಸಿದ್ಧಾಂತ, ಆದರ್ಶಗಳನ್ನು ಪ್ರತಿಯೊಬ್ಬರು ಆಚರಿಸುವುದರ ಮೂಲಕ ಅವರಿಗೆ ಗೌರವ ಸಲ್ಲಿಸಬೇಕು. ಭವಾನಿ ದೇವಿ ಆರಾಧಕರಾಗಿದ್ದ ಸೇವಾಲಾಲರು ಅಸಾಧ್ಯವಾದುದನ್ನು ಸಾಧ್ಯವನ್ನಾಗಿಸಿದವರು. ಸೇವಾಲಾಲ ಸಮುದಾಯದವರು ಕೂಡಾ ತಮ್ಮ ಮಕ್ಕಳಿಗೆ ಉತ್ತಮವಾದ ಶಿಕ್ಷಣ ನೀಡುವಂತಾಗಬೇಕು. ಸಮುದಾಯವು ಶೈಕ್ಷಣಿಕವಾಗಿ ಅಭಿವೃದ್ಧಿಯಾದರೆ ತಮಗೆ ಅನುಕೂಲವಾಗುತ್ತದೆ ಎಂದು ಶಾಸಕ ಸವದಿ ತಿಳಿಸಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ ಗಿರೀಶ ಸ್ವಾದಿ, ಶಿರಸ್ತೆದಾರರಾದ ಎಸ್. ಎಂ. ಕೂಗಾಟೆ, ರಾಜಶೇಖರ ಸಾತಿಹಾಳ, ಕಂದಾಯ ವೃತ್ತ ನಿರೀಕ್ಷಕರಾದ ಪ್ರಕಾಶ ಮಠಪತಿ, ಬಿ. ಎಂ. ಹಳೇಮನಿ ಸೇರಿದಂತೆ ಸೇವಾಲಾಲ ಸಮುದಾಯದ ಪ್ರಮುಖರು ಇದ್ದರು.

********

# ಇಂದು ಕನಕಗಿರಿಯಲ್ಲಿ ಲೋಕಾಯುಕ್ತರಿಂದ ಅಹವಾಲು ಸ್ವೀಕಾರ

ಕೊಪ್ಪಳ: ಗೌರವಾನ್ವಿತ ಲೋಕಾಯುಕ್ತರು ಬೆಂಗಳೂರು ಹಾಗೂ ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಅವರ ಆದೇಶದ ಮೇರೆಗೆ ಕೊಪ್ಪಳ ಲೋಕಾಯುಕ್ತ ಅಧಿಕಾರಿಗಳಿಂದ ಕನಕಗಿರಿ ತಾಲ್ಲೂಕಿನಲ್ಲಿ ಸಾರ್ವಜನಿಕರ ಕುಂದುಕೊರತೆಗಳ ಅಹವಾಲು ಸ್ವೀಕಾರಿಸಲು ಫೆಬ್ರವರಿ 18 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಕನಕಗಿರಿ ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ಅಹವಾಲು ಸ್ವೀಕಾರ ಸಭೆಯನ್ನು ಹಮ್ಮಿಕೊಳ್ಳಲಾಗಿದೆ.

ಕನಕಗಿರಿ ತಾಲ್ಲೂಕು ವ್ಯಾಪ್ತಿಯ ಸಾರ್ವಜನಿಕರಲ್ಲಿ ಯಾರಿಗಾದರೂ ಸರ್ಕಾರಿ ಅಧಿಕಾರಿಗಳಿಂದ ತಮಗೆ ಆಗಬೇಕಾದ ಕೆಲಸಗಳಲ್ಲಿ ವಿಳಂಬವಾಗಿದ್ದರೆ ಅಥವಾ ಅಧಿಕಾರಿಗಳು ನ್ಯಾಯಯುತವಾಗಿ ಮಾಡಿಕೊಡಬೇಕಾದ ಕೆಲಸಗಳಲ್ಲಿ ವೃಥಾ ತೊಂದರೆ ಕೊಡುತ್ತಿದ್ದರೆ ಅಥವಾ ಲಂಚ ಕೇಳುವುದು ಇತ್ಯಾದಿ ದುರಾಡಳಿತದಲ್ಲಿ ತೊಡಗಿದ್ದರೆ, ಈ ಕುರಿತು ದೂರು ಸ್ವೀಕರಿಸಲು ಲೋಕಾಯುಕ್ತರಿಂದ ಸಾರ್ವಜನಿಕ ಕುಂದುಕೊರತೆಗಳ ಅಹವಾಲು ಸ್ವೀಕರಿಸುವ ಕಾರ್ಯಕ್ರಮ ಹಾಗೂ ತಾಲ್ಲೂಕ ಮಟ್ಟದ ಅಧಿಕಾರಿಗಳ ಸಭೆ ನಡೆಸಲು ತೀರ್ಮಾನ ಮಾಡಲಾಗಿದೆ.

ಈ ಸಭೆಯಲ್ಲಿ ಲೋಕಾಯುಕ್ತ ಅಧಿಕಾರಿಗಳು ಎಲ್ಲಾ ಇಲಾಖೆಯ ತಾಲ್ಲೂಕ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ. ಸಾರ್ವಜನಿಕರು ತಮ್ಮ ಕುಂದುಕೊರತೆಗಳನ್ನು ನೇರವಾಗಿ ಬಂದು ಸಲ್ಲಿಸಲು ಹಾಗೂ ಸ್ಥಳದಲ್ಲಿಯೇ ಇದ್ದ ಅಧಿಕಾರಿಗಳೊಂದಿಗೆ ಕೆಲಸ ನೆರವೇರಿಸಿಕೊಳ್ಳಲು ಅಥವಾ ಸ್ಥಳದಲ್ಲಿಯೇ ದೂರು ಅರ್ಜಿಯ ಫಾರಂ ನಂ: 1 & 2 ತೆಗೆದುಕೊಂಡು ದೂರು ನೀಡಲು ಅನುಕೂಲ ಕಲ್ಪಿಸಲಾಗಿದ್ದು, ಕನಕಗಿರಿ ತಾಲ್ಲೂಕಿನ ಸಾರ್ವಜನಿಕರು ಈ ಸಭೆಯ ಸದುಪಯೋಗ ಪಡೆದುಕೊಳ್ಳಲು ಈ ಮೂಲಕ ತಿಳಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ: 9364062699, 9364062700, 9364062701, 9364062702 ಹಾಗೂ 9364062703 ಗೆ ಸಂಪರ್ಕಿಸಬಹುದು ಎಂದು ಕರ್ನಾಟಕ ಲೋಕಾಯುಕ್ತ ಕೊಪ್ಪಳ ಪೊಲೀಸ್ ಉಪಾಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶಿಂದಿಕುರಬೇಟ ಗ್ರಾಮದಲ್ಲಿ ಪ್ರಥಮ ಬಾರಿಗೆ ರಾಜ್ಯ ಮಟ್ಟದ ಗಾಯನ ಸ್ಪರ್ಧೆ

ಘಟಪ್ರಭಾ: ಸಮೀಪದ ಶಿಂದಿಕುರಬೇಟ ಗ್ರಾಮದಲ್ಲಿ ಶ್ರೀ ಗ್ರಾಮದೇವಿ(ದ್ಯಾಮವ್ವದೇವಿ) ಜಾತ್ರಾ ಮಹೋತ್ಸವ ನಿಮಿತ್ಯವಾಗಿ ಪ್ರಥಮ ಬಾರಿಗೆ ಶಿಂದಿಕುರಬೇಟ ಗಾನ ವೈಭವ ಸೀಸನ್-1 ರಾಜ್ಯ ಮಟ್ಟದ ಭವ್ಯ ಗಾಯನ ಸ್ಪರ್ಧೆ ಜರುಗಲಿದೆ.

ಆಡಿಷನ್‌ವನ್ನು ಲಕ್ಷ್ಮೀ ನಗರದ ಹತ್ತಿರವಿರುವ ಸರಕಾವಸ ಕಲ್ಯಾಣ ಮಂಟಪದಲ್ಲಿ ಜರುಗಲಿದ್ದು ಅಂತಿಮ ಸುತ್ತು ದಿ. 21 ರಂದು ಸಾಯಂಕಾಲ 5 ಗಂಟೆಗೆ ಗ್ರಾಮದ ಶ್ರೀ ವಿಠ್ಠಲ ದೇವಸ್ಥಾನ ಆವರಣದಲ್ಲಿ ಜರುಗಲಿದೆ. ಈ ಕಾರ್ಯಕ್ರಮದಲ್ಲಿ ರಾಜ್ಯ ಮಟ್ಟದ ಉತ್ತರ ಕರ್ನಾಟಕದ ಕಲಾವಿದರು ಭಾಗವಹಿಸಲಿದ್ದಾರೆ. ಪ್ರಥಮ ಬಹುಮಾನ ನಗದು 15,000/- ರೂ. ಮತ್ತು ಆಕರ್ಷಕ ಟ್ರೋಫಿ, ದ್ವಿತೀಯ ಬಹುಮಾನ ನಗದು 10,000/- ರೂ. ಮತ್ತು ಆಕರ್ಷಕ ಟ್ರೋಫಿ,ತೃತೀಯ ಬಹುಮಾನ ನಗದು 7,000/- ರೂ. ಮತ್ತು ಆಕರ್ಷಕ ಟ್ರೋಫಿ ನೀಡಲಾಗುತ್ತದೆ. ಸ್ಪರ್ಧಾಳುಗಳು ಪ್ರವೇಶ ಫೀ 250/- ರೂ ತುಂಬಿ ಹೆಸರು ನೊಂದಾಯಿಸಬೇಕು. ಭಾಗವಹಿಸುವ ಸ್ಪರ್ಧಾಳುಗಳು ಅವರು ಹಾಡುವ ಕರೋಕೆ ಅವರೇ ತರಬೇಕು.ಅಂತಿಮ ಹಂತಕ್ಕೆ ಆಯ್ಕೆಯಾಗುವ ಸ್ಪರ್ಧಾಳುಗಳಿಗೆ ಕಮೀಟಿಯವರೇ ಕರೆ ಮಾಡಿ ಆಯ್ಕೆಯ ಕುರಿತು ತಿಳಿಸುತ್ತಾರೆ.ಸ್ಪರ್ಧಾಳುಗಳು ಆಧಾರ ಕಾರ್ಡ ಹಾಗೂ ಪಾಸ್ ಪೋರ್ಟ ಸೈಜ ಫೋಟೋ ಕಡ್ಡಾಯವಾಗಿ ತರಬೇಕು. ಹೆಚ್ಚಿನ ಮಾಹಿತಿಗಾಗಿ ಮೋ: ನಂ-8095137251,7406050092 ಸಂಪರ್ಕಿಸಲು ಸಂಘಟಕರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

# ಯುವನಿಧಿ ಯೋಜನೆ ಭೌತಿಕ ಪರಿಶೀಲನೆಗೆ ಸೂಚನೆ

ಬೆಳಗಾವಿ : ರಾಜ್ಯ ಸರ್ಕಾರದ ಮಹಾತ್ವಾಕಾಂಕ್ಷೆ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಯುವನಿಧಿ ಯೋಜನೆಯಡಿ 2023 ಮತ್ತು 2024 ಸಾಲಿನಲ್ಲಿ ಪಾಸಾದ ಪದವಿ, ಸ್ನಾತ್ತಕೋತ್ತರ ಪದವಿ ಮತ್ತು ಡಿಪ್ಲೋಮಾ ಪದವಿ ಅಭ್ಯರ್ಥಿಗಳಿಗೆ ಜಾರಿಯಲಿದ್ದು, 2024ನೇ ಸಾಲಿನಲ್ಲಿ ಪಾಸಾದ ಅಭ್ಯರ್ಥಿಗಳಿಗೆ ನೋಂದಣಿ ಪ್ರಕ್ರಿಯೆ ಪ್ರಾರಂಭವಾಗಿರುತ್ತದೆ.

ನೋಂದಾಯಿಸಿಕೊಂಡ ಅಭ್ಯರ್ಥಿಗಳು ಸೇವಾ ಸಿಂಧು, ಕರ್ನಾಟಕ ಒನ್ ಹಾಗೂ ಬಾಪೂಜಿ ಕೇಂದ್ರಗಳಿಗೆ ಭೇಟಿ ನೀಡಿ ಅರ್ಜಿಯ ಸ್ಥಿತಿಯನ್ನು ಪರಿಶೀಲಿಸಿ ಯಾವ ಕಚೇರಿಯಲ್ಲಿ ಭೌತಿಕ ಪರಿಶೀಲನೆಗೆ ಬಾಕಿ ಇದೆ ಎಂಬುದನ್ನು ಖಾತ್ರಿ ಪಡಿಸಿಕೊಂಡು ಆಯಾ ಕಚೇರಿಗಳಿಗೆ ತಮ್ಮ ದಾಖಲಾತಿಗಳ ಪ್ರತಿಯೊಂದಿಗೆ ಪರಿಶೀಲಿಸಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ 0831-2443948ಗೆ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಂಭ್ರಮದ ಶ್ರೀ ಅವಧೂತ ಗಾಳೇಶ್ವರ ರಥೋತ್ಸವ



ನೇಸರಗಿ. ಇಲ್ಲಿನ ಪ್ರತಿಷ್ಠಿತ ನೇಸರಗಿ - ಮಲ್ಲಾಪೂರ ಗ್ರಾಮದ ಅವಧುತ ಶ್ರೀ ಗಾಳೇಶ್ವರ ಮಠದ 51 ನೇ ಜಾತ್ರಾ ಮಹೋತ್ಸವದ ಅಂಗವಾಗಿ ರವಿವಾರದಂದು ಸಂಜೆ 5 ಘಂಟೆಗೆ ಇಂಚಲ ಸಾಧು ಸಂಸ್ಥಾನ ಮಠದ ದಿವ್ಯ ಸಾನಿಧ್ಯದಲ್ಲಿ ಹಾಗೂ ಗಾಳೇಶ್ವರ ಮಠದ ಶ್ರೀ ಚಿದಾನಂದ ಮಹಾಸ್ವಾಮಿಗಳ ಸಾನಿಧ್ಯದಲ್ಲಿ ಮಹಾ ರಥೋತ್ಸವವು ಭಕ್ತಿ ಭಾವದಿಂದ ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ನೆರವೇರಿತು. ಈ ಸಂದರ್ಭದಲ್ಲಿ ನೇಸರಗಿ ಮಲ್ಲಾಪೂರ ಕೆ ಎನ್ ಗ್ರಾಮಗಳ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಭಾಗವಹಿಸಿದ್ದರು.

********

# ಜಾತ್ರೆಯಲ್ಲಿ ಬಿಡು ಬಿಟ್ಟ ಅಂಗಡಿ ಮುಗ್ಗಟ್ಟುಗಳು ದೇವಿ ಪಲ್ಲಕ್ಕಿಮೆರವಣಿಗೆಯಲ್ಲಿ ಪಾಲ್ಗೊಂಡ ಭಕ್ತರು



ಚಿಂಚಲಿ : ಚಿಂಚಲಿ ಮಾಯಕ್ಕ ದೇವಿ ಜಾತ್ರೆಯ ಪ್ರಮುಖ ದಿನವಾದ ಇಂದು ಮುಂಜಾನೆ ದೇವಿಗೆ ವಿಶೇಷ,ಪೂಜೆ, ಅಭಿಷೇಕ ಅಲಂಕಾರಗಳು ನಡೆದವು. ಚಾಂಗ ಬೋಲು ಘೋಷಣೆಯೊಂದಿಗೆ ಲಕ್ಷಾಂತರ ಭಕ್ತರು ಪಲ್ಲಕ್ಕಿ ಮೆರವಣಿಗೆಯಲ್ಲಿ ಭಾಗವಹಿಸಿ ಭಂಡಾರ ಹಾರಿಸಿದರು. ಚಿಂಚಲಿ ಗ್ರಾಮಸ್ಥರು ಸೇರಿದಂತೆ ಸುತ್ತಮುತ್ತಲಿನ ಎಲ್ಲಾ ಹಳ್ಳಿಗಳ ಗ್ರಾಮಸ್ಥರು ದೇವಿಗೆ ಹೋಳಿಗೆ ನೈವೇದ್ಯವನ್ನು ಮಾಡಿ ತಂದರೆ, ಮಹಾರಾಷ್ಟ್ರದಿಂದ ಹಾಗೂ ದೂರದ ಊರುಗಳಿಂದ ಎರಡು ಮೂರು ದಿನಗಳ ಮುಂಚಿತವಾಗಿಯೇ ಬಂದಂತಹ ಭಕ್ತರು ಅಲ್ಲಿಗೆ ತಾತ್ಕಾಲಿಕ ಷಡ್ಗಳನ್ನು ನಿರ್ಮಾಣ ಮಾಡಿ, ಅಲ್ಲಿಯೇ ಅಡುಗೆ ಮಾಡಿ ಹೋಳಿಗೆ ನೈವೇದ್ಯವನ್ನು ಮಾಡಿ ದೇವಿಗೆ ಅರ್ಪಿಸಿದರು. ನೆನ್ನೆ ರಾತ್ರಿಯಿಂದಲೇ ಭಕ್ತಾದಿಗಳು ಸಾಗರೋಪಾದಿಯಲ್ಲಿ ಸಾವಿರ ಸಾವಿರ ಸಂಖ್ಯೆಯಲ್ಲಿ ಬಂದು ಹಾಲ ಹಳ್ಳದಲ್ಲಿ ಪವಿತ್ರ ಸ್ನಾನ ಮಾಡಿ ಮಡಿ ಉಟ್ಟು ದೇವಿಯ ಹರಕೆ ತೀರಿಸಿದರು. ನಸುಕಿನ ಜಾವದಿಂದಲೇ ಸುಮಾರು ಒಂದುವರೆ ಕಿಲೋಮೀಟರ್ ದೂರದಿಂದಲೇ ದೇವಿಗೆ ದಂಡ ನಮಸ್ಕಾರ, ಊರುಳು ಸೇವೆ, ಬೇವಿನ ಮಡಿ ಸೇವೆ ಕೈಗೊಂಡರು. ಕಿಕ್ಕಿರಿದ ಹಾಲಹಳ್ಳದಲ್ಲಿ ಪವಿತ್ರ ಸ್ನಾನದ ಅವಕಾಶ ಸಿಗದ ಸಾವಿರಾರು ಭಕ್ತರು ಸಮೀಪದ ಕೃಷ್ಣಾ ನದಿಯಲ್ಲಿ ಪುಣ್ಯ ಸ್ನಾನ ಮಾಡಿ ತಮ್ಮ ಹರಕೆಯನ್ನು ತೀರಿಸಿದರು. ಸಾಲು ಸಾಲು ಅಂಗಡಿಗಳಲ್ಲಿ ಭಕ್ತರು ಅರಿಶಿಣ ಕುಂಕುಮ ಪ್ರಸಾದ ಬಳೆ, ಮಕ್ಕಳ ಆಟಿಕೆ ಖರೀದಿಸಲು ಕಿಕ್ಕಿರಿದಿದ್ದರು. ವ್ಯಾಪಾರಸ್ಥರು ಮಾರಾಟ ಜೋರಾಗಿತ್ತು.ಚಿಂಚಲಿಯನ್ನು ಸಂಪರ್ಕಿಸುವ ಎಲ್ಲ ರಸ್ತೆಗಳು ಸಾವಿರಾರು ವಾಹನಗಳಿಂದ ತುಂಬಿ ಸಂಚಾರ ದಟ್ಟಣೆಯಾಗಿ ಟ್ರಾಫಿಕ್ ಜಾಮ್ ಆಗಿತ್ತು ಪೋಲೀಸ್ ಸಿಬ್ಬಂದಿಯವರು ಹರಸಾಹಸ ಪಟ್ಟು ವಾಹನಗಳನ್ನು ಪಾರು ಮಾಡಿದರು. ಪಟ್ಟಣ ಪಂಚಾಯತಿಯವರ ವತಿಯಿಂದ ಬಂದ ಭಕ್ತರಿಗೆ ರಾತ್ರಿ ವಿದ್ಯುತ್ ವ್ಯವಸ್ಥೆ ಹಾಗೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಸಮರ್ಪಕವಾಗಿ ಮಾಡಲಾಗಿತ್ತು.

# ರಾಷ್ಟ್ರಮಟ್ಟದ ವಿಚಾರ ಸಂಕಿರಣ : 62 ವಿದ್ಯಾರ್ಥಿಗಳಿಂದ ವಿಷಯ ಮಂಡನೆ ರತನ ಟಾಟಾ ದೇಶದ ಆರ್ಥಿಕತೆಗೆ ಆಧಾರ, ಅಭಿವೃದ್ಧಿಯ ಹರಿಕಾರ



ಮಹಾಲಿಂಗಪುರ: ಸಾಮಾಜಿಕ ಕಳಕಳಿಯೊಂದಿಗೆ ಕಂಪನಿ ಮುನ್ನಡೆಸಿದ ರತನ್ ಟಾಟಾ ಭಾರತದ ಆರ್ಥಿಕತೆಗೆ ಆಧಾರ ಮತ್ತು ಅಭಿವೃದ್ಧಿಯ ಹರಿಕಾರ ಎಂದು ಅಥಣಿ ಕಾಲೇಜಿನ ಪ್ರಾಚಾರ್ಯ ಬಿ. ಎಸ್. ಕಾಂಬಳೆ ಹೇಳಿದರು.

ಸ್ಥಳೀಯ ಕೆಎಲ್‌ಇ ಸಂಸ್ಥೆಯ ಪದವಿ ಮಹಾವಿದ್ಯಾಲಯದಲ್ಲಿ ವಾಣಿಜ್ಯ ಮತ್ತು ಅರ್ಥಶಾಸ್ತ್ರ ವಿಭಾಗದ ವತಿಯಿಂದ ಹಮ್ಮಿಕೊಂಡಿದ್ದ "ಭಾರತೀಯ ಆರ್ಥಿಕತೆಯಲ್ಲಿ ರತನ ಟಾಟಾ ಅವರ ಕೊಡುಗೆ" ಎಂಬ ವಿಷಯದ ಕುರಿತ ರಾಷ್ಟ್ರ ಮಟ್ಟದ ಒಂದು ದಿನದ ವಿದ್ಯಾರ್ಥಿ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

ಕಾಲೇಜಿನ ಪ್ರಾಚಾರ್ಯ ಡಾ. ಕೆ.ಎಂ. ಅವರಾದಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕೊಲ್ಲಾಪುರದ ಶಿವಾಜಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ಪಿ. ಎಸ್. ಕಾಂಬಳೆ ಆಶಯ ಭಾಷಣ ಮಾಡಿ ಮೂಲಕ ರತನ ಟಾಟಾ ಅವರ ಅಮೋಘ ಸೇವೆ ಮತ್ತು ತ್ಯಾಗವನ್ನು ಸ್ಮರಿಸಿದರು.

ಸ್ಥಳಿಯ ಆಡಳಿತ ಮಂಡಳಿ ಸದಸ್ಯರಾದ ಅಶೋಕ ಅಂಗಡಿ, ಐಕ್ಯೂಎಸಿ ಸಂಯೋಜಕಿ ಡಾ. ಸುನಂದಾ ಸೋರಗಾಂವಿ, ಹಳೆ ವಿದ್ಯಾರ್ಥಿ ಬಸವರಾಜ ಕರೆಹೊನ್ನ, ವಾಣಿಜ್ಯ ವಿಭಾಗದ ಮುಖ್ಯಸ್ಥರಾದ ಎಂ.ಬಿ ಧರಿಗೌಡ್ರ, ದುಂಡೇಶ್ವರಿ ಹೊಸಪೇಟಿ, ರೋಹಿಣಿ ಕಾಕಡೆ, ಆನಿಕಾ ಜಾಸ್ವಾಲ್, ಅದಿಬಾ ಫಾರಿನ್ ಹಾಲಳ್ಳಿ, ವ್ಹಿ.ಎ.ಅಡಹಳ್ಳಿ ಇದ್ದರು.

ವಿಚಾರ ಸಂಕಿರಣದಲ್ಲಿ ನಾನಾ ಕಾಲೇಜಿನ 62 ಸ್ಪರ್ಧಾಳುಗಳು ಭಾಗವಹಿಸಿದ್ದರು. ವಿಜಯಪುರದ ಅಂಜುಮನ್ ಕಾಲೇಜಿನ ಕಸ್ಮಿಯಾ ರಾಮಪುರೆ ಪ್ರಥಮ (ರೂ.5000) ಇದೇ ಕಾಲೇಜಿನ ಬೀಬಿ ಪಾತಿಮಾ ಶೇಖ ದ್ವಿತೀಯ(ರೂ.3000) ಹಾಗೂ ಬೆಳಗಾವಿ ಲಿಂಗರಾಜ ಕಾಲೇಜಿನ ರುತುಜಾ ಖೋತ ತೃತೀಯ (ರೂ.2000) ಬಹುಮಾನ ಪಡೆದರು. ಪ್ರೋ. ಜಿ.ಎ. ಮಠಪತಿ, ಪ್ರೋ. ಎಸ್.ಪಿ. ಕೊಕಟನೂರ, ಪ್ರೋ. ಎಂ.ಎಂ. ನಿಂಬರಗಿ, ಡಾ. ಎಸ್.ಸಿ. ಬಿಜ್ಜರಗಿ, ಪ್ರೋ. ಪಿ.ಜಿ. ಕೊಣ್ಣೂರ್, ಪ್ರೋ. ಎಸ್.ಎ. ಪಾಟೀಲ್ ನಿರ್ಣಾಯಕರಾಗಿದ್ದರು.

# ಜೀತ ಕಾರ್ಮಿಕ ಪದ್ಧತಿ ನಿಷೇಧ ಕಾಯ್ದೆ ಬಗ್ಗೆ ಜಾಗೃತಿ ಮೂಡಿಸಿ-ಅಪರ ಜಿಲ್ಲಾಧಿಕಾರಿ



ಹಾವೇರಿ: ಜೀತ ಕಾರ್ಮಿಕ ಪದ್ಧತಿ ಒಂದು ಅಪರಾಧವಾಗಿದೆ. ಜೀತ ಕಾರ್ಮಿಕ ಪದ್ಧತಿ ನಿಷೇಧ ಕಾಯ್ದೆ ಕುರಿತು ಸಾರ್ವಜನಿಕರಿಗೆ ಅಗತ್ಯ ಜಾಗೃತಿ ಮೂಡಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ.ನಾಗರಾಜ ಎಲ್. ಅವರು ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶನಿವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ಜೀತ ಪದ್ಧತಿ (ರದ್ಧತಿ) ನಿರ್ಮೂಲನಾ ದಿನಾಚರಣೆ ಪ್ರಯುಕ್ತ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳಿಗೆ ಆಯೋಜಿಸಲಾದ ಜಿಲ್ಲಾ ಮಟ್ಟದ ಕಾರ್ಯಾಗಾರ ಉದ್ಘಾಟಿಸಿ, ಪ್ರತಿಜ್ಞಾವಿಧಿ ಬೋಧಿಸಿ ಅವರು ಮಾತನಾಡಿದರು.

ಜೀತಪದ್ಧತಿ ಅನಾದಿಕಾಲದಿಂದ ನಡೆದುಕೊಂಡು ಬಂದಿದ್ದು, ಜೀತಪದ್ಧತಿ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುತ್ತಿತ್ತು. ಕಾಫಿ ಎಸ್ಟೇಟ್, ಇಟ್ಟಂಗಿ ಭಟ್ಟಿ, ಕಲ್ಲು ಕ್ವಾರಿಗಳಲ್ಲಿ ಸಹ ಇಂತಹ ಕಾರ್ಮಿಕರನ್ನು ನೋಡಬಹುದಾಗಿತ್ತು. 1976ರಲ್ಲಿ ಜೀತ ಕಾರ್ಮಿಕ ಪದ್ಧತಿ ನಿಷೇಧ ಕಾಯ್ದೆ ಜಾರಿ ಮಾಡಿದ್ದರಿಂದ ಈಗ ಹತೋಟಿಗೆ ಬಂದಿದೆ. ಕಾರ್ಮಿಕರ ವಾಕ್‌ಸ್ವಾತಂತ್ರ್ಯ, ಓಡಾಡುವ ಹಕ್ಕು ಹಾಗೂ ಕನಿಷ್ಠ ವೇತನ ನೀಡದಿರುವುದು ಜೀತ ಪದ್ಧತಿಯಾಗಿದೆ. ಇಂತಹ ಪ್ರಕರಣಗಳು ಕಂಡುಬಂದಲ್ಲಿ ಕೂಡಲೇ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳ ಗಮನಕ್ಕೆ ತರಬೇಕು ಎಂದರು.

ಆತ್ಮಸ್ಥೈರ್ಯ ತುಂಬಿ: ಬೇರೆ ಬೇರೆ ರಾಜ್ಯಗಳಿಂದ ಕಾರ್ಮಿಕರನ್ನು ಕರೆದುಕೊಂಡು ಬಂದು, ಯಾರಿಗೂ ತಿಳಿಯದಂತೆ ಒಂದು ಕೊಠಡಿಯಲ್ಲಿ ಇರಿಸಿಕೊಂಡು ಕೆಲಸಮಾಡಿಸಿಕೊಳ್ಳುವುದು, ವರ್ಷಾನುಗಂಟಲೆ ಸಂಬಳ ನೀಡದಿರುವುದು ನಡೆಯುತ್ತದೆ. ಹಾಗಾಗಿ ಇಂತಹ ಪ್ರಕರಣಗಳನ್ನು ಗಮನಿಸಬೇಕು. ಅವರನ್ನು ಜೀತದಿಂದ ಮುಕ್ತಗೊಳಿಸಬೇಕು. ಜೀತಪದ್ಧತಿಯಿಂದ ಮುಕ್ತಗೊಳಿಸಿದವರಿಗೆ ಮೊದಲು ಆತ್ಮಸ್ಥೈರ್ಯ ತುಂಬಬೇಕು, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವಿವಿಧ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಮಕ್ಕಳಾಗಿದ್ದರೆ ಅವರನ್ನು ಶಾಲೆಗೆ ದಾಖಲಿಸಬೇಕು, ವಯಸ್ಕರರಿದ್ದರೆ ಅವರಿಗೆ ಪುನರ್ವಸತಿ ಕಲ್ಪಿಸುವ ಕೆಲಸಮಾಡಬೇಕು ಎಂದು ಸಲಹೆ ನೀಡಿದರು.

ಸಹಾಯವಾಣಿ: ಜೀತ ಪದ್ಧತಿ ಪ್ರಕರಣಗಳು ಬಂದರೆ ಕೂಡಲೇ ಕಾರ್ಮಿಕ ಸಹಾಯವಾಣಿ 155214, ತುರ್ತು ಸ್ಪಂದನ ಸಹಾಯವಾಣಿ (ಪೊಲೀಸ್)112, ಮಕ್ಕಳ ಸಹಾಯವಾಣಿ 1098, ಮಹಿಳಾ ಸಹಾಯವಾಣಿ 181 ಹಾಗೂ ಮಾನವ ಹಕ್ಕುಗಳ ಆಯೋಗ ಸಹಾಯವಾಣಿ 18004252333ಕ್ಕೆ ಕರೆ ಮಾಡಬೇಕು ಎಂದು ತಿಳಿಸಿದರು.

ಉಪ ವಿಭಾಗಾಧಿಕಾರಿ ಚೆನ್ನಪ್ಪ ಅವರು ಮಾತನಾಡಿ, ಜೀತ ಪದ್ಧತಿ ಸಾಮಾಜಿಕ ಪಿಡುಗಾಗಿದೆ. ಇದು ರಾಜ-ಮಹಾರಾಜರ ಕಾಲದಿಂದ ನಡೆದುಕೊಂಡುಬಂದಿದೆ. ಜೀತ ಕಾರ್ಮಿಕ ಪದ್ಧತಿ ನಿಷೇಧ ಕಾಯ್ದೆ ಜಾರಿಯಿಂದ ಇಂದು ಶೇ.99 ರಷ್ಟು ಜೀತ ಪದ್ಧತಿ ಹತೋಟಿಗೆ ಬಂದಿದೆ. ಅಲ್ಲೊಂದು ಇಲ್ಲೊಂದು ಜೀತ ಪದ್ಧತಿ ಕಾಣಬಹುದಾಗಿದೆ. ಇಂತಹ ಪ್ರಕರಣಗಳನ್ನು ಸಹ ಪತ್ತೆ ಹೆಚ್ಚಿ ಜೀತಪದ್ಧತಿ ಸಂಪೂರ್ಣ ನಿರ್ಮೂಲನೆಗೆ ಎಲ್ಲರೂ ಸಂಕಲ್ಪಮಾಡೋಣ ಎಂದು ಹೇಳಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ ಜೀತಪದ್ಧತಿ ನಿರ್ಮೂಲನಾ ರಾಜ್ಯ ಉನ್ನತ ಸಮಿತಿ ಸಂಚಾಲಕರಾದ ಶ್ರೀಮತಿ ಬೃಂದಾ ಅಡಿಗ ಅವರು ಜೀತ ಕಾರ್ಮಿಕ ಪದ್ಧತಿ ನಿಷೇಧ ಕಾಯ್ದೆ ಕುರಿತು ಮಾತನಾಡಿದರು.

ಕಾರ್ಯಕ್ರಮದಲ್ಲಿ ಜಿ.ಪಂ. ಪ್ರಭಾರ ಉಪ ಕಾರ್ಯದರ್ಶಿ ಮಿಶೆ, ಡಿವೈಎಸ್‌ಪಿ ಎಂ.ಎಸ್.ಪಾಟೀಲ, ತಹಶೀಲ್ದಾರ ಶ್ರೀಮತಿ ಶರಣಮ್ಮ, ಜೀತಪದ್ಧತಿ ನಿರ್ಮೂಲನಾ ಜಿಲ್ಲಾ ಸಂಚಾಲನಾ ಸಮಿತಿ ಸದಸ್ಯರಾದ ಎಸ್.ಎಚ್. ಮಜೀದ್, ಮುತ್ತುರಾಜ ಮಾದರ ಇತರರು ಉಪಸ್ಥಿತರಿದ್ದರು.

# ಅರ್ಜಿ ಆಹ್ವಾನ

ಬೆಳಗಾವಿ: ಬಸವರಾಜ ಕಟ್ಟೀಮನಿ ಪ್ರತಿಷ್ಠಾನವು 2012 ರಿಂದ ಆರಂಭಿಸಿರುವ ಯುವ ಗ್ರಂಥ ಪ್ರಶಸ್ತಿಗೆ ಲೇಖಕರಿಂದ 2023 ಮತ್ತು 2024ನೇ ಸಾಲಿನ ಎರಡು ವರ್ಷಗಳ ಕಾದಂಬರಿ ಮತ್ತು ಕಥೆ ಪುಸ್ತಕ ಬಹುಮಾನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

2023–2024ರಲ್ಲಿ ಪ್ರಕಟವಾದ ಕಾದಂಬರಿ ಮತ್ತು ಕಥೆ ಈ ಎರಡು ಪ್ರಕಾರಗಳ ಪುಸ್ತಕಗಳನ್ನು ಲೇಖಕರು ಕಳುಹಿಸಬಹುದಾಗಿದೆ.

ಆಯ್ಕೆಯಾದ ಪ್ರತಿಯೊಂದು ಪ್ರಕಾರದ ಶ್ರೇಷ್ಠ ಕೃತಿಗೆ ಪ್ರಶಸ್ತಿ ಪತ್ರದೊಂದಿಗೆ ತಲಾ 10 ಸಾವಿರ ರೂಪಾಯಿ ಬಹುಮಾನವನ್ನು ಸಮಾರಂಭ ಪೂರ್ವಕವಾಗಿ ನೀಡಲಾಗುವುದು. 2023 ಮತ್ತು 2024ನೇ ವರ್ಷಕ್ಕೆ 40 ವರ್ಷ ವಯೋಮಾನದ ಒಳಗಿನ ಲೇಖಕರು ಗ್ರಂಥ ಬಹುಮಾನಕ್ಕೆ ಅರ್ಹ–ರಿದ್ದು, ಅಂತಹವರು ತಮ್ಮ ಪುಸ್ತಕದ 4 ಪ್ರತಿಗಳನ್ನು ಅಧಿಕೃತ ಜನ್ಮ ದಾಖಲೆ ಮತ್ತು ಸ್ವ–ವಿವರದೊಂದಿಗೆ ಕಳುಹಿಸಬೇಕು.

ಒಂದು ವರ್ಷಕ್ಕೆ ಎರಡು ಪ್ರಕಾರದ ಪುಸ್ತಕಗಳನ್ನು ಕಳುಹಿಸಬಹುದಾದರೂ ಅವರ ಒಂದು ಪ್ರಕಾರಕ್ಕೆ ಮಾತ್ರ ಬಹುಮಾನ ಸಿಗಬಹುದಾಗಿದೆ. ಪ್ರಶಸ್ತಿಗಾಗಿ ಪುಸ್ತಕಗಳನ್ನು ಕಳುಹಿಸಿಕೊಡಲು 28 ಪೆಬ್ರುವರಿ 2025 ಕೊನೆಯ ದಿನಾಂಕವಾಗಿರುತ್ತದೆ.

ಪುಸ್ತಕ ಕಳುಹಿಸುವ ವಿಳಾಸ: ಅಧ್ಯಕ್ಷರು, ಬಸವರಾಜ ಕಟ್ಟೀಮನಿ ಪ್ರತಿಷ್ಠಾನ, ಕುಮಾರ ಗಂಧರ್ವ ಕಲಾ ಮಂದಿರ ಆವರಣ, ಸುಭಾಷ ನಗರ, ಬೆಳಗಾವಿ–590016 ಕಳುಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ 0831–2474649 ಸಂಖ್ಯೆಗೆ ಸಂಪರ್ಕಿಸಬಹುದು ಎಂದು ಬೆಳಗಾವಿ ಬಸವರಾಜ ಕಟ್ಟೀಮನಿ ಪ್ರತಿಷ್ಠಾನ ಸದಸ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಾಳೆ ನೇರ ಸಂದರ್ಶನ

ಬೆಳಗಾವಿ, : ಬೆಳಗಾವಿ ಜಿಲ್ಲಾ ಉದ್ಯೋಗ ವಿನಿಮಯಕೇಂದ್ರ ಇವರ ವತಿಯಿಂದ ಬುಧವಾರ (ಫೆ.19) ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆಯವರೆಗೆ, ಎಸ್ಎಸ್ಎಲ್‌ಸಿ, ಪಿಯುಸಿ, ಐಟಿಐ ಮತ್ತು ಡಿಪ್ಲೋಮಾ ಯಾವುದೇ ಪದವಿ ಅಭ್ಯರ್ಥಿಗಳಿಗಾಗಿ ಖಾಸಗಿ ಕಂಪನಿಗಳಿಂದ "ನೇರ ಸಂದರ್ಶನ"ವನ್ನು ಸುತ್ತಾರಿಯಾ ಆಟೋ ಮೋಬೈಲ್ಸ್ (ಮಹಿಂದ್ರಾ & ಮಹಿಂದ್ರಾ) ನೆಹರು ನಗರ, ಬೆಳಗಾವಿ, ಇಲ್ಲಿ ಆಯೋಜಿಸಲಾಗಿದೆ.

ಆಸಕ್ತ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶವು ಉಚಿತವಾಗಿದ್ದು, ಇನ್ನುಳಿದ ಯಾವುದೇ ಸೌಲಭ್ಯಗಳು ಇರುವುದಿಲ್ಲ. ಅರ್ಹ ಹಾಗೂ ಆಸಕ್ತ ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗಳಿಗಾಗಿ DEE. BGV ಇನ್‌ಸ್ಟಾಗ್ರಾಮ್ ಹಾಗೂ YES KENDRA, BELAGAVI ಚಾನಲ್‌ನ್ನು ಪಾಲೋ ಮಾಡಬಹುದು. ಹಾಗೂ ಮೊಬೈಲ್ ಸಂಖ್ಯೆ: 8880652225 ಗೆ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು, ಎಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಸಹಾಯಕ ನಿರ್ದೇಶಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅರ್ಜಿ ಆಹ್ವಾನ

ಕಾರವಾರ,: ಗ್ರಾಮೀಣ ಅಂಚೆ ಸೇವಕರ ನೇಮಕಾತಿಗೆ ಸಂಬಂಧಿಸಿದಂತೆ ಕಾರವಾರ ಅಂಚೆ ವಿಭಾಗದಲ್ಲಿ ಒಟ್ಟೂ 32 ಖಾಲಿ ಇರುವ ಶಾಖಾ ಅಂಚೆ ಪಾಲಕ, ಸಹಾಯಕ ಶಾಖಾ ಅಂಚೆ ಪಾಲಕ ಮತ್ತು ಡಾಕ್ ಸೇವಕ್ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ವಯೋಮಿತಿ 18 ರಿಂದ 40 ವರ್ಷಗಳು. ವಿದ್ಯಾರ್ಹತೆ 10ನೇ ತರಗತಿ ತೇರ್ಗಡೆ ಕಡ್ಡಾಯ. ಕನ್ನಡವನ್ನು 10ನೇ ತರಗತಿಯಲ್ಲಿ ಒಂದು ಭಾಷೆಯನ್ನಾಗಿ ಅಧ್ಯಯನ ಮಾಡಿರಬೇಕು. ಬೇರೆ ಯಾವುದೇ ವಿಧಾನದ ಮೂಲಕ ಸಲ್ಲಿಸಿದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಮಧ್ಯವರ್ತಿಗಳ ಮೂಲಕ ಪರೀಕ್ಷೆ ,ಸಂದರ್ಶನ ಇರುವುದಿಲ್ಲ. ಎಸ್.ಎಸ್.ಎಲ್.ಸಿ ಗರಿಷ್ಠ ಅಂಕ ಮಾನದಂಡದಲ್ಲಿ ನೇಮಕಾತಿ ನಡೆಯಲ್ಲಿದ್ದು ಅರ್ಜಿ ಸಲ್ಲಿಸುವ ಮೊದಲು ವೆಬ್ಸೈಟ್ https://indiapostgdsonline.gov.in ಅಪ್ಲೋಡ್ ಮಾಡಬೇಕು.

ಆನ್ ಲೈನ್ ಮೂಲಕ ಅರ್ಜಿಸಲ್ಲಿಸಲು ಮಾ.3 ಕೊನೆಯ ದಿನವಾಗಿದ್ದು, ಆಸಕ್ತ ಅಭ್ಯರ್ಥಿಗಳು ವೆಬ್ಸೈಟ್ https://indiapostgdsonline.gov.in ಅರ್ಜಿ ಸಲ್ಲಿಸಬಹುದು.

ದೇಶದಾದ್ಯಂತ ಖಾಲಿ ಇರುವ 21413 ಹುದ್ದೆಗಳಿಗೆ ನೇರ ನೇಮಕಾತಿ ಪ್ರಕ್ರಿಯೆ ಏಕಾಕಾಲಕ್ಕೆ ನಡೆಯುತ್ತಿದ್ದು ಅರ್ಹ ಅಭ್ಯರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳುವಂತೆ ಕಾರವಾರ ವಿಭಾಗದ ಅಂಚೆ ಅಧೀಕ್ಷ ಧನಂಜಯ ಆಚಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕರ್ನಾಟಕ ಉಚ್ಚ ನ್ಯಾಯಾಲಯ, ಧಾರವಾಡ ವಿಭಾಗೀಯ ಪೀಠ

# ಸುಮಾರು 145 ವರ್ಷಗಳ ಹಳೆಯ ವಿವಾದ ಇತ್ಯರ್ಥ

ಧಾರವಾಡ: 1991 ರಂದು ವಾದಿಯು ಪ್ರತಿವಾದಿಯವರ ವಿರುದ್ಧ ಅಸಲು ದಾವೆ (ಸಂಖ್ಯೆ:17/1991) ಯನ್ನು ಹಿರಿಯ ದಿವಾಣಿ ನ್ಯಾಯಾಲಯ ಅಥಣಿಯಲ್ಲಿ ದಾಖಲಿಸಿದ್ದರು. ಸದರಿ ದಾವೆಯಲ್ಲಿ ಪ್ರತಿವಾದಿಯು ತಮ್ಮ ಕುಟುಂಬದಲ್ಲಿ 1880 ನೇ ಇಸವಿಯಲ್ಲಿಯೇ ಕುಟುಂಬದ ಆಸ್ತಿಗಳ ವಿಭಾಗವಾಗಿದೆ ಹಾಗೂ ಇದೇ ಕುಟುಂಬದ ಆಸ್ತಿಗಳ ಬಗ್ಗೆ ಈ ದಾವೆಯ ಪ್ರತಿವಾದಿ ನಂ.1 ಇವರ ಅಜ್ಜನವರು ವಾದಿಯ ಮಾವನವರ ವಿರುದ್ಧ 1898 ರಲ್ಲಿ ಅಥಣಿ ಸಿವಿಲ್ ಜಡ್ಜ್ ಜೂನಿಯರ ಡಿವಿಜನ್ ನ್ಯಾಯಾಲಯದಲ್ಲಿ ಸಹ ಕೆಲವು ಜಮೀನುಗಳ ಬಗ್ಗೆ ದಾವೆಯು ದಾಖಲಾಗಿ ಪ್ರತಿವಾದಿಯ ಅಜ್ಜನ ಪರವಾಗಿ ನಿಕಾಲಿಯಾಗಿತ್ತು ಎಂಬ ವಾದವನ್ನು ಮಂಡಿಸಿದ್ದರು.

ವಾದಿ ಮತ್ತು ಪ್ರತಿವಾದಿಯವರ ಹೇಳಿಕೆಗಳನ್ನು ಮತ್ತು ದಾಖಲಾತಿಗಳನ್ನು ಪರಮಾರ್ಶಿಸಿ ಹಿರಿಯ ದಿವಾಣಿ ನ್ಯಾಯಾಲಯ ಅಥಣಿ ನ್ಯಾಯಾದೀಶರು ಪ್ರತಿವಾದಿಯವರ ವಾದವನ್ನು ತಿರಸ್ಕರಿಸಿ ಅಸಲು ದಾವೆ (ಸಂಖ್ಯೆ:17/1991) ಯನ್ನು ನವೆಂಬರ್ 26, 2004 ರಂದು ವಾದಿಯ



ಪರವಾಗಿ ಇತ್ಯರ್ಥಪಡಿಸಿತ್ತು.

ಈ ಅಸಲು ದಾವೆಯ ತೀರ್ಪನ್ನು ಪ್ರಶ್ನಿಸಿ, 2005 ರಂದು ಪ್ರತಿವಾದಿಯವರು ವಾದಿಯವರ ವಿರುದ್ಧ ಉಚ್ಚ–ನ್ಯಾಯಾಲದಲ್ಲಿ (ಆರ.ಎಫ್.ಎ ಸಂಖ್ಯೆ 246/2005 ಮತ್ತು ಆರ್.ಎಫ್.ಎ ಸಂಖ್ಯೆ 414/2005 ರ) ಮೇಲ್ಮನವಿಗಳನ್ನು ದಾಖಲಿಸಲಾಗಿತ್ತು.

ಈ ವ್ಯಾಜ್ಯವು ಮೂರು ತಲೆಮಾರುಗಳಿಂದ ಬಗೆಹರಿಯದೆ ಇರುವುದನ್ನು ಗಮನಿಸಿದ ವಿಭಾಗೀಯ ಪೀಠದ ನ್ಯಾಯಮೂರ್ತಿ ಅಶೋಕ ಎಸ್. ಕಿಣಗಿ ಮತ್ತು ಉಮೇಶ.ಎಮ್. ಅಡಿಗ ಅವರು ಉಭಯ ಪಕ್ಷಗಾರರಿಗೆ ಅವರ ವಕೀಲರ ಸಮಕ್ಷಮ ಸಾಕಷ್ಟು ತಿಳುವಳಿಕೆ ನೀಡಿ, ರಾಜಿ ಸಂಧಾನ ಮಾಡಿಕೊಂಡು ಪ್ರಕರಣವನ್ನು ಇತ್ಯಥ–ರ್ಪಡಿಸಿಕೊಳ್ಳುವಂತೆ ಸೂಚಿಸಿದ್ದರು.

ಅದರಂತೆ ಜನವರಿ 25, 2025 ರಂದು ವಿಭಾಗೀಯ ಪೀಠದ ಮುಂದೆ ಉಭಯ ಪಕ್ಷಗಾರರು ತಮ್ಮ ವಕೀಲರ ಮೂಲಕ ರಾಜಿ ಸಂಧಾನಕ್ಕೆ ಒಪ್ಪಿಕೊಂಡ ಆಧಾರದ ಮೇಲೆ ಸದರಿ ಪ್ರಕರಣಗಳನ್ನು ಅತ್ಯಂತ ಸರಳ ರೀತಿಯಲ್ಲಿ ಇತ್ಯರ್ಥಗೊಳಿಸಿಲಾಯಿತು.

ಈ ಮೂಲಕ ಸುಮಾರು 145 ವರ್ಷಗಳಿಂದ ಕುಟುಂಬದಲ್ಲಿ ಇದ್ದ ಅತ್ಯಂತ ಹಳೆಯ ವಿವಾದವನ್ನು ಸರಳ ರೀತಿಯಲ್ಲಿ ಬಗೆಹರಿಸಿರುವುದು ಒಂದು ಹೆಗ್ಗಳಿಕೆ. ಈ ಪ್ರಕರಣದಲ್ಲಿ ವಾದಿಗಳ ನ್ಯಾಯವಾದಿ ಜಿ. ಬಾಲಕೃಷ್ಣ ಶಾಸ್ತ್ರಿ ಅವರ ಪರವಾಗಿ ವಕೀಲ ಚೇತನ ಮುನವಳ್ಳಿ ಮತ್ತು ಪ್ರತಿವಾದಿಗಳ ನ್ಯಾಯವಾದಿಗಳಾದ ಆನಂದ ಆರ. ಕೊಳ್ಳಿ ಹಾಗೂ ಸೌರಭ ಎ. ಸಂಡೂರ ಅವರು ಹಾಜರಾಗಿದ್ದರು.

ಹೀಗಾಗಿ, ಎಷ್ಟೇ ಹಳೆಯದಾದ ವಿವಾದಗಳಿದ್ದರೂ ನ್ಯಾಯಾಲಯದಲ್ಲಿ ಕಾನೂನು ಅಡಿಯಲ್ಲಿ ರಾಜಿ ಮಾಡಿಕೊಳ್ಳಬಹುದಾದ ಪ್ರಕರಣಗಳನ್ನು ಇತ್ಯಥ–ರ್ಗೊಳಿಸಿಕೊಂಡರೆ ವ್ಯಾಜ್ಯಗಳಿಂದ ಮುಕ್ತವಾದ ಜೀವನವನ್ನು ನಡೆಸಬಹುದೆಂಬುದಕ್ಕೇ ಈ ಪ್ರಕರಣವು ಒಂದು ನಿದರ್ಶನವಾಗಿದೆ.

ನ್ಯಾಯಾಲಯದಲ್ಲಿ ಬಾಕಿ ಇರುವ ಎಲ್ಲಾ ಪ್ರಕರಣಗಳಲ್ಲಿ ಕಾನೂನು ಅಡಿಯಲ್ಲಿ ರಾಜಿ ಮಾಡಿಕೊಳ್ಳಬಹುದಾದ ಪ್ರಕರಣಗಳನ್ನು ಕಾನೂನು ಸೇವಾ ಸಮಿತಿಗಳ ಮೂಲಕ ನಡೆಸಲಾಗುವ ಲೋಕ ಅದಾಲತ ಮೂಲಕ ಸಹ ರಾಜಿ ಮಾಡಿಕೊಳ್ಳಬಹುದು. ಇದಲ್ಲದೆ ಕಾನೂನು ಸೇವಾ ಸಮಿತಿಗಳ ಮೂಲಕ ನೇಮಕಗೊಂಡ ಮಧ್ಯಸ್ಥಿಕೆಗಾರರ ಮೂಲಕ ಸಹ ಅವರ ಮಾರ್ಗದರ್ಶನಲ್ಲಿಯೂ ಪ್ರಕರಣಗಳನ್ನು ಯಾವಾಗಲೂ ರಾಜಿ ಮಾಡಕೊಳ್ಳಬಹುದಾಗಿದೆ.

ಮುಂದಿನ ಲೋಕ ರಾಷ್ಟ್ರೀಯ ಲೋಕ ಅದಾಲತನ್ನು ಮಾರ್ಚ 8, 2025 ರಂದು ದೇಶದ್ಯಾದಂತ ತಾಲೂಕು, ಜಿಲ್ಲಾ ಮಟ್ಟದಿಂದ ಹಾಗೂ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಹಮ್ಮಿಕೊಳ್ಳಲಾಗಿದ್ದು ಕಕ್ಷಿಗಾರರು ಇದರ ಸದುಪಯೋಗವನ್ನು ಪಡೆಯಬಹುದಾಗಿದೆ ಎಂದು ಧಾರವಾಡ ಪೀಠದ ಉಚ್ಚ ನ್ಯಾಯಾಲಯ ಕಾನೂನು ಸೇವಾ ಸಮಿತಿಯ ಕಾರ್ಯದರ್ಶಿಗಳು ಮತ್ತು ನ್ಯಾಯಾಂಗ ಅಧೀಕ ವಿಲೇಖನಾಧಿಕಾರಿ ಜೆರಾಲ್ಡ್ ರುಡಾಲ್ಫ್ ಮೆಂಡೋನ್ಸಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

*******

# ಸತೀಶ ಶುಗರ್ಸ ಅವಾರ್ಡ್ಸನಲ್ಲಿ ವಿಜೇತರಿಗೆ ಬಹುಮಾನ

ಗೋಕಾಕ: ಸಚಿವ ಸತೀಶ ಜಾರಕಿಹೊಳಿ ಅವರು ಶಿಕ್ಷಣ ಮತ್ತು ಸಂಸ್ಕೃತಿಕ ರಂಗದಲ್ಲಿ ಮಕ್ಕಳನ್ನು ಉತ್ತೇಜಿಸಲು 20ವರ್ಷಗಳ ಹಿಂದೆ ಪ್ರಾರಂಭಿಸಿದ ಈ ವೇದಿಕೆ ಇಂದು ಹೆಮ್ಮರವಾಗಿ ಬೆಳೆದು ಅವರ ಕನಸನ್ನು ನನಸಾಗಿಸುತ್ತಿದೆ ಎಂದು ಸತೀಶ ಶುಗರ್ಸ ಅವಾರ್ಡ್ಸನ ಮುಖ್ಯಸ್ಥರು ಹಾಗೂ ಯುವ ಕಾಂಗ್ರೇಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ರಾಹುಲ ಜಾರಕಿಹೊಳಿ ಹೇಳಿದರು.

ಅವರು, ರವಿವಾರದಂದು ನಗರದ ಹಿಲ್ ಗಾರ್ಡನ ಆವರಣದಲ್ಲಿ ಆಯೋಜಿಸಿದ್ಧ ಸತೀಶ ಶುಗರ್ಸ ಅವಾರ್ಡ್ಸನಲ್ಲಿ ವಿಜೇತರಿಗೆ ಬಹುಮಾನ ಹಾಗೂ ಔತನಕೂಟದಲ್ಲಿ ಪಾಲ್ಗೊಂಡು ಮಾತನಾಡುತ್ತಿದ್ದರು.

ಈ ವೇದಿಕೆಯಿಂದ ಹಲವಾರು ಬೆಳಗಾವಿ ನಾಡಿನ



ಸಾಂಸ್ಕೃತಿಕ ಪರಂಪರೆಯನ್ನು ಶ್ರೀವಂತಗೊಳಿಸುತ್ತಿದೆ. ಗೋಕಾಕನಲ್ಲಿ ಪ್ರಾರಂಭಗೊಂಡ ಈ ಕಾರ್ಯಕ್ರಮ ಯಮಕನಮರ್ಡಿ ಹಾಗೂ ಚಿಕ್ಕೋಡಿಯಲ್ಲೂ ಕೂಡ ವಿಸ್ತಾರಗೊಳಿಸಲಾಗಿದೆ. ಈ ಬಾರಿ ಸಂಗೀತ ಮತ್ತು ನೃತ್ಯ ಸ್ಪರ್ಧೆಗಳನ್ನು ರಾಜ್ಯ ಮಟ್ಟಕ್ಕೂ ವಿಸ್ತರಿಸಲಾಗಿದೆ. ಈ ಕಾರ್ಯಕ್ರಮಗಳಲ್ಲಿ ಪ್ರಸಕ್ತಸಾಲಿನಲ್ಲಿ 8ಸಾವಿರ ವಿದ್ಯಾರ್ಥಿಗಳು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ. ಎಸ್–ಎಸ್ಎಲ್‌ಸಿ ಮತ್ತು ಪಿಯೂಸಿಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ತಲಾ 15ಸಾವಿರ ನಗದು ಬಹುಮಾನ ನೀಡಿ ಅವರನ್ನು ಪ್ರೋತ್ಸಾಹಿಸಲಾಗುತ್ತಿದೆ. ತಂದೆ ಸತೀಶ, ಅಕ್ಕ ಪ್ರಿಯಾಂಕಾ ಜಾರಕಿಹೊಳಿ ಅವರ ಮಾರ್ಗದರ್ಶನದಲ್ಲಿ ಈ ಕಾರ್ಯಕ್ರಮಗಳನ್ನು ಸದಾ ಮುನ್ನಡೆಸುವದಾಗಿ ಹೇಳಿದ ಅವರು, ಇದಕ್ಕೆ ತಮ್ಮೆಲ್ಲರ ಸಹಕಾರ ನೀಡುವಂತೆ ಕೋರಿದರು.ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಲಾಯಿತು.

ಈ ಸಂದರ್ಭದಲ್ಲಿ ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆ ಉಪನಿರ್ದೇಶಕ ಸೀತಾರಾಮು ಆರ್ ಎಸ್, ಶಿಕ್ಷಣ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಗಜಾನನ ಮನ್ನಿಕೇರಿ, ತಹಶೀಲದಾರ ಡಾ.ಮೋಹನ ಭಸ್ಮೆ, ಡಿವೈಎಸ್‌ಪಿ ಡಿ ಎಚ್ ಮುಲ್ಲಾ, ಕ್ಷೇತ್ರಶಿಕ್ಷಣಾಧಿಕಾ–ರಿಗಳಾದ ಜಿ ಬಿ ಬಳಗಾರ, ಅಜೀತ ಮನ್ನಿಕೇರಿ, ಪ್ರಭಾವತಿ ಪಾಟೀಲ, ಸಮಾಜ ಕಲ್ಯಾಣ ಇಲಾಖೆ ಎ ಬಿ ಮಲಬನ್ನವರ, ಸಂಘಟಕರಾದ ಪ್ರಕಾಶ ಲಕ್ಷೆಟ್ಟಿ, ರೀಯಾಜ ಚೌವಲಾ ಇದ್ದರು.

# ವ್ಯಕ್ತಿಯನ್ನು ಸುಸಂಸ್ಕೃತರನ್ನಾಗಿಸುವುದೇ ಶಿಕ್ಷಣ : ಡಾ. ಅಲ್ಲಮಪ್ರಭು ಮಹಾಸ್ವಾಮಿಗಳು



ಬೆಳಗಾವಿ, :ಜಗತ್ತಿನ ಜ್ಞಾನ ಇಂದು ಬೆರಳ ತುದಿಯಲ್ಲಿಯೇ ದೊರೆಯುತ್ತಿದ್ದು, ಸಂಸ್ಕಾರ ದೊರೆಯುವುದು ಅಪರೂಪವಾಗಿದೆ. ವ್ಯಕ್ತಿಗೆ ಕೇವಲ ಜ್ಞಾನ ನೀಡುವುದು ಶಿಕ್ಷಣವಲ್ಲ. ಅವನನ್ನು ಸುಸಂಸ್ಕೃತ ರನ್ನಾಗಿಸುವುದು ನಿಜವಾದ ಶಿಕ್ಷಣ ಎಂದು ನಾಗನೂರು ರುದ್ರಾಕ್ಷಿ ಮಠದ ಡಾ. ಅಲ್ಲಮಪ್ರಭು ಮಹಾಸ್ವಾಮಿಗಳು ಅಭಿಪ್ರಾಯಪಟ್ಟರು. ಅವರು ಇಂದು ಆರ್.ಎನ್.ಶೆಟ್ಟಿ ಪಾಲಿಟೆಕ್ನಿಕ್ ಮಹಾವಿದ್ಯಾಲಯದ ಆವರಣದಲ್ಲಿ ಜರುಗಿದ ಸಿದ್ಧರಾಮೇಶ್ವರ ಆಂಗ್ಲ ಮಾಧ್ಯಮ ಶಾಲೆಯ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಮುಂದುವರೆದು ಮಾತನಾಡಿದ ಅವರು ಪಾಲಕರು ಮಕ್ಕಳನ್ನು ಮೊಬೈಲ್ ಗಳಿಂದ ದೂರವಿಟ್ಟು ಗ್ರಂಥಾಲಯಗಳ ಸಮೀಪ ತರಲು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಗುರುಬಸವರಾಜ ಮಾತನಾಡಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಮಕ್ಕಳನ್ನು ಕಳುಹಿಸುವುದೆಂದರೆ ಯುದ್ಧಕ್ಕೆ ಕಳಿಸುತ್ತಿರುವಂತೆ ಪಾಲಕರು ಆತಂಕಗೊಂಡಿರುತ್ತಾರೆ. ಪಾಲಕರು ಮೊದಲು ಭಯದಿಂದ ಹೊರಬಂದು ಮಕ್ಕಳನ್ನು ಮಕ್ಕಳನ್ನಾಗಿ ಇರಲು ಬಿಡಬೇಕು. ಅವರ ಮೇಲೆ ಯಾವುದೇ ರೀತಿಯ ಒತ್ತಡ ಹಾಕಬಾರದು. ಅಂಕಗಳಿಂದ ಅವರ ಸಾಧನೆ ಅಳೆಯಬಾರದು ಎಂದರು.

ಇನ್ನೋರ್ವ ಅತಿಥಿ ಸಿದ್ಧರಾಮೇಶ್ವರ ಶಿಕ್ಷಣ ಸಂಸ್ಥೆಯ ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ನ್ಯಾಯವಾದಿ ಬಸವರಾಜ ರೊಟ್ಟಿ ಮಾತನಾಡಿ ನಾಡಿನ ಬಡಮಕ್ಕಳ ಏಳಿಗಾಗಿ ಶ್ರಮಿಸಿದ ಶಿವಬಸವ ಮಹಾಸ್ವಾಮಿಗಳು ನಡೆದಾಡಿದ ಈ ನೆಲ ಪುಣ್ಯ ಭೂಮಿ.

ಇಲ್ಲಿ ಅಧ್ಯಯನ ಮಾಡಿದವರು ಖಂಡಿತವಾಗಿ ಸಾಧಕರಾಗುತ್ತಾರೆ ಎಂದರು.ಸಿದ್ಧರಾಮೇಶ್ವರ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಎಸ್.ಪಿ. ಹಿರೇಮಠ ಅಧ್ಯಕ್ಷತೆ ವಹಿಸಿದ್ದರು.

ಪ್ರಾರಂಭದಲ್ಲಿ ಪ್ರಾಚಾರ್ಯೆ ಪ್ರೇಮಲತಾ ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕಿ ಸಂಗೀತಾ ಬುರ್ಲಿ ಸ್ವಾಗತಿಸಿದರು. ವೀಣಾ ಮತ್ತು ರೋಹಿಣಿ ನಿರೂಪಿಸಿದರು. ಪೂಜಾ ಗಾಣಿಗೇರ ವಂದಿಸಿದರು

# ಪ್ರಾದೇಶಿಕ ಸೇನೆಯ ಮಾಜಿ ಯೋಧರ ಕಲ್ಯಾಣ ಸಂಘ (ರಿ): ಉದ್ಘಾಟನ ಸಮಾರಂಭ ಫೆ.21 ರಂದು

ಬೆಳಗಾವಿ : ಪ್ರಾದೇಶಿಕ ಸೇನೆಯ ಮಾಜಿ ಯೋಧರ ಕಲ್ಯಾಣ ಸಂಘ (ರಿ) ಬೆಳಗಾವಿ, ಇವರ ಸಂಯುಕ್ತ ಆಶ್ರಯದಲ್ಲಿ ಫೆಬ್ರವರಿ 21 ರಂದು ಕುಮಾರ ಗಂಧರ್ವ ಕಲಾ ಮಂದಿರದಲ್ಲಿ ಬೆಳಿಗ್ಗೆ 10 ಗಂಟೆಗೆ

ಪ್ರಾದೇಶಿಕ ಸೇನೆಯ ಮಾಜಿ ಯೋಧರ ಕಲ್ಯಾಣ ಸಂಘದ ಉದ್ಘಾಟನಾ ಸಮಾರಂಭ ಆಯೋಜಿಸಲಾಗಿದೆ.

ಹುಕ್ಕೇರಿ ಹಿರೇಮಠದ ಶ್ರೀ ಷ.ಬ್ರ.ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಹಾಗೂ ಗೋಕಾಕ ಪಂಚನಾಯಕನಹಟ್ಟಿ ಸಿದ್ದಾರೂಡ ಆಶ್ರಮ ಶ್ರೀ ಕೇಶವಾನಂದ ಪುರಿ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸುವರು.

ಲೆಫ್ಟಿನೆಂಟ್ ಕರ್ನಲ್ ರಾಜು ಶುಕ್ಲಾ (ನಿವೃತ್ತ ಸೇನಾ ಅಧಿಕಾರಿ) ಅವರು ಉದ್ಘಾಟಕರಾಗಿ ಆಗಮಿಸಲಿದ್ದು, ಮುಖ್ಯ ಅಥಿತಿಗಳಾಗಿ ಲೆಫ್ಟಿನೆಂಟ ಕರ್ನಲ್ ಶ್ರೀನಿವಾಸ ರಾವನಿ (ವೃತ್ತ ಸೇನಾ ಅಧಿಕಾರಿ ಹಾಗೂ ವಿಜಯ ಆಸ್ಪತ್ರೆ ಪ್ರಮುಖರಾದ (ಸಿಇಒ) ರವಿ ಪಾಟೀಲ ಅವರು ಆಗಮಿಸಲಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿಕ ಇಲಾಖೆ ಉಪನಿರ್ದೇಶಕರಾದ ವಿದ್ಯಾವತಿ ಭಜಂತ್ರಿ ಅವರು ಗೌರವ ಉಪಸ್ಥಿತತಿರಲಿದ್ದು, ಪ್ರಾದೇಶಿಕ ಸೇನೆಯ ಮಾಜಿ ಯೋಧರ ಕಲ್ಯಾಣ ಸಂಘದ ಅಧ್ಯಕ್ಷರಾದ ವಿಲಾಸ ಜಂಗಳಿ ಅವರು ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

# ನಾಳೆ ಛತ್ರಪತಿ ಶಿವಾಜಿ ಮಹಾರಾಜ ಜಯಂತಿ

ಕಾರವಾರ,: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ನಗರ ಸಭೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಛತ್ರಪತಿ ಶಿವಾಜಿ ಮಹಾರಾಜ ಜಯಂತಿಯನ್ನು ಫೆ. 19 ರಂದು ಬೆಳಗ್ಗೆ 10 ಗಂಟೆಗೆ ಕಾರವಾರದ ನಗರಸಭೆ ಉದ್ಯಾನವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಮೀನುಗಾರಿಗೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಕರ್ನಾಟಕ ಮಾರ್ಕೇಟಿಂಗ್ ಕನ್ಸಲೆಂಟ ಅಂಡ್ ಏಜೆನ್ಸಿಸ್ ಅಧ್ಯಕ್ಷ ಸತೀಶ ಕೆ. ಸೈಲ್ ಅಧ್ಯಕ್ಷತೆ ವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಸಭಾಪತಿ ಬಸವರಾಜ ಹೊರಟ್ಟಿ, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕರಾದ ಶಿವರಾಮ ಹೆಬ್ಬಾರ್, ದಿನಕರ ಕೆ. ಶೆಟ್ಟಿ, ಭೀಮಣ್ಣ ಟಿ. ನಾಯ್ಕ, ಸದಸ್ಯರಾದ ಎಸ್. ವಿ.ಸಂಕನೂರು, ಶಾಂತಾರಾಮ ಬುಡ್ನ ಸಿದ್ದಿ, ಗಣಪತಿ ಡಿ.ಉಳ್ವೇಕರ ಹಾಗೂ ನಗರ ಸಭೆ ಅಧ್ಯಕ್ಷ ರವಿರಾಜ ಚಂದ್ರಹಾಸ ಅಂಕೋಲೇಕರ ಮತ್ತಿತರರು ಪಾಲ್ಗೋಳ್ಳಲಿದ್ದಾರೆ.

### ಅಟಲ್ ಭೂಜಲ ಯೋಜನೆಯಡಿ ಸಮುದಾಯ ಸಹಭಾಗಿತ್ವದೊಂದಿಗೆ ಅಂತರ್ಜಲ ನಿರ್ವಹಣೆ, ನೀರಿನ ಬೇಡಿಕೆ ಕಡಿಮೆ ಮಾಡುವ ಸೂಕ್ಷ್ಮ ನೀರಾವರಿ ತಾಂತ್ರಿಕತೆಗಳು ಮತ್ತು ನೀರಿನ ಮರು ಪೂರೈಕೆ ಕ್ರಮಗಳ ಕುರಿತು ರೈತರಿಗೆ ತರಬೇತಿ

ಗದಗ : ಕೃಷಿ ಇಲಾಖೆಯ ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಧಾರವಾಡದ ವತಿಯಿಂದ ಅಟಲ್ ಭೂಜಲ ಯೋಜನೆಯಡಿ ಸಮುದಾಯ ಸಹಭಾಗಿತ್ವದೊಂದಿಗೆ ಅಂತರ್ಜಲ ನಿರ್ವಹಣೆ, ಜಲ ಭದ್ರತಾ ಯೋಜನೆ ಸಿದ್ದಪಡಿಸುವುದು, ನೀರಿನ ಬೇಡಿಕೆ ಕಡಿಮೆ ಮಾಡುವ ಸೂಕ್ಷ್ಮ ನೀರಾವರಿ ತಾಂತ್ರಿಕತೆಗಳು ಮತ್ತು ನೀರಿನ ಮರು ಪೂರೈಕೆ ಕ್ರಮಗಳ ಕುರಿತು ದಿನಾಂಕ: 18–02–2025 ರಂದು ಗದಗ ಜಿಲ್ಲೆಯ ಗದಗ ತಾಲ್ಲೂಕಿನ ರೈತರಿಗೆ, ಹಾಗೂ 19–02–2025 ರಂದು ರೋಣ ತಾಲ್ಲೂಕಿನ ರೈತರಿಗೆ ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಬೆಳಗ್ಗೆ 10:00 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ದಿನಾಂಕ: 18.02.2025 ರಂದು ಗದಗ ತಾಲ್ಲೂಕಿನ ಆಸಕ್ತ 60 ಜನ ರೈತರು ಸದರಿ ತರಬೇತಿಯಲ್ಲಿ ಭಾಗವಹಿಸಲು ವಿ. ವಿ. ಮ್ಯಾಗೇರಿ, ಕೃಷಿ ಅಧಿಕಾರಿಗಳು, ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಗದಗ ಮೊಬೈಲ್ ಸಂಖ್ಯೆ 8277931458 ಗೆ ಹಾಗೂ 19–02–2025 ರಂದು ರೋಣ ತಾಲ್ಲೂಕಿನ ಆಸಕ್ತ 60 ಜನ ರೈತರು ತರಬೇತಿಯಲ್ಲಿ ಭಾಗವಹಿಸಲು ಗೋಣಿಬಸಪ್ಪ, ಕೃಷಿ ಅಧಿಕಾ–ರಿಗಳು, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ರೋಣ ಮೊಬೈಲ್ ಸಂಖ್ಯೆ 9481354843 ಇವರಿಗೆ ಕರೆ ಮಾಡಿ ನೋಂದಾಯಿಸಲು ತಿಳಿಸಲಾಗಿದೆ.

ಮೊದಲು ನೋಂದಾವಣಿ ಮಾಡಿಕೊಂಡ 60 ಜನ ರೈತ ಭಾಂದವರಿಗೆ ಆದ್ಯತೆ ಮೇರೆಗೆ ತರಬೇತಿಗೆ ಪರಿಗಣಿಸಲಾಗುವುದು ಹಾಗೂ ತರಬೇತಿಗೆ ಹಾಜರಾಗುವ ರೈತ ಬಾಂಧವರು ಕಡ್ಡಾಯವಾಗಿ ತಮ್ಮ ಎಫ್ಐಡಿ ಕಾರ್ಡ್ ಅಥವಾ ಚುನಾವಣೆ ಗುರುತಿನ ಚೀಟಿಯನ್ನು ತರಲು ತಿಳಿಸುತ್ತಾ ರೈತರು ತರಬೇತಿಯ ಸದುಪಯೋಗ ಪಡೆದುಕೊಳ್ಳಲು ಜಂಟಿ ಕೃಷಿ ನಿರ್ದೇಶಕಿ ಶ್ರೀಮತಿ ತಾರಾಮಣಿ ಜಿ. ಹೆಚ್ ಹಾಗೂ ಸಹಾಯಕ ಕೃಷಿ ನಿರ್ದೇಶಕಿ ಶ್ರೀಮತಿ ಸುಷ್ಮಾ ಮಳಿಮಠ, ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

********



ರಾಯಬಾಗ ದಿನಾಂಕ 19 ರಂದು ನಡೆಯಲಿರುವ ರಾಯಭಾಗ ತಾಲೂಕ ಎಂಟನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಲುವಾಗಿ ಕರ್ನಾಟಕ ರಕ್ಷಣಾ ವೇದಿಕೆ ಹಾಗೂ ಕನ್ನಡ ಅಭಿಮಾನಿ ಬಳಗ ಹಾಗೂ ಕನ್ನಡಪರ ಸಂಘಟನೆಗಳು ಅಂಬೇಡ್ಕರ್ ಸರ್ಕಲ್ ದಿಂದ ಮಹಾವೀರ ಭವನದವರೆಗೆ ರಸ್ತೆ ಎರಡು ಬದಿಗೆ ಕನ್ನಡದ ಧ್ವಜಗಳನ್ನು ಕಟ್ಟಿ ಶೃಂಗೇರಿಸುತ್ತಿರುವುದು.

# ಗ್ರಾಮ ಪಂಚಾಯತ್‌ಗಳು ಮಕ್ಕಳ ಆಯವಯ್ಯ ಮಂಡಿಸಿ: ಶೇಖರಗೌಡ ಜಿ ರಾಮತ್ನಾಳ

ಕೊಪ್ಪಳ : ಗ್ರಾಮ ಪಂಚಾಯತ್‌ಗಳು 2025–26ನೇ ಸಾಲಿನಲ್ಲಿ ಕಡ್ಡಾಯವಾಗಿ "ಮಕ್ಕಳ ಆಯವಯ್ಯ"ವನ್ನು ಮಂಡಿಸಬೇಕು ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶೇಖರಗೌಡ ಜಿ ರಾಮತ್ನಾಳ ಹೇಳಿದರು.

ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಕುಷ್ಟಗಿ ತಾಲೂಕು ಆಡಳಿತ, ತಾಲೂಕು ಪಂಚಾಯತ್, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಯ ಸಂಯುಕ್ತಾಶ್ರಯದಲ್ಲಿ ಶುಕ್ರವಾರ ಕುಷ್ಟಗಿ ತಾ.ಪಂ ಸಭಾಂಗಣದಲ್ಲಿ ಕುಷ್ಟಗಿ ತಾಲೂಕಿನ, ತಾಲೂಕು ಮಟ್ಟದ ಮಕ್ಕಳ ರಕ್ಷಣೆಯ ವಿವಿಧ ಸಮಿತಿಯ ಸದಸ್ಯರುಗಳೊಂದಿಗೆ ಹಮ್ಮಿಕೊಂಡಿದ್ದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಕ್ಕಳ ಮೇಲಾಗುವ ಯಾವುದೇ ರೀತಿಯ ಅಪರಾಧಗಳನ್ನು ತಡೆಗಟ್ಟಲು ಮಕ್ಕಳು ಶಾಲೆಯಲ್ಲಿರುವುದು ಅತ್ಯವಶ್ಯಕವಾಗಿದೆ. ಈ ಕಾಯ್ದೆಯು ಜಾರಿಯಾಗಿ 15 ವರ್ಷಗಳು ಗತಿಸಿದರು, ಶಾಲೆಯಿಂದ ಮಕ್ಕಳು ಹೊರಗುಳಿಯುತ್ತಿರುವುದು ಕಂಡುಬರುತ್ತಿದ್ದು, ಈ ರೀತಿಯಲ್ಲಿ ಶಾಲೆಯಿಂದ ಹೊರಗುಳಿದ, ಬಿಟ್ಟು ಹೋದ ಮಕ್ಕಳೇ ಬಾಲ್ಯವಿವಾಹ, ಬಾಲಕಾರ್ಮಿಕ ಅಥವಾ ಲೈಂಗಿಕ ಶೋಷಣೆಗೆ ಒಳಗಾಗುತ್ತಿದ್ದಾರೆ. ಆದ್ದರಿಂದ ಶಿಕ್ಷಣ ಇಲಾಖೆ, ಸ್ಥಳೀಯ ಸರಕಾರಗಳು ಮಕ್ಕಳನ್ನು ಮರಳಿ ಶಾಲೆ ದಾಖಲಿಸಲು ಕ್ರಮವಹಿಸಬೇಕು ಎಂದರು.



ಗ್ರಾಮ ಪಂಚಾಯತ್‌ಗಳನ್ನು ಮಕ್ಕಳ ಸ್ನೇಹಿಯನ್ನಾಗಿಸಲು ಹಾಗೂ ಮಕ್ಕಳ ಭಾಗವಹಿಸುವ ಹಕ್ಕುಗಳನ್ನು ಖಾತ್ರಿಪಡಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು 2024ರ ನವೆಂಬರ್ 14 ರಿಂದ 2025ರ ಜನವರಿ 24 ರವರೆಗೆ "ಮಕ್ಕಳಸ್ನೇಹಿ ಗ್ರಾಮ ಪಂಚಾಯತ್ ಅಭಿಯಾನ ಹಾಗೂ ಒಂದು ಮಕ್ಕಳ ಹಕ್ಕುಗಳ ಗ್ರಾಮ ಸಭೆಗಳನ್ನು" ಆಯೋಜಿಸಲು ಆದೇಶಿಸಿದ್ದು, ಆದರೆ ಕುಷ್ಟಗಿ ತಾಲೂಕಿನ ಬೆರಳೆಣಿಕೆ ಗ್ರಾಮ ಪಂಚಾಯತ್‌ಗಳಲ್ಲಿ ಮಾತ್ರ ಕೇವಲ 'ಮಕ್ಕಳ ಹಕ್ಕುಗಳ ಗ್ರಾಮ ಸಭೆ'ಯನ್ನು ಆಯೋಜಿಸಿರುವುದಕ್ಕೆ ವಿಷಾಧನಿಯ. ಆದಷ್ಟು ಶೀಘ್ರದಲ್ಲಿ ಇನ್ನೂಳಿದ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿಯೂ "ಮಕ್ಕಳ ಹಕ್ಕುಗಳ ಗ್ರಾಮ ಸಭೆಯನ್ನು ಆಯೋಜಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು. ಗ್ರಾಮ ಪಂಚಾಯತ್ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ 'ಕಸ ವಿಲೇವಾರಿ ವಾಹನ'ಗಳ ಮೂಲಕ "ಬಾಲ್ಯವಿವಾಹ ಶಿಕ್ಷಾರ್ಹ ಅಪರಾಧ" ಎಂದು ಪ್ರಚುರಪಡಿಸುವ ಮೂಲಕ ಸಮುದಾಯದಲ್ಲಿ ಜಾಗೃತಿಯನ್ನು ಮೂಡಿಸಲು ಕ್ರಮವಹಿಸುವಂತೆ ಸೂಚನೆ ನೀಡಿದರು.

ಬಾಲ್ಯವಿವಾಹ ಮುಕ್ತ ಕೊಪ್ಪಳ ಜಿಲ್ಲೆಯನ್ನಾಗಿಸಲು ಸಮುದಾಯದಲ್ಲಿ ಇನ್ನೂ ಸಾಕಷ್ಟು ಜಾಗೃತಿಯನ್ನು ಮೂಡಿಸಬೇಕಾಗಿರುತ್ತದೆ. ಸಾಮೂಹಿಕ ವಿವಾಹಗಳನ್ನು ಆಯೋಜಿಸುವ ದೇವಸ್ಥಾನಗಳಲ್ಲಿ, ಶಾದಿ ಮಹಲ್, ಖಾಸಗಿ ಕಲ್ಯಾಣ ಮಂಟಪ ಮತ್ತು ಪಂಕ್ಷನ ಹಾಲ್‌ಗಳಲ್ಲಿ "ಬಾಲ್ಯವಿವಾಹ ಶಿಕ್ಷಾರ್ಹ ಅಪರಾಧ" ಎಂಬ ಗೋಡೆ ಬರಹವನ್ನು ಬರೆಯಿಸಿದಲ್ಲಿ ಮಾತ್ರವೇ ಸಾಮೂಹಿಕ ವಿವಾಹ ಅಥವಾ ವಿವಾಹ ಆಯೋಜನೆಗೆ ಅನುಮತಿಯನ್ನು ನೀಡಲು ಕ್ರಮವಹಿಸುವಂತೆ ಸಂಬಂಧಿಸಿದ ಎಲ್ಲಾ ಸ್ಥಳೀಯ ಸರಕಾರಗಳಾದ ಗ್ರಾಮ ಪಂಚಾಯತ್ ಹಾಗೂ ಪಟ್ಟಣ, ಪುರಸಭೆಯ ಮುಖ್ಯಸ್ಥರುಗಳಿಗೆ ಸೂಚಿಸಿದರು.

ಬಾಲಕಾರ್ಮಿಕ ಮಕ್ಕಳನ್ನು ಗುರುತಿಸಿ ಪುನರವಸತಿಯನ್ನು ಕಲ್ಪಿಸಲು ವಿವಿಧ ಭಾಗೀದಾರರ ಇಲಾಖೆಗಳಾದ ಕಾರ್ಮಿಕ ಇಲಾಖೆ, ಪೊಲೀಸ್ ಇಲಾಖೆ, ಕೃಷಿ ಇಲಾಖೆ, ಅಬಕಾರಿ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳು ನಿಯಮಿತವಾಗಿ ಜಂಟಿ 'ಅನಿರೀಕ್ಷಿತ ದಾಳಿ'ಗಳನ್ನು ಕೈಗೊಳ್ಳಬೇಕು. ಶಾಲಾ ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ಕಡ್ಡಾಯವಾಗಿ "ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ–2016 ಪರಿಷ್ಕರಣೆ–2023"ನ್ನು ಅನುಷ್ಠಾನಗೊಳಿಸಬೇಕು, ಒಂದು ವೇಳೆ ಶೈಕ್ಷಣಿಕ ಸಂಸ್ಥೆಗಳ ಅಧಿಕಾರಿ, ಸಿಬ್ಬಂಧಿಗಳು ಮಕ್ಕಳ ಮೇಲೆ ಯಾವುದೇ ರೀತಿಯ ಅಪರಾಧಗಳನ್ನು ಎಸಗಿದಲ್ಲಿ, ಕಾನೂನು ರೀತ್ಯಾ ಮತ್ತು ನಿಯಮಾನುಸಾರ ಕ್ರಮಗಳನ್ನು ನಿರ್ದಾಕ್ಷಿ ?ಯಣವಾಗಿ ಜರುಗಿಸಬೇಕು.

ಒಂದು ವೇಳೆ ಮಕ್ಕಳ ರಕ್ಷಣಾ ನೀತಿಯನ್ನು ಅನುಷ್ಠಾನಗೊಳಿಸುವಲ್ಲಿ ವಿಳಂಬವಾದಲ್ಲಿ ಸಂಬಂಧಿಸಿದ ಸಂಸ್ಥೆಯ ಮುಖ್ಯಸ್ಥರುಗಳನ್ನು ಹೊಣಿಗಾರರನ್ನಾಗಿಸಲಾಗುವುದು ಎಂದರು.

ಕರ್ನಾಟಕ ಅಬಕಾರಿ ಕಾಯ್ದೆ–1965 ಕಲಂ(20)(1) ರನ್ವಯ ಬಾರ್, ವೈನ್ ಶಾಪ್, ಲಿಕ್ಕರ್ ಮಾರಾಟ ಕೇಂದ್ರ/ ಮಳಿಗೆಗಳಲ್ಲಿ 18 ವರ್ಷದೊಳಗಿನ ಯಾರೇ ಮಕ್ಕಳನ್ನು ಕಡ್ಡಾಯವಾಗಿ ಕೆಲಸಕ್ಕೆ ನೇಮಿಸಿಕೊಳ್ಳುವಂತಿಲ್ಲ, ನೇಮಿಸಿಕೊಂಡಿದ್ದೇ ಆದಲ್ಲಿ ಅಂತಂಹ ವೆಂರ್ಡ್ಸಗ್ಳ ಸನ್ನದನ್ನು ರದ್ದುಪಡಿಸಬಹುದಾಗಿದೆ, ಆದ್ದರಿಂದ ಎಲ್ಲಾ ವೆಂರ್ಡ್ಸಗ್ಳಿಗೆ ಈ ಬಗ್ಗೆ "ನೋಟೀಸ್"ನ್ನು ನೀಡಿ ವರದಿಯನ್ನು ಆಯೋಗಕ್ಕೆ ಸಲ್ಲಿಸುವಂತೆ ಹೇಳಿದರು.

ಕೃಷಿ ಹೊಂಡಗಳಲ್ಲಿ ಮಕ್ಕಳು ಬಿದ್ದು ಮೃತಪಟ್ಟಿರುವ ಘಟನೆಗಳು ಜಿಲ್ಲೆಯಲ್ಲಿ ವರದಿಯಾಗಿರುತ್ತವೆ. ಆದ–್ದರಿಂದ ಎಲ್ಲಾ ಕೃಷಿ ಹೊಂಡಗಳಿಗೆ ಇಲಾಖೆಯ ನಿಯಮಾನುಸಾರ ಬೇಲಿ ವ್ಯವಸ್ಥೆ, ಎಚ್ಚರಿಕೆ ಫಲಕ ಹಾಗೂ ಜೀವ ರಕ್ಷಕ ಸಾಧನಗಳನ್ನು ಅಳವಡಿಸುವುದು ಕಡ್ಡಾಯವಾಗಿರುತ್ತದೆ.

ಈ ಕುರಿತು ಕ್ರಮವಹಿಸುವುದು. ಯಾವುದೇ ಅವಘಡ ಸಂಭವಿಸಿದಲ್ಲಿ ಇಲಾಖೆಯ ನಿಯಮಾನುಸಾರ ಪೊಲೀಸ್ ಠಾಣೆಗಳಲ್ಲಿ ಅಂತಂಹ ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಲು ಅವಕಾವಿದ್ದು ಯಾವುದೇ ಅವಘಡ ಸಂಭವಿಸಿದಲ್ಲಿ ಆಯೋಗವು ಕ್ರಮಕ್ಕೆ ಶಿಫ್ಹಾರಸು ಮಾಡುತ್ತದೆಂದು ಹೇಳಿದರು.

ಸಭೆಯಲ್ಲಿ ಕೊಪ್ಪಳ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಮಹಾಂತ ಸ್ವಾಮಿ ಪೂಜಾರ ಸೇರಿದಂತೆ ವಿವಿಧ ಇಲಾಖೆಗಳ ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

****

# ಅರ್ಜಿ ಆಹ್ವಾನ

ವಿಜಯಪುರ : ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಜನಾಂಗದವರ ಶ್ರೇಯಸ್ಸಿಗಾಗಿ, ಪ್ರೋತ್ಸಾಹಿಸಿ, ಶ್ರಮಿಸಿ, ಗಣನೀಯ ಸೇವೆ ಸಲ್ಲಿಸಿದ ಅರ್ಹ ವ್ಯಕ್ತಿಗಳನ್ನು ಗುರುತಿಸಿ ಪ್ರಶಸ್ತಿ ನೀಡಿ ಗೌರವಿಸಲು ಉದ್ಧೇಶಿಸಲಾಗಿದ್ದು, ಅರ್ಹ-ರಿಂದ ಅರ್ಜಿ ಆಹ್ವಾನಿಸಲಾಗಿದೆ.

ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಏಪ್ರಿಲ್ 05 ರಂದು ಡಾ. ಬಾಬು ಜಗಜೀವನ ರಾಂ ಅವರ 118ನೇ ಹಾಗೂ ಏಪ್ರಿಲ್ 14ರಂದು ಡಾ. ಬಿ.ಆರ್. ಅಂಬೇಡ್ಕರ್ ಅವರ 134ನೇ ಜನ್ಮ ದಿನಾಚಾರಣೆಯನ್ನು ಆಚರಿಸಲಾಗುತ್ತಿದ್ದು, ಈ ಸಂದರ್ಭದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಪ್ರಶಸ್ತಿಗೆ ಅರ್ಜಿ ಸಲ್ಲಿಸ ಬಯಸುವವರು ನಿಗದಿತ ಅರ್ಜಿ ನಮೂನೆಯನ್ನು ಉಪ ನಿರ್ದೇಶಕರ ಕಛೇರಿ ಸಮಾಜ ಕಲ್ಯಾಣ ಇಲಾಖೆ ವಿಜಯಪುರ ಹಾಗೂ ತಾಲೂಕಿನ ಸಮಾಜ ಕಲ್ಯಾಣ ಅಧಿಕಾರಿಗಳ ಸಹಾಯಕ ನಿರ್ದೇಶಕರ ಕಛೇರಿಯಿಂದ ಪಡೆದು, ದಿನಾಂಕ 25-02-2025ರ ಒಳಗಾಗಿ ಸಲ್ಲಿಸಬೇಕು. ಈ ಕುರಿತಂತೆ ಹೆಚ್ಚಿನ ಮಾಹಿತಿಗಾಗಿ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರ ಕಛೇರಿ ವಿಜಯಪುರ ಇವರನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ಸಾವಯವ ಕೃಷಿ ಗೋಷ್ಠಿ ಮತ್ತು ಮಾರಾಟ ಮಳಿಗೆ ಉದ್ಘಾಟನೆ ಇಂದು

ಮಹಾಲಿಂಗಪುರ: ಸ್ಥಳೀಯ ಕೆಎಲ್ಇ ಪದವಿ ಕಾಲೇಜ್ ಆವರಣದಲ್ಲಿ ಸದೃಢ ಸಮಾಜಕ್ಕಾಗಿ ಸಾವಯವ ಕೃಷಿ ವಿಷಯವಾಗಿ ಗೋಷ್ಠಿ ಕಾರ್ಯಕ್ರಮ ಫೆ.18 ರಂದು ಸಂಜೆ 4 ಗಂಟೆಗೆ ನಡೆಯಲಿದೆ. ಶ್ರೀ ಮಾಧವಾನಂದ ವಿವಿದೋದ್ದೇಶಗಳ ಸಹಕಾರ ಸಂಘ ಮತ್ತು ರನ್ನ ಸಾವಯವ ಕೃಷಿ ಪರಿವಾರ ಹಾಗೂ ಕೆ-ಎಲ್ಇ ಪದವಿ ಕಾಲೇಜಿನ ಆಶ್ರಯದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಕೊಲ್ಹಾಪೂರ, ಕನೇರಿಯ ಸಿದ್ದಗಿರಿ ಸಂಸ್ಥಾನಮಠದ ಶ್ರೀ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮಿಜಿ ಸಾನಿಧ್ಯ ವಹಿಸಿ ಉಪನ್ಯಾಸ ನೀಡಲಿದ್ದಾರೆ. ಮುಧೋಳ ರಸ್ತೆಯಲ್ಲಿ ನೂತನ ಸಾವಯವ ಕೃಷಿ ಉತ್ಪನ್ನ ಮಾರಾಟ ಮಳಿಗೆ ಕೂಡ ಉದ್ಘಾಟನೆಗೊಳ್ಳಲಿದೆ. ಶಿರೋಳ ರಾಮಾರೂಢ ಮಠದ ಶ್ರೀ ಶಂಕರಾರೂಢ ಸ್ವಾಮಿಜಿ, ಕೊಂಚೂರು ಸವಿತಾಪೀಠದ ಶ್ರೀ ಸವಿತಾನಂದ ಸ್ವಾಮಿಜಿ ಸಾನಿಧ್ಯ ವಹಿಸಲಿದ್ದಾರೆ. ಮಧ್ಯಾಹ್ನ 2ರಿಂದ 4 ಗಂಟೆವರೆಗೆ ನೇತ್ರಾಮೃತ ಕಾರ್ಯಕ್ರಮದಲ್ಲಿ ವಿಶೇಷ ನೇತ್ರಬಿಂದು ಹಾಕಲಾಗುವುದು. ರೈತರಿಗಾಗಿ ವಿಶೇಷ ಜೀವಾಮೃತದ ಪ್ರಾತ್ಯಕ್ಷಿಕೆ ಕೂಡ ಇದೆ. ಜೊತೆಗೆ ಮಂಡಿನೋವು, ಸಕ್ಕರೆ ಕಾಯಿಲೆ, ಚರ್ಮರೋಘ, ರಕ್ತದೊತ್ತಡ, ಉದರ ತೊಂದರೆ, ನಿದ್ರಾಹೀನತೆಗೆ ಉಪಚಾರ ಮತ್ತು ಸಲಹೆಗಳಿರುತ್ತವೆ. ಸುತ್ತಲಿನ ರೈತರು ಈ ಗೋಷ್ಠಿಯ ಪ್ರಯೋಜನ ಪಡೆಯಬೇಕೆಂದು ಸಾವಯವ ಕೃಷಿಪ-ರಿವಾರದ ರೂವಾರಿ ಆರ್.ಟಿ.ಪಾಟೀಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಕ್ಷಾ ಸರ್ವೆ ಕಾರ್ಯ ಚಾಲನೆ ಸಮಾರಂಭ


ಗೋಕಾಕ: ಭೂ ಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ ಹಾಗೂ ನಗರಸಭೆ ಗೋಕಾಕ ಇವರ ಸಂಯುಕ್ತ ಆಶ್ರಯದಲ್ಲಿ ಕೇಂದ್ರ ಸರಕಾರದ ಮಹತ್ವಾಕಾಂಕ್ಷಿ ಯೋಜನೆ "ನಕ್ಷಾ" ಸರ್ವೆ ಕಾರ್ಯ ಚಾಲನೆ ಸಮಾರಂಭ ಇದೆ ದಿ.18ರ ಮಂಗಳವಾರದಂದು ಬೆಳಿಗ್ಗೆ 11ಗಂಟೆಗೆ ನಗರದ ನಗರಸಭೆ ಸಭಾ ಭವನದಲ್ಲಿ ಜರುಗಲಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ನೆರವೇ-ರಿಸುವರು. ಅಧ್ಯಕ್ಷತೆಯನ್ನು ಶಾಸಕ ರಮೇಶ ಜಾರಕಿಹೊಳಿ ವಹಿಸುವರು. ಘನ ಉಪಸ್ಥಿತಿ ಶಾಸಕ ಬಾಲಚಂದ್ರ ಜಾರಕಿಹೊಳಿ, ಮುಖ್ಯಅತಿಥಿಗಳಾಗಿ ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ಸಂಸದ ಜಗದೀಶ ಶೆಟ್ಟರ, ಸಂಸದೆ ಪ್ರಿಯಾಂಕಾ ಜಾರಕಿಹೊಳಿ, ವಿಧಾನ ಪರಿಷತ ಸದಸ್ಯರಾದ ಲಖನ ಜಾರಕಿಹೊಳಿ, ಪ್ರಕಾಶ ಹುಕ್ಕೇರಿ, ಚನ್ನರಾಜ ಹಟ್ಟಿಹೊಳಿ, ಹನಮಂತ ನಿರಾಣಿ, ನಗರಸಭೆ ಅಧ್ಯಕ್ಷ ಪ್ರಕಾಶ ಮುರಾರಿ ವಹಿಸುವರು. ತಹಶೀಲದಾರ ಡಾ.ಮೋಹನ ಭಸ್ಮೆ, ಡಿವೈಎಸ್‌ಪಿ ಡಿ ಎಚ್ ಮುಲ್ಲಾ, ಪೌರಾಯುಕ್ತ ರಮೇಶ ಜಾಧವ ಉಪಸ್ಥಿತರಿರಲಿದ್ದು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಭೂ ದಾಖಲೆಗಳ ಸಹಾಯಕ ನಿರ್ದೇಶಕ ಆರ್ ಆರ್ ಪಾಟೀಲ ಕೋ-ರಿದ್ದಾರೆ.

# ತಾಳಿಕೋಟೆ ಶೈಕ್ಷಣಿಕ ಕಾಶಿ ಕ್ಷೇತ್ರವಾಗಿದೆ-ಶ್ರೀಕಾಂತ

ತಾಳಿಕೋಟೆ, ದಕ್ಷ ಆಡಳಿತ ಹೊಂದಿದ್ದಲ್ಲದೇ ಯಾವ ಆಸೆ ಆಕಾಂಕ್ಷೆಗಳಿಲ್ಲದೇ ಪ್ರಚಾರವಿಲ್ಲದೇ ನಾಲ್ಕಾರು ಸಾವಿರದಲ್ಲಿ ಎಲ್‌ಕೆಜಿ ಹಿಡಿದು 8 ರಿಂದ ಪ್ರೌಢ ಶಾಲೆ, ಆಯ್.ಟಿ. ಆಯ್., ಬಿ.ಎ., ಬಿಕಾಂ, ಬಿಎಡ್, ಈ ಎಲ್ಲದರಲ್ಲಿಯೂ ಕಲಿಯಲು ತಾಳಿಕೋಟೆ ಪಟ್ಟಣದಲ್ಲಿ ಅವಕಾಶ ಕಲ್ಪಿಸಿದಂತಹ ವೀರಶೈವ ವಿದ್ಯಾವರ್ದಕ ಸಂಘವು ಶ್ರೀ ಖಾಸ್ಗತೇಶ್ವರ ಹೆಸರಿನಲ್ಲಿ ಮುಂದುವರೆದಿದ್ದು ಇದು ಇಡೀ ರಾಜ್ಯದಲ್ಲಿಯೇ ಹೆಸರು ಗಳಿಸಲು ಕಾರಣವಾಗಿದೆ ಎಂದು ಜೆ-ಎಸ್‌ಜಿ ಪೌಂಡೇಶನ್ ಪ.ಪೂ.ಕಾಲೇಜಿನ ಕಾರ್ಯದರ್ಶಿಗಳಾದ ಶ್ರೀಕಾಂತ ಪತ್ತಾರ ಅವರು ಹೇಳಿದರು.

ರವಿವಾರರಂದು ಶ್ರೀ ಖಾಸ್ಗತೇಶ್ವರ ಕನ್ನಡ ಮತ್ತು ಆಂಗ್ಲ ಮಾಧ್ಯಮ ಪೂರ್ವ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಪ್ರೌಢ ಶಾಲೆಗಳ 2024-25ನೇ ಸಾಲಿನ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡುತ್ತಿದ್ದ ಅವರು ವೀ.ವಿ.ಸಂಘ ಈ ಸಂಸ್ಥೆ ಖಾಸ್ಗತೇಶ್ವರ ಹೆಸರಿನ ಶಾಲೆಗಳನ್ನು ಸ್ಥಾಪಿಸಿ ಶಿಕ್ಷಣವನ್ನು ಮುಗಿಸಿಕೊಡುವಂತಹ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಿಕೊಟ್ಟಿರುವದು ಸಂತಸದಾಯವಾಗಿದೆ ಎಂದರು. ಮಕ್ಕಳಿಗೆ ತಾಯಿಯು ಸಂಸ್ಕಾರ ಕಲ್ಪಿಸಿಕೊಡುವಂತಹ ಕಾರ್ಯ ಮಾಡುತ್ತಾಳೆ ಅಂತಹ ಸಂಸ್ಕಾರ ಕಲ್ಪಿಸಿಕೊಡುವಂತಹ ಕಾರ್ಯ ವೀ.ವಿ.ಸಂಘ ಮಾಡುತ್ತಾ ಸಾಗಿದೆ ಎಂದರು. ಮಕ್ಕಳಿಗೆ ಅರ್ಹವಾಗುವ ತಾಯಿಯ ಕಥೆಯೊಂದನ್ನು ಹೇಳಿದ ಶ್ರೀಕಾಂತ ಅವರು




ಪ್ರಾಮಾಣಿಕವಾಗಿ ಬಧುಕು ಕಲಿಸಿದ ತಾಯಿ ಮುಂದೆ ಆ ಮಗನಿಗೆ ಉಪಯೋಗವಾಗಿ ವಿಜ್ಞಾನಿ ಸಿ.ವ್ಹಿ.ರಾಮನ್ ಅವರಿಂದ ಹುದ್ದೆ ಪಡೆದು ತಾಯಿಯ ಸಂಸ್ಕಾರದಿಂದ ಮುನ್ನಡೆದಿದ್ದರ ಕುರಿತು ವಿವರಿಸಿದರು. ವಿದ್ಯಾರ್ಥಿಗಳಲ್ಲಿ ಪ್ರಾಮಾಣಿಕತೆ ಎಂಬುದು ಅಗತ್ಯವಾಗಿದೆ ಪ್ರಾಮಾಣಿಕತೆಯಿಂದಲೇ ಮುಂದಿನ ಏಳಿಗೆಯಾಗಲಿದೆ ಕಾರಣ ವಿದ್ಯಾರ್ಥಿಯಾದವನು ತಂದೆ ತಾಯಿಯನ್ನು ಗೌರವಿಸುವ ಕಾರ್ಯವಾಗಬೇಕು ಇದ-ರಿಂದ ಆದರ್ಶವಾಗಲು ಸಾದ್ಯವಾಗಲಿದೆ ಎಂದರು. ತಂದೆ ತಾಯಂದಿರರೂ ಸಹ ದಾರ್ಶನಿಕರಾಗಬೇಕು ಅಂದರೆ ಮಕ್ಕಳು ಕೂಡಾ ಒಳ್ಳೆಯ ಸ್ಥಾನಮಾನ ಕಲ್ಪಿಸಿಕೊಳ್ಳಲು ಸಾದ್ಯವಾಗಲಿದೆ ಎಂದು ಹೇಳಿದ ಪತ್ತಾರ ಅವರು ಶ್ರೀ ಖಾಸ್ಗತೇಶ್ವರ ಶಾಲಾ ಕಾಲೇಜುಗಳಲ್ಲಿ ಅಭ್ಯಸಿಸಿದ ವಿದ್ಯಾರ್ಥಿಗಳು ಸೈನಿಕರಾಗಿದ್ದಾರೆ ಇಂಜನಿಯರ್ ಆಗಿದ್ದಾರೆ ವೈಧ್ಯರಾಗಿ ಅಲ್ಲದೇ ವಿವಿಧ ಉನ್ನತ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಾ ಸಾಗಿದ್ದಾರೆಂದರು. ವಿದ್ಯಾರ್ಥಿಗಳಿಗೆ ಈ ಸಂಸ್ಥೆ ಕಲಿಯುವ ಜ್ಞಾನಾಮೃತವಾಗಲಿ ಎಂದು ಹೇಳಿದ ಅವರು ವೀ.ವಿ.ಸಂಘದ ಹಾಗೂ ಶ್ರೀ ಖಾಸ್ಗತೇಶ್ವರ ಹೆಸರಿನ ಈ ಶಾಲೆಗಳ ಇತಿಹಾಸ ಕಳೆದ 30 ವರ್ಷಗಳಿಂದಲೂ ನಾನು ಬಲ್ಲೆ ಎಂದು ಅಲ್ಲಿಯ ಶಿಕ್ಷಕರ ಹಾಗೂ ಆಡಳಿತ ಮಂಡಳಿಯವರ ಸೇವಾ ಕಾರ್ಯ ಕುರಿತು ಗುಣಗಾನ ಮಾಡಿದರು.

ಇನ್ನೋರ್ವ ಶಿಕ್ಷಣ ಸಂಂ-ಯೋಜಕರಾದ ಸುರೇಶ ಹಿರೇಮಠ ಅವರು ಮಾತನಾಡಿ ಮಕ್ಕಳ ಭವಿಷ್ಯ ರೂಪಿಸುವಲ್ಲಿ ತಂದೆ ತಾಯಿಯವರ ಪಾತ್ರ ಪ್ರಮುಖವಾಗಿದೆ ಚಿಕ್ಕವರಿರುವಾಗಲೇ ತಿದ್ದಿ ತೀಡಿ ಬುದ್ದಿ ಹೇಳುತ್ತಾ ಸಾಗಿದರೆ ಅದು ರೂಪಕ್ಕೆ ತರಲು ಸಾದ್ಯವಾಗುತ್ತದೆ ಎಂದು ತಂದೆಯ ಪ್ರೀತಿಗೆ ಪಾತ್ರಳಾದ ಮಗಳೊಬ್ಬಳು ತನ್ನ ಅಪೇಕ್ಷಿತ ಅಗತ್ಯ ವಸ್ತುಗಳನ್ನು ಬೇಡಿ ಮೋಬೈಲ್‌ನ್ನು ಸಹ ತಂದೆ ಕೊಡಿಸುತ್ತಾನೆ ಇದರಿಂದ ತಂದೆ ಮಗಳ ಸಂಬಂದವೂ ಕೂಡಾ ಕೆಟ್ಟು ಹೋಗುತ್ತದೆ ಆದರೆ ಆಕೆ ಮತ್ತೆ ತಂದೆಗೆ ಇಲ್ಲ ಸಲ್ಲದ ಅಗತ್ಯವಾದ ವಸ್ತುಗಳನ್ನು ಕೇಳಿದ್ದ-ರಿಂದ ಆತ ತನ್ನಲ್ಲಿದ್ದ ಶಕ್ತಿ ಯುಕ್ತಿಯಷ್ಟು ಮಗಳಿಗೆ ಸೇವಾ ಕಾರ್ಯ ಮಾಡಿದರೂ ಆಕೆ ಅವನೊಂದಿಗೆ ಮಾತನಾಡಲಾರದ್ದಕ್ಕೆ ಕೊನೆಗೆ ಪತ್ರಯೊಂದನ್ನು ಬರೆದಿಟ್ಟ ತಂದೆ ಮಗಳೆ ನೀನಗೆ ಆಸ್ತಿ ಮಾಡಿದ್ದೇನೆ ನಿನ್ನ ಹೆಸರಿನ ಮೇಲೆ ಹಣವೂ ಕೂಡಾ ಇಟ್ಟಿದ್ದೇನೆ ಅವು ಎರಡನ್ನು ನೀನು ಉಪಯೋಗಿಸಿಕೊಂಡು ಜೀವನ ಸಾಗಿಸು ಎಂದು ಪತ್ರ ಬರೆದಿಟ್ಟು ಮೃತಪಟ್ಟ ತಂದೆಯ ಪತ್ರವನ್ನು ಓದಿ ದುಃಖಿಸುತ್ತಿದ್ದ ತಂದೆ ಮಗಳ ಕಥೆಯೊಂದನ್ನು ವಿವರಿಸಿ ವಿದ್ಯಾರ್ಥಿಗಳಿಗೆ ಎಚ್ಚರಿಸಿದರು.

ಇನ್ನೋರ್ವ ಸಮೂಹ ಸಂಪನ್ಮೂಲ ವ್ಯಕ್ತಿಗಳಾದ ರಾಜು ವಿಜಾಪೂರ ಅವರು ಮಾತನಾಡಿ ಪಾಲಕರಾದವರು ಮಕ್ಕಳಿಗಾಗಿ ಆಸ್ತಿ ಮಾಡಬೇಡಿ ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಿ ಎಂದು ಒಳ್ಳೆಯ ಸಂಸ್ಕಾರ ಕೊಡುವ ವ್ಯವಸ್ಥೆ ಮಕ್ಕಳು ಚಿಕ್ಕವ-ರಿರುವಾಗಲೇ ಮಾಡಿದರೆ ಒಳಿತಾಗುತ್ತದೆ ಕೇವಲ ಕಲಿಸಿ ಅಂಕ ಪಡೆದರೆ ಸಾಲದು ಒಳ್ಳೆಯ ಸಂಸ್ಕಾರವೆಂಬುದು ಮಕ್ಕಳಲ್ಲಿ ಬಿತ್ತುವ ಕಾರ್ಯ ಮಾತಾಪಿತರು ಮಾಡಬೇಕೆಂದು ಚಿಕ್ಕ ಕಥೆಯೊಂದನ್ನು ಹೇಳಿದರಲ್ಲದೇ ಮಹಾಭಾರತದ ಕಥ-'ಯಲ್ಲಿದ್ದ ಕೆಲವು ಸನ್ನಿವೇಶಗಳ ಕುರಿತು ವಿವ-ರಿಸಿದರು. ದೂರವಾಣಿ ಮುಖಾಂತರ ಕಾರ್ಯಕ್ರಮಕ್ಕೆ ಶುಭ ಸಂದೇಶವನ್ನು ನೀಡಿದ ಶ್ರೀ ಖಾಸ್ಗತೇಶ್ವರ ಮಠದ ಬಾಲ ಶಿವಯೋಗಿ ಶ್ರೀ ಸಿದ್ದಲಿಂಗ ದೇವರು ತಂದೆ ತಾಯಿ ಏನು ಮಾಡುತ್ತಾರೋ ಅದನ್ನೇ ಮಕ್ಕಳು ಮಾಡುತ್ತವೆ ತಂದೆತಾಯಿಯವರು ಹಾಕಿದ ದಾರಿಯಂತೆ ಅವರು ನಡೆಯುತ್ತಾರೆ ಮುಖ್ಯವಾಗಿ ಮೊದಲು ನಮ್ಮ ಒಳ್ಳೆಯ ಸಂಸ್ಕೃತಿಯನ್ನು ಕಲಿಸುವ ಕಾರ್ಯವಾಗಲಿ ಇದರೊಂದಿಗೆ ಒಳ್ಳೆಯ ಸಂಸ್ಕಾರತನವನ್ನೂ ಕೂಡಾ ಹೇಳಿ ಎಚ್ಚರಿಸುವ ಕಾರ್ಯವಾಗಲಿ ಇನ್ನೊಬ್ಬರಿಗೆ ಗೌರವದಿಂದ ಕಾಣುವಂತಹ ಶಿಕ್ಷಣ ಇಂದಿನ ದಿನಮಾನದಲ್ಲಿ ಅಗತ್ಯವಾಗಿದೆ ಏನೇ ಇರಲಿ ನಮ್ಮೂರಿನ ಹುಡುಗರು ದೊಡ್ಡ ಮಟ್ಟಕ್ಕೆ ಬೆಳೆಯಲಿ ಅಂತಹ ಮಕ್ಕಳು ನಮ್ಮೂರಲ್ಲಿ ಆಗಲಿ ಎಂದು ಕಾರ್ಯಕ್ರಮಕ್ಕೆ ಆಶೀರ್ವಚನದೊಂದಿಗೆ ಶುಭ ಹಾರೈಸಿದರು.

ಇದೇ ಸಮಯದಲ್ಲಿ ವಿದ್ಯಾರ್ಥಿಗಳು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು. ಇದೇ ಸಮಯದಲ್ಲಿ ಅತಿಥಿ ಮಹೋದಯರಿಗೆ ಸನ್ಮಾನಿಸಿ ಗೌರವಿಸಲಾಯಿತು.

ವೇದಿಕೆಯ ಮೇಲೆ ವೀ.ವಿ.ಸಂಘದ ಅಧ್ಯಕ್ಷ ವ್ಹಿ.ಸಿ.ಹಿರೇಮಠ, ಕಾರ್ಯದರ್ಶಿ ಎಂ.ಎಸ್.ಸರಶೆಟ್ಟಿ, ಸಹ ಕಾರ್ಯದರ್ಶಿ ಕಾಶಿನಾಥ ಮುರಾಳ, ಶ್ರೀ ಖಾಸ್ಗತೇಶ್ವರ ಪೂರ್ವ ಪ್ರಾಥಮಿಕ ಹಾಗೂ ಆಂಗ್ಲ ಮಾಧ್ಯಮ ಪ್ರೌಢ ಶಾಲೆಗಳ ಅಧ್ಯಕ್ಷರಾದ ವೇ.ಮುರುಘೇಶ ವಿರಕ್ತಮಠ, ಕನ್ನಡ ಮಾದ್ಯಮ ಶಾಲೆಯ ಮುಖ್ಯ ಗುರುಮಾತೆ ಶ್ರೀಮತಿ ಲಕ್ಷ್ಮೀ ಮಣೂರ, ಆಂಗ್ಲ ಮಾಧ್ಯಮ ಮುಖ್ಯಗುರುಮಾತೆ ಶ್ರೀಮತಿ ಗೀತಾ ಹಿರೇಮಠ, ಶಾಲಾ ವ್ಯವಸ್ಥಾಪಕ ಎಸ್.ಎ.ಶರಣರ, ಹಾಗೂ ಶಾಲಾ ಆಡಳಿತ ಮಂಡಳಿಯ ಸದಸ್ಯರಾದ ಬಿ.ವ್ಹಿ.ವಿಭೂತಿ, ಆರ್.ಎಂ.ಸಾಲಂಕಿ, ಎಸ್.ಕೆ.ಮುರಾಳ, ಹಾಗೂ ಸಂಘದ ನಿರ್ದೇಶಕರಾದ ಎಂ.ಆರ್.ಕತ್ತಿ, ಕೆ.ಸಿ.ಸಜ್ಜನ, ಆರ್.ಎಂ.ಸಾಲಂಕಿ, ಗುರುಲಿಂಗಪ್ಪಗೌಡ ಪಾಟೀಲ, ಬಿ.ವ್ಹಿ.ಚೊಂಡಿಪಾಟೀಲ, ಪ್ರಭು ಬಿಳೇಭಾವಿ, ಶಿಕ್ಷಕರಾದ ಶ್ರೀಮತಿ ಭುವನೇಶ್ವರಿ ವಸ್ತ್ರದ, ಪರಶುರಾಮ, ಮಾಳಿಂಗರಾಯ ಪೂಜಾರಿ, ಶ್ರೀಮತಿ ಎಸ್.ಎಸ್.ಅಂಗಡಿ, ಮೊದಲಾದವರು ಉಪಸ್ಥಿತರಿದ್ದರು.

ಶಿಕ್ಷಕಿ ವಿಜಯಲಕ್ಷ್ಮೀ ದೊಡಮನಿ ಸ್ವಾಗತಿಸಿದರು.

ಶಿಕ್ಷಕ ಪರಶುರಾಮ ಪಡಸಾಲಿ ವಂದಿಸಿದರು.

## ಪ್ರಧಾನ ಮಂತ್ರಿಗಳ ಇಂಟರ್ನ್‌ಶಿಪ್ ಮತ್ತು ಅಪ್ರೆಂಟಿಸ್‌ಶಿಪ್ ತರಬೇತಿ




ಮೂಡಲಗಿ : ನಾಗನೂರಿನ ಚೈತನ್ಯ ವೆಲ್ಲೇರ ಸೊಸಾಯಿಟಿ(ರಿ)ಯ ಚೈತನ್ಯ ಐಟಿಐ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ ಕೈಗಾ-ರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯಡಿಯಲ್ಲಿ ಮೂಡಲಗಿ ತಾಲೂಕಾ ಐಟಿಐ ತರಬೇತಿ-ದಾರರಿಗೆ ಹಾಗೂ ಉದ್ದಿಮೆದಾರ-ರಿಗೆ ಪ್ರಧಾನ ಮಂತ್ರಿಗಳ ಇಂಟ-ರ್ನ್‌ಶಿಪ್ ಮತ್ತು ಅಪ್ರೆಂಟಿಸ್‌ಶಿಪ್ ತರಬೇತಿ ಕಾರ್ಯಕ್ರಮಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಾಗಾರ ನಡೆಯಿತು. ಮೂಡಲಗಿ ತಾಲೂಕಾ ಅಸಿಸ್ಟಂಟ್ ಅಪ್ರೆಂಟಿಸ್ಶಿಪ್ ಅಡ್ವೈಸರ್ ಮತ್ತು ರಾಯಬಾಗ ಸರ್ಕಾರಿ ಐಟಿಐ ತರಬೇತಿ ಅಧಿಕಾರಿ ಎಸ್.ಎಸ್. ಗುಬ್ಬಿ ಕಾರ್ಯಾಗಾರ ಕಾರ್ಯಕ್ರಮ ಉದ್ಘಾಟಿಸಿ, ಐಟಿಐ ತರಬೇತಿ ಪೂರ್ಣಗೋಳಿಸಿ ನಂತರದಲ್ಲಿ ಕಡ್ಡಾಯವಾಗಿ ಅಪ್ರೆಂಟಿಸ್ ಮುಗಿಸುವುದು ಅತ್ಯವಶ್ಯಕ. ಇದಕ್ಕಾಗಿ ಸರ್ಕಾರ ವಿಶೇಷ ಯೋಜನೆ ಜಾ-ರಿಗೆ ತಂದಿದ್ದು ತರಬೇತಿದಾರರು ವೃತ್ತಿ ನೈಪುಣ್ಯತೆ ಮತ್ತು ಡಿಪ್ಲೋಮಾ ಕೋರ್ಸಿಗೆ ತತ್ಸಮಾನ ವಿದ್ಯಾರ್ಹತೆ ಪಡೆಯುತ್ತಾರೆ. ಜೊತೆಗೆ ಉದ್ಯೋಗ ಪಡೆಯುವಲ್ಲಿ ಚೆಚ್ಚಿನ ಮನ್ನಣೆ ಸಿಗುತ್ತದೆ ಎಂದು ಹೇಳಿದರು.

ಕಾರ್ಯಾಗಾರದಲ್ಲಿ ದಾಲ್ಮೀಯಾ ಸಿಮೆಂಟ್ ಯಾದವಾಡ ಉದ್ದಿಮೆಯ ಎಚ್.ಆರ್ ಮ್ಯಾನೇಜರ ಈರಸಂಗಯ್ಯ ಬಾಗೋಜಿಮಠ, ಭೋರುಕಾ ಪಾವರ್ ಕಾರ್ಪೋರೇಶನ್ ಲಿಮಿಟೆಡ್ ವಿಂಡ್ ಪವರ ಪ್ರೊಜೆಕ್ಟ್ ರಾಯಬಾಗ & ಮೂಡಲಗಿಯ ಎಚ್.ಆರ್ ಮ್ಯಾನೇಜರ ಶ್ರೀಧರ ಮರ್ಲಖಾನೆ, ಲಕ್ಷ್ಮೀಕಾಂತ ಬೋರಗಾಂವ, ಚೈತನ್ಯ ಆಶ್ರಮ ಶಾಲೆಯ ಆಡಳಿತಾಧಿಕಾರಿ ಎಸ್.ಎಮ್. ಕಮದಾಳ, ಚೈತನ್ಯ ಸಂಸ್ಥೆಯ ಅಧ್ಯಕ್ಷ ಉದಯಕುಮಾರ ಜೋಕಿ, ಚೈತನ್ಯ ಬ್ಯಾಂಕಿನ ಅಧ್ಯಕ್ಷ ತಮ್ಮಣ್ಣ ಬಿ. ಕೆಂಚರಡ್ಡಿ, ಗೋಕಾಕ-ಮೂಡಲಗಿ ಪ್ರಾಥಮಿಕ ಶಾಲಾ ಶಿಕ್ಷಕರ ಸಹಕಾರಿ ಸಂಘದ ಅಧ್ಯಕ್ಷ ವಾಯ್. ಬಿ. ಪಾಟೀಲ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆಯ ವಿಜಯ ಎಸ್. ಹೊರಟ್ಟಿ, ಸಂಸ್ಥೆಯ ಆಡಳಿತ ಮಂಡಳಿ, ಪ್ರಾಚಾರ್ಯ ಸುನೀಲ ಕುಳ್ಳೋಳಿ ಉಪಸ್ತಿತರಿದ್ದರು. ತಾಲೂಕಿನ ವಿವಿಧ ಐಟಿಐಗಳ ಪ್ರಾಚಾರ್ಯರು, ಸಿಬ್ಬಂದಿ ಮತ್ತು ತರಬೇತಿದಾರರು ಪಾಲ್ಗೊಂಡಿದ್ದರು.

ಕಾರ್ಯಕ್ರಮದಲ್ಲಿ ಎಸ್.ಎಲ್. ಪೂಜೇರಿ ಸ್ವಾಗತಿಸಿದರು. ಜೆ.ಎಸ್. ಸಮಾಜೆ ವಂದಿಸಿದರು, ಟಿ. ಆರ್. ಝೂರೆ ನೀರೂಪಿಸಿದರು.

## ಕಾರ್ಮಿಕ ಸಚಿವ ಸಂತೋಸ ಎಸ್ ಲಾಡ್ ಅವರ ಪ್ರವಾಸ ಕಾರ್ಯಕ್ರಮ

ಗದಗ : ಕಾರ್ಮಿಕ ಇಲಾಖೆ ಸಚಿವರು ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಸಂತೋಷ ಎಸ್ ಲಾಡ್ ಅವರು ಫೆಬ್ರುವರಿ 18 ರಂದು ಗದಗ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳಲಿದ್ದು ವಿವರ ಈ ಕೆಳಗಿನಂತಿ-ದೆ.

ಫೆಬ್ರುವರಿ 18 ರಂದು ಬೆ 7 ಗಂಟೆಗೆ ಧಾರವಾಡದಿಂದ ಹೊರಟು ಬೆಳಿಗ್ಗೆ 9 ಗಂಟೆಗೆ ಗದುಗಿಗೆ ಆಗಮಿಸುವರು. ಬೆಳಿಗ್ಗೆ 9.30 ರಿಂದ 10.30 ಗಂಟೆಯವರೆಗೆ ಗದಗ ಜಿಲ್ಲೆಯ ಶಾಸಕರು /ಜಿಲ್ಲಾಧಿಕಾರಿ / ಪೊಲೀಸ ವರಿಷ್ಟಾಧಿಕಾರಿ/ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾ-ರಿಗಳೊಡನೆ ಸಭೆ ನಡೆಸುವರು. ಬೆ10.30 ಗಂಟೆಯಿಂದ 11.30 ಗಂಟೆಯವರೆಗೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಗದಗ ಜಿಲ್ಲಾ ಕಾರ್ಮಿಕ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಸುವರು. ಬೆ 11.30 ಗಂಟೆಯಿಂದ ಮಧ್ಯಾಹ್ನ 12 ಗಂಟೆಯವರೆಗೆ ಮಾಲೀಕ ವರ್ಗದ ಸಂಘಟನೆಗಳ/ ಆಡಳಿತ ವರ್ಗದವರ ಸಭೆ ನಡೆಸುವರು. ಮಧ್ಯಾಹ್ನ 12 ರಿಂದ 12.30 ಗಂಟೆಯವರೆಗೆ ಕಾರ್ಮಿಕ ಸಂಘಟನೆಗಳ ಸಭೆ ನಡೆಸುವರು. ನಂತರ ಪಕ್ಷದ ಕಚೇ-ರಿಗೆ ಭೇಟಿ ನೀಡುವರು. ಸಂಜೆ 5 ಗಂಟೆಗೆ ಗದಗಿನಿಂದ ಹೊರಟು ರಾತ್ರಿ 7 ಗಂಟೆಗೆ ಧಾರವಾಡಕ್ಕೆ ಪ್ರಯಾಣ ಮಾಡುವರು ಎಂದು ಸಚಿವರ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

## ದಾನಿಗೊಂಡ ನರ್ಸಿಂಗ್ ಕಾಲೇಜಿನಲ್ಲಿ ಕಾರ್ಯಗಾರ ರೋಗಿನ ಜೀವ ಉಳಿಸಿದಷ್ಟು ಪುಣ್ಯ ಬೇರೆ ಇಲ್ಲ



ತೇರದಾಳ-ಇತ್ತಿಚಿನ ದಿನಗಳಲ್ಲಿ ಹೃದಯ ಖಾಯಿಲೆ ಹೆಚ್ಚಾಗಿ ಕಾಣುತ್ತಿದ್ದೇವೆ. ಅದರಲ್ಲೂ ಯುವಕರು ಹೆಚ್ಚಾಗಲಿ ಜೀವ ಕಳೆದುಕೊಳ್ಳುತ್ತಿರುವುದು ನೋವಿನ ಸಂಗತಿಯಾಗಿದೆ. ಆದ್ದರಿಂದ ಹೃದಯ ಖಾಯಿಲೆ ಬಗ್ಗೆ ನಿರ್ಲಕ್ಷ್ಯ ಮಾಡಬೇಡಿ ಎಂದು ಬೆಂಗಳೂರಿನ ಡಾ. ಗೋಪಿನಾಥ ಹೇಳಿದರು.

ಇಲ್ಲಿನ ಎಸ್‌ಡಿಎಂ ಟ್ರಷ್ಟನ ದಾನಿಗೊಂಡ ನರ್ಸಿಂಗ್ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಸುಧಾರಿತ ಹೃದಯ ಜೀವನ ಬೆಂಬಲ ಕಾರ್ಯಾಗಾರದಲ್ಲಿ ವಿಶೇಷ ಉಪನ್ಯಾಸ ನೀಡಿದರು.

ಬೇಸಿಕ್ ಲೈಫ್ ಸಪೋರ್ಟ್(ಬಿಎಲ್-ಎಸ್) ಹಾಗೂ ಅಡ್ವಾನ್ಸ್ ಕ್ಯಾಡಿಯಾರ್ಕ್ ಲೈಫ್ ಸಪೋರ್ಟ್(ಎಸಿಎಲ್‌ಎಸ್) ಕುರಿತು ಆರೋಗ್ಯ ಕಾರ್ಯಕರ್ತರಿಗೆ ಸರಿಯಾದ ಮಾಹಿತಿ ಇರಬೇಕು. ಹಾಗೂ ಕಾರಣ ಈ ಎರಡು ವಿಧಾನಗಳ ಕೌಶಲ್ಯದಿಂದ ರೋಗಿಯ ಜೀವ ಉಳಿಸಬಹುದಾಗಿದೆ ಎಂದು ಹೇಳಿದರು. ವಿಜಯಪುರದ ಡಾ. ಸೈಯದ್, ಹೈದರಾಬಾದನ ಡಾ. ಮಹಾಲಿಂಗ, ಬೆಂಗಳೂರಿನ ಡಾ. ದೀಪಕ. ಕೆ., ನಾವು ಆರೈಕೆ ಮಾಡುವ ಮೊದಲು ಖಾಯಿಲೆಯ ವೇಗ ಮತ್ತು ಕಾರಣ ಅರಿಯಬೇಕೆಂದು ಕಾರ್ಯಾಗಾರದಲ್ಲಿ ಅತಿಥಿ ಉಪನ್ಯಾಸ ನೀಡಿದರು. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಡಾ. ಪುಷ್ಪದಂತ ದಾನಿಗೊಂಡ, ಮೆಡಿಕಲ್ ಕಾಲೇಜ್ ಪ್ರಾಚಾರ್ಯ ಡಾ. ಪಿ.ಬಿ. ಅಪರಾಜ, ನರ್ಸಿಂಗ್ ಕಾಲೇಜ್ ಪ್ರಾಚಾರ್ಯ ಡಾ. ಅನ್ನಪೂರ್ಣ.ಎಸ್ ಇನ್ನಿತರಿದ್ದರು.

******

## ಸತ್ಕಾರ್ಯದಿಂದ ಮನುಷ್ಯನ ಬದುಕು ಸಾರ್ಥಕ-ಚನ್ನಮಲ್ಲಿಕಾರ್ಜುನ ಶ್ರೀಗಳು

ವಿಜಯಪುರ: ದೇಹ ಶಾಶ್ವತವಲ್ಲ, ಆತ್ಮಶುದ್ಧವಾಗಿರುವಂತೆ ಬದುಕಿದಾಗ ಮಾತ್ರ ಮನುಷ್ಯನ ಸೇವೆ ಅಮರವಾಗುತ್ತದೆ. ಬದುಕಿನುದ್ದಕ್ಕೂ ಸತ್ಕಾರ್ಯಗಳನ್ನು ನೆರವೇರಿಸುತ್ತಾ ಇದ್ದಾಗ

ಮನುಷ್ಯನ ಜನ್ಮ ಸಾರ್ಥಕವಾಗುತ್ತದೆ ಎಂದು ಮ ಘ ಚ ಚನ್ನಮಲ್ಲಿಕಾರ್ಜುನ ಶಿವಾಚಾರ್ಯರು ಹೇಳಿದರು.

ಶನಿವಾರ ಸಂಜೆ ತಾಲೂಕಿನ ನಾಗಠಾಣ ಗ್ರಾಮದ ಉದಯಲಿಂಗೇಶ್ವರ ಮಠದಲ್ಲಿ ಮಹಾಶಿವರಾತ್ರಿ ಜಾತ್ರೆಯ ನಿಮಿತ್ತ ಹಮ್ಮಿಕೊಂಡ ದಾನಮ್ಮದೇವಿಯ ಪುರಾಣ ಪ್ರವಚನದ ದಿವ್ಯ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ಮಹಾಶಿವರಾತ್ರಿ ನಿಮಿತ್ತ ಹಮ್ಮಿಕೊಂಡ ಈ ತುಲಾಭಾರ ಕಾರ್ಯಕ್ರಮವು ಜ್ಯೋತಿರ್ಲಿಂಗಗಳಿಗೆ ಪೂಜೆ ಮಾಡಿದಕ್ಕೆ ಸಮ. ಕುಟುಂಬವು ಶಾಂತಿ, ಸಹಕಾರ, ಪ್ರೀತಿಯಿಂದ ಇರಬೇಕಾದರೆ ದ್ವೇಷವನ್ನು ಬಿಟ್ಟು ಪ್ರೀತಿ ಮಾಡುವುದನ್ನು ಕಲಿಯಬೇಕು ಅಂದಾಗ ಈ ಜಗತ್ತು ಸ್ವರ್ಗವಾಗುತ್ತದೆ ಎಂದರು.

ಕರ್ಜಗಿಯ ಶಿವಾನಂದ ಶಾಸ್ತ್ರಿ ಮಾತನಾಡಿ, ನಾವು ಗಳಿಸಿದ ಆಸ್ತಿ, ಅಂತಸ್ತು, ಬೆಳ್ಳಿ, ಬಂಗಾರ, ಇವುಗಳು ಯಾವುದು ಶಾಶ್ವತವಲ್ಲ. ಬದಲಾಗಿ ಗಳಿಸಿದ ಹಣವನ್ನು ದಾನ, ಧರ್ಮ, ಉಪಕಾರ ಮಾಡುವುದರ ಮೂಲಕ ಈ ಸಮಾಜದ ಋಣವನ್ನು ತೀರಿಸಬೇಕು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಸುಭಾಸ ಬಂಡೆ ಪರಿವಾರದಿಂದ ಶಿವಾಚಾರ್ಯರಿಗೆ ನಾಣ್ಯಗಳಿಂದ ತುಲಾಭಾರ ಸೇವೆ ನೆರವೇರಿತು. ರಮೇಶ ಹಳ್ಳಿ ಮಹಾಪ್ರಸಾದ ಸೇವೆ ಸಲ್ಲಿಸಿದರು. ಶರಣಬಸು ಪೂಜಾರಿ, ಸಂತೋಷ ಬಂಡೆ, ಬಾಬು ಕೋಲಾರ, ಈರಣ್ಣ ಬಂಡೆ, ಸುರೇಶ ಕತ್ನಳ್ಳಿ, ಶ್ರೀಧರ ಬಂಡೆ, ರಾವುತಪ್ಪ ಬಿಜ್ಜರಗಿ,ಮಹಾದೇವ ಲೋಣಿ ಸೇರಿದಂತೆ ಗ್ರಾಮದ ಅಪಾರ ಸಂಖ್ಯೆಯ ತಾಯಂದಿರು, ಹಿರಿಯರು, ಮಕ್ಕಳು ಭಾಗವಹಿಸಿದ್ದರು.

### ಗಡಿ ಭಾಗದಲ್ಲಿ ಪ್ರಾ ಗವಿಮಠರ ಕನ್ನಡ ಕೈಂಕರ್ಯ ಶ್ಲಾಘನೀಯ: ಡಾ.ಸಿ ಸೋಮಶೇಖರ್

## ಬಿಎಸ್ ಗವಿಮಠ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನದಿಂದ ಪ್ರಶಸ್ತಿ ವಿತರಣೆ

ಬೆಳಗಾವಿ 16 .ಗಡಿಭಾಗದಲ್ಲಿ ಕನ್ನಡ ಸಾಂಸ್ಕೃತಿಕ ಚಟುವಟಿಕೆಗಳು ನಿರಂತರವಾಗಿ ಪೋಷಿಸಿಕೊಂಡು ಹೋಗುವುದು ಅಗತ್ಯವಾಗಿದೆ. ಸರ್ಕಾರದ ಯಾವುದೇ ಅನುದಾನವಿಲ್ಲದೆ ಅನೇಕ ಕನ್ನಡಪರ ಸಂಘ ಸಂಸ್ಥೆಗಳು ಇಲ್ಲಿ ಕಾರ್ಯನಿರ್ವಹಿಸುತ್ತಿರುವುದು. ಕನ್ನಡದ ಪ್ರೀತಿಯೇ ಇದಕ್ಕೆ ಕಾರಣ. ಸರ್ಕಾರ ಈ ಎಡೆಗೆ ಗಮನ ಹರಿಸಬೇಕು ಎಂದು ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಸೋಮಶೇಖರ್ ಅವರು ಹೇಳಿದರು.

ಬೆಳಗಾವಿಯ ಕನ್ನಡ ಭವನದಲ್ಲಿ ಜರುಗಿದ ಬಿಎಸ್ ಗವಿಮಠ ಸಾಂಸ್ಕೃತಿಕ ಪ್ರತಿಷ್ಠಾನದ ಪ್ರಶಸ್ತಿ ವಿತರಣಾ ಸಮಾರಂಭ ದಲ್ಲಿ ಅವರು ನುಡಿದರು.

12ನೇ ಶತಮಾನ ಕಾಲಘಟ್ಟದಲ್ಲಿ ಶರಣರ ಕನ್ನಡವನ್ನು ಕಟ್ಟುವ ಬೆಳೆಸುವ ಮಹತ್ವದ ಕಾರ್ಯ ಮಾಡಿದರು. ಅವರ ಕೊಡುಗೆ ಅನನ್ಯ. ಆ ಪರಂಪರೆ ಎಂದಿಗೂ ಅನವರತವಾಗಿ ಮುಂದುವ-ರಿದುಕೊಂಡು ಬಂದಿದೆ. ಬಿಎಸ್ ಗವಿಮಠರ ಅಭಿಮಾನಿಗಳು ಸಾಹಿತ್ಯ ಪ್ರತಿಷ್ಠಾನವನ್ನು ಹುಟ್ಟುಹಾಕುವ ಮೂಲಕ ಕನ್ನಡ ಸಾಹಿತ್ಯಕ ಸಾಂಸ್ಕೃತಿಕ ಸೇವೆ ಗೈದ ಸಾಧಕರಿಗೆ ಪ್ರಶಸ್ತಿಯನ್ನು ನೀಡುತ್ತಿರುವುದು ಅಭಿನಂದನೀಯ. ಈ ಸಾಂಸ್ಕೃತಿಕ ಪ್ರತಿಷ್ಠಾನವು ರಚನಾತ್ಮಕ ಕೆಲಸ ಮಾಡುತ್ತ ಮತ್ತಷ್ಟು ವಿಸ್ತರಿಸಲಿ. ಗವಿಮಠರೂ ಎಸ್



ಡಿ ಇಂಚಲ ರಂತಹ ಮಹಾಕವಿಗಳನ್ನ ಚಿರಸ್ಥಾಯಿಯಾಗಿ ಉಳಿಯುವಂತೆ ಮಾಡಿದ್ದಾರೆ. ಗಡಿಭಾಗದಲ್ಲಿರುವ ಕನ್ನಡ ಕೊಡುಗೆ ಅನನ್ಯ. ಇಂದು ಪ್ರತಿಷ್ಠಾನವು ನಿಜವಾದ ಸಾಧಕರನ್ನು ಗುರುತಿಸಿ ಪ್ರಶಸ್ತಿಯನ್ನು ನೀಡುತ್ತಿರುವುದು ಅಭಿಮಾನ ತಂದಿದೆ. ಈ ಸೇವೆ ನಿರಂತರವಾಗಿ ಮುಂದುವರಿಯಲಿ ಎಂದು ಹೇಳಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಖ್ಯಾತ ವೈದ್ಯರಾದ ಡಾ. ಎಚ್ ಬೀ ರಾಜಶೇಖರ್ ಅವರು ಮಾತನಾಡುತ್ತಾ, ಗವಿಮಠರ ಸಾಂಸ್ಕೃತಿಕ ಮನಸ್ಸು ಬಹುದೊಡ್ಡದು. ಕವಿ ಎಚ್ ಡಿ ಇಂಚಲ್ ಹಾಗೂ ರಂಗ ಕಲಾವಿದರಾಗಿದ್ದ ಏಣಗಿ ಬಾಳಪ್ಪ ರಂತಹ ಮಹನೀಯರನ್ನು ಜೀವಂತವಾಗಿ ಉಳಿಸಿದ ಶ್ರೇಯಸ್ಸು ಇವ-ರಿಗೆ ಸಲ್ಲುತ್ತದೆ.

ಕೆಎಲ್ಇ ಸಂಸ್ಥೆಯ ಇತಿಹಾಸಕಾರರಾಗಿ ಅದರ ಸಾಂಸ್ಕೃತಿಕ ಕೊಡುಗೆ ದಾಖಲಿಸುವ ಮಹತ್ವದ ಕಾರ್ಯ ಮಾಡಿರುವ ಗವಿಮಠರ ಸೇವೆ ಶ್ಲಾಘನೀಯ. ಅವರ ಹೆಸರಿನ ಈ ಪ್ರತಿಷ್ಠಾನವು ಜನಪರವಾದಂತಹ ಕೆಲಸ ಕಾರ್ಯಗಳನ್ನು ನಿರಂತರವಾಗಿ ಗಡಿಭಾಗದಲ್ಲಿ ಮುಂದುವರಿಸಿಕೊಂಡು ಹೋಗಲಿ ಎಂದು ಹೇಳಿದರು.

ದಿವ್ಯ ಸಾನಿಧ್ಯ ವಹಿಸಿದ್ದ ಕಾರಂಜಿ ಮಠದ ಪೂಜ್ಯ ಶ್ರೀ ಗುರುಸಿದ್ಧ ಮಹಾಸ್ವಾಮೀ-ಜಿಯವರು ಆಶೀರ್ವಚನ ನೀಡಿದರು. ಡಾ. ವಿ ಎಸ್ ಮಾಳಿ ಅಭಿನಂದನಪರ ಮಾತನಾಡಿದರು. ಪ್ರತಿಷ್ಠಾನದ ಅಧ್ಯಕ್ಷರಾದ ಪ್ರೊ ಎಲ್ ವಿ ಪಾಟೀಲ್ ಅಧ್ಯಕ್ಷೀಯ ನುಡಿಗಳ ನಾಡಿದರು.

ಇದೆ ಸಂದರ್ಭದಲ್ಲಿ ಹಿರಿಯ ವೈದ್ಯರಾದ ಡಾ. ದಯಾನಂದ ನೂಲಿ ಅವರಿಗೆ ಶರಣ ಸಾಹಿತ್ಯಸಿರಿ ಪ್ರಶಸ್ತಿ, ಡಾ ಗುರುದೇವಿ ಹುಲೆಪ್ಪನವರಮಠ ಅವ-ರಿಗೆ ಸಾಹಿತ್ಯ ಸಿರಿ ಪ್ರಶಸ್ತಿ, ಜಾಕಿರ್ ನದಾಫ್ ಅವರಿಗೆ ರಂಗ ಚೇತನ ಪ್ರಶಸ್ತಿ , ಸಂತೋಷ ನಾಯಿಕ್ ಅವರಿಗೆ ಕಾವ್ಯ ಸಿರಿ ಪ್ರಶಸ್ತಿ ಗಳನ್ನು ಪ್ರತಿಷ್ಠಾನದಿಂದ ನೀಡಿ ಗೌರವಿಸಲಾಯಿತು. ಇದೆ ಸಂದರ್ಭದಲ್ಲಿ ಡಾ ಅಶೋಕ್ ನರೋಡೆ ಅವರು ಸಂಪಾದಿಸಿದ ಡಾ.ಪ್ರಭಾಕರ ಕೋರೆಯವರ ಅಭಿನಂದನ ಗ್ರಂಥ ಸಮಾಜಭೂಷಣದ ದ್ವಿತೀಯ ಮುದ್ರಣವನ್ನು ಬಿಡುಗಡೆಗೊಳಿಸಲಾಯಿತು. ನಯನಾ ಗಿರಿಗೌಡರ್ ಪ್ರಾರ್ಥಿಸಿದರು. ಡಾ. ಪಿ.ಜಿ. ಕೆಂಪಣ್ಣವರ್ ಸ್ವಾಗತಿಸಿದರು. ಬಸವರಾಜ್ ಗಾರ್ಗಿ ನಿರೂಪಿಸಿದರು. ಅಕ್ಬರ್ ಸನದಿ ವಂದಿಸಿದರು.

ಪ್ರಾಚಾರ್ಯ ಬಿ ಎಸ್ ಗವಿಮಠ, ಡಾ. ಬಸವರಾಜ್ ಜಗಜಂಪೀ, ಎಂ ಎಸ್ ಇಂಚಲ ಡಾ ಅಶೋಕ್ ನರೋಡೆ, ಯ. ರು. ಪಾಟೀಲ್, ಏಣಗಿ ಸುಭಾಷ್, ಎಫ್ ವಿ ಮಾನ್ವಿ, ಡಾ ಎಂ ವಿ ಜಾಲಿ ಡಾ ಇಚ್ಚಂಗಿ, ಡಾ ಎಂಟೆತ್ತಿನವರ ಬೆಂಗಳೂರಿನ ಕನ್ನಡ ಪರ ಹೋರಾಟಗಾರ ಶ್ರೀ ಪಾಲನೇತ್ರ ಶ್ರೀ ಗಾಂಜಿ, ಶಾಂತಾದೇವಿ ಹುಲೆಪ್ಪನವರಮಠ , ನೀಲಗಂಗಾ ಚರಂತಿಮಠ, ಡಿಎಸ್ ಚೌಗಲಾ ಪ್ರತಿಷ್ಠಾನದ ಸದಸ್ಯರು ಉಪಸ್ಥಿತರಿದ್ದರು.

*********

### ಫೆ. 21 ರಂದು ಮಾಹಿತಿ ಹಕ್ಕು ಅಧಿನಿಯಮ-2005 ಕುರಿತು ಕಾರ್ಯಾಗಾರ

ಧಾರವಾಡ: ಧಾರವಾಡ ಜಿಲ್ಲೆಯ ಎಲ್ಲ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಹಾಗೂ ಜಿಲ್ಲೆಯ ಎಲ್ಲ ತಹಶೀಲ್ದಾರರಿಗೆ ಫೆಬ್ರವರಿ 21 ರಂದು ಬೆಳಿಗ್ಗೆ 11 ಗಂಟೆಗೆ ಧಾರವಾಡ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಮಾಹಿತಿ ಹಕ್ಕು ಅಧಿನಿಯಮ-2005 ರ ಕುರಿತು ಕಾರ್ಯಾಗಾರವನ್ನು ಆಯೋಜಿಸಲಾಗಿದೆ.

ಎಲ್ಲ ಜಿಲ್ಲಾ ಮಟ್ಟದ ಅಧಿಕಾ-ರಿಗಳು ಹಾಗೂ ಅವರ ಕಚೇರಿಯ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಮತ್ತು ಪ್ರಥಮ ಮೇಲ್ಮನವಿ ಪ್ರಾಧಿಕಾ-ರಿಯಾದವರು ತಮ್ಮ ಕಚೇರಿಯ ಮಾಹಿತಿ ಹಕ್ಕು ವಿಷಯನಿರ್ವಾಹಕರೊಂದಿಗೆ ಫೆಬ್ರವರಿ 21 ರ ಬೆಳಿಗ್ಗೆ 10:45 ಗಂಟೆಗೆ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಕಾರ್ಯಾಗಾರದಲ್ಲಿ ಭಾಗವಹಿಸಲು ತಪ್ಪದೆ ಹಾಜರಿದ್ದು, ಮಾಹಿತಿ ಹಕ್ಕು ಅಧಿನಿಯಮದ ಬಗ್ಗೆ ತಿಳುವಳಿಕೆ ಪಡೆದುಕೊಳ್ಳಲು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


**ಕರ್ನಾಟಕ ಅರಣ್ಯ ಇಲಾಖೆ**

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಬೆಳಗಾವಿ ವಿಭಾಗ, ಬೆಳಗಾವಿ.
ದೂರವಾಣಿ : 0831-2467071, ಇ-ಮೇಲ್: dcfbgm@gmail.com

ಸಂಖ್ಯೆ : ಸ.ಅ.ಸಂ./ತಾಂ.ಸ./ಬೆ.ವಿ./ಅ.ಈ.ಅ./ಟೆಂಡರ್/2024-25/1375
ದಿನಾಂಕ : 17-02-2025

**ಟೆಂಡರ್ ಪ್ರಕಟಣೆ**

ಟೆಂಡರ್‌ದಾರರು ಹಾಗೂ ಬಿಡರ್‌ಗಳ ಅವಗಾಹನೆಗಾಗಿ ಈ ಮೂಲಕ ಪ್ರಕಟಿಸುವುದೇನೆಂದರೆ, **ಸನ್ ಬೆಳಗಾವಿ (ಪ್ರಾದೇಶಿಕ) ವಿಭಾಗದ, ಬೆಳಗಾವಿ ಉಪ ವಿಭಾಗದ ವ್ಯಾಪ್ತಿಯಲ್ಲಿ ಬರುವ ಬೆಳಗಾವಿ, ಕಾಕತಿ, ನೇಸರಗಿ, ಹುಕ್ಕೇರಿ ಹಾಗೂ ಗುಜನಾಳ ವಲಯಗಳಲ್ಲಿ ಸನ್ 2024-25 ನೇ ಸಾಲಿನಲ್ಲಿ ವಿವಿಧ ಯೋಜನೆ ಗಳಡಿ ಕೈಗೊಳ್ಳುವ ಕಾಮಗಾರಿಗಳಿಗೆ Indent No. : KFD/2024-25/OW/WORK_INDENT 17417 ನೇದ್ದಕ್ಕೆ ದಿನಾಂಕ : 28-02-2025 ರಂದು ಟೆಂಡರ್‌ನ್ನು ಕರೆಯಲಾಗಿದೆ.**

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಈ ಕೆಳ ಸಹಿದಾರರ ಕಛೇರಿಗೆ ರಜಾ ದಿನಗಳನ್ನು ಹೊರತುಪಡಿಸಿ ಸಂಪರ್ಕಿಸಬಹುದಾಗಿದೆ.

ಸಹಿ/- ಟೆಂಡರ್ ಆಹ್ವಾನಿಸುವ ಪ್ರಾಧಿಕಾರ,
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಳಗಾವಿ ವಿಭಾಗ,
ಬೆಳಗಾವಿರವರ, ತಾಂತ್ರಿಕ ಸಹಾಯಕರು.

ಡಿಐಪಿಆರ್/
ಬೆಳಗಾವಿ/1697/ಮಣಿಪಾಲ್/2024-25


BELAGINA SURYODHYA KANNADA DAILY MORNING Editor, Printer, PUblisher and Owned By GURURAJ IRAPPA KADAM Plot No.2743 NEAR KEB POWER HOUSE RAMTEERTH NAGAR, SHIVAJI NAGAR BELAGAVI-590016
DIST-BELAGAVI,STATE KARNATAKA PRINTED At M/S LAXMI PRINTERS, No. 627,Auto Nagar,Belagavi,Dist- Belagavi Karnataka, RNI No. KARKAN/2019/77640, Volume : 07, Issue : 09 Postal Reg No. PMG/KA/NK/BM/135/25-27 / POST AT Vantamury Colony Post Office